Swabhimani Sahakari
# ಸ್ವಾಭಿಮಾನಿ ಸಹಕಾರಿ
Pages - 28, ₹12
Volume -14
Issue - 05
May - 2017
ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ
ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ




▸▸ ಸೌಹಾರ್ದ ಸಹಕಾರಿಗಳ ಸಂಖ್ಯೆ : 4005 ▸▸ 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 1031

# ಆದಾಯ ತೆರಿಗೆ ಕಾಯ್ದೆ ಕಲಂ 269ಎಸ್‌ಟಿ : ಸಹಕಾರಿಗಳು ಆತಂಕ ಪಡುವ ಅಗತ್ಯವಿಲ್ಲ

## ಕಾನೂನು ವ್ಯಾಪ್ತಿಯಲ್ಲಿಯೇ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸಾಧ್ಯ. ಕಾಯ್ದೆಯ ಆಶಯ ಹಾಗೂ ಕಲಂನ ವಿವರಣೆಗಳನ್ನು ಅರ್ಥ ಮಾಡಿಕೊಂಡು ಎಚ್ಚರಿಕೆಯಿಂದ ಕಾರ್ಯನಿರ್ವಹಿಸುವುದು ಅಗತ್ಯ



ಆತ್ಮೀಯ ಸಹಕಾರಿ ಬಂಧುಗಳೇ,

ಸಂಯುಕ್ತ ಸಹಕಾರಿಯ ವತಿಯಿಂದ ತಮ್ಮೆಲ್ಲರಿಗೂ ರಾಮಾನುಜಾಚಾರ್ಯ ಜಯಂತಿ, ಕಾರ್ಮಿಕರ ದಿನಾಚರಣೆ ಹಾಗೂ ಬುದ್ಧ ಪೂರ್ಣಿಮಾದ ಶುಭಾಷಯಗಳು.

ದೇಶದಲ್ಲಿ ಆರ್ಥಿಕ ಅಭಿವೃದ್ಧಿಯ ವೇಗ ಹೆಚ್ಚಿಸುವ ಹಿನ್ನೆಲೆಯಲ್ಲಿ ಕಪ್ಪು ಹಣದ ಚಲಾವಣೆಯನ್ನು ನಿಗ್ರಹಿಸುವ ಹಾಗೂ ನಗದು ವ್ಯವಹಾರವನ್ನು ಕಡಿಮೆಗೊಳಿಸುವ ದೃಷ್ಟಿಯಿಂದ ಕೇಂದ್ರ ಸರಕಾರ ಅನೇಕ ಕ್ರಮಗಳನ್ನು ಅನುಸರಿಸುತ್ತಿದೆ. ನೋಟುಗಳ ಅಮಾನ್ಯತೆ, ಎಲೆಕ್ಟ್ರಾನಿಕ್ ಯಂತ್ರಗಳ ಮೂಲಕವೇ ಹಣಕಾಸಿನ ವ್ಯವಹಾರಗಳಿಗೆ ಆದ್ಯತೆ. ಇವುಗಳ ಜೊತೆಗೆ ಆದಾಯ ತೆರಿಗೆ ಕಾಯ್ದೆ ಕಲಂ 269 ಎಸ್‌ಟಿ ಏಪ್ರಿಲ್ 01 ರಿಂದ ಜಾರಿಗೆ ಬಂದಿದೆ. ಈ ಕಲಂನ ಪ್ರಕಾರ **"ಒಬ್ಬ ವ್ಯಕ್ತಿ ಒಂದು ದಿನದಲ್ಲಿ ಒಂದೇ ವ್ಯವಹಾರಕ್ಕೆ ಸಂಬಂಧಿಸಿದಂತೆ"** 2 ಲಕ್ಷ ರೂ.ಗಳಿಗೂ ಹೆಚ್ಚು ಹಣವನ್ನು ನಗದಾಗಿ ಸ್ವೀಕರಿಸುವಂತಿಲ್ಲ. ಸಹಕಾರಿ ಸಂಸ್ಥೆಗಳು ತಮ್ಮ ಬ್ಯಾಂಕ್ ಖಾತೆಯಲ್ಲಿ ಎಷ್ಟು ಹಣವನ್ನಾದರೂ ಜಮಾ ಮಾಡಬಹುದು. ಎಷ್ಟು ಹಣವನ್ನಾದರೂ ಡ್ರಾ ಮಾಡಬಹುದು. ಆದರೆ, ಸಹಕಾರಿ ಸಂಸ್ಥೆಯಲ್ಲಿ ಒಬ್ಬ ಸದಸ್ಯನು ತನ್ನ ಉಳಿತಾಯ ಖಾತೆಯಲ್ಲಿ ರೂ. 2 ಲಕ್ಷಕ್ಕೂ ಹೆಚ್ಚು ಹಣವನ್ನು ನಗದಾಗಿ ಜಮಾ ಮಾಡುವಂತಿಲ್ಲ ಮತ್ತು ರೂ. 2 ಲಕ್ಷಕ್ಕೂ ಹೆಚ್ಚು ಹಣವನ್ನು ಡ್ರಾ ಮಾಡುವಂತಿಲ್ಲ. ಈ ರೀತಿ ಮಾಡಿರುವುದು ಕಂಡು ಬಂದರೆ ಜಮಾ ಮಾಡಿದ ಯಾ ಡ್ರಾ ಮಾಡಿದ ಹಣದ ಮೊತ್ತದಷ್ಟೇ ಹಣವನ್ನು ದಂಡವನ್ನಾಗಿ ಪಾವತಿಸಬೇಕಾಗುತ್ತದೆ. ಈ ಕಾಯ್ದೆ ಏಪ್ರಿಲ್ 01 ರಿಂದ ಜಾರಿಗೆ ಬಂದಿದೆ. ಈ ಕಾಯ್ದೆ ತಿದ್ದುಪಡಿ ಬಗ್ಗೆ ಸಹಕಾರಿಗಳು ತಿಳಿದುಕೊಂಡು ಎಚ್ಚರಿಕೆಯಿಂದ ವ್ಯವಹಾರಗಳನ್ನು ಮಾಡುವುದು ಸದ್ಯದ ಅನಿವಾರ್ಯತೆ ಹಾಗೂ ಅಗತ್ಯತೆ.

ಆದಾಯ ತೆರಿಗೆ ಕಾಯ್ದೆ ಕಲಂ 269 ಎಸ್‌ಟಿ ನಲ್ಲಿ ಸರಕಾರ, ಅಂಚೆ ಕಛೇರಿಗಳು, ಬ್ಯಾಂಕಿಂಗ್ ಕಂಪನಿಗಳು, ಬ್ಯಾಂಕ್‌ಗಳು ಹಾಗೂ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ವಿನಾಯಿತಿ ನೀಡಲಾಗಿದೆ. ಕ್ರೆಡಿಟ್ ಸಹಕಾರ ಸಂಸ್ಥೆಗಳಿಗೂ ಸಹ ವಿನಾಯಿತಿ ನೀಡಬೇಕೆಂದು ಕೇಂದ್ರ ಹಣಕಾಸು ಸಚಿವರನ್ನು ಮನ ಒಲಿಸಲು ಸಂಯುಕ್ತ ಸಹಕಾರಿಯ ವತಿಯಿಂದ ಕೇಂದ್ರ ಹಣಕಾಸು ಸಚಿವರಲ್ಲಿ ನಿಯೋಗ ಹೋಗಿ ಮನವರಿಕೆ ಮಾಡಿಕೊಡಲು ಪ್ರಯತ್ನಿಸಲಾಗಿದೆ. ಬೇರೆ ರಾಜ್ಯಗಳ ಮತ್ತು ರಾಷ್ಟ್ರದ ಇತರೆ ಸಹಕಾರ ಸಂಸ್ಥೆಗಳಿಂದ ಪ್ರಯತ್ನಗಳು ಕೇಂದ್ರ ಮಟ್ಟದಲ್ಲಿ ನಡೆಯುತ್ತಿವೆ. ಅದು ಫಲಕಾರಿಯಾಗುವ ನಿರೀಕ್ಷೆಗಳು ಸಹ ಇವೆ.

ಈ ಬಗ್ಗೆ ಸಹಕಾರಿ ಸಂಸ್ಥೆಗಳು ಆತಂಕ ಪಡಬೇಕಾದ ಅವಶ್ಯಕತೆ ಇಲ್ಲ. ಕಾನೂನಿನ ಚೌಕಟ್ಟಿನೊಳಗೆ ಕಾರ್ಯ ನಿರ್ವಹಿಸಲು ಸಾಧ್ಯವಿದೆ. ಕಾರ್ಯ ನಿರ್ವಹಿಸೋಣ. ಕಾರ್ಯ ನಿರ್ವಹಿಸುವ ವಿಧಾನಗಳ ಬಗ್ಗೆ ಸಂಯುಕ್ತ ಸಹಕಾರಿ ರಾಜ್ಯದಾದ್ಯಂತ ಸಹಕಾರಿಗಳಿಗೆ ತಿಳುವಳಿಕೆ ನೀಡುವ ಜಾಗೃತಿ ಶಿಬಿರಗಳನ್ನು ಹಮ್ಮಿಕೊಳ್ಳುತ್ತಿದೆ. ಈ ಜಾಗೃತಿ ಶಿಬಿರಗಳಲ್ಲಿ ಭಾಗವಹಿಸಿ, ಮಾಹಿತಿ ಪಡೆದುಕೊಳ್ಳಿ, ಲೋಪವಾಗದಂತೆ ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸಿ, ಈ ಸವಾಲನ್ನು ಸ್ವೀಕರಿಸಿ ದೇಶದ ಅರ್ಥ ವ್ಯವಸ್ಥೆಯ ಸುಧಾರಣೆಯಲ್ಲಿ ನಮ್ಮ ಅವಕಾಶವೆಂದು ಪರಿಗಣಿಸಿ, ಸೌಹಾರ್ದ ಸಹಕಾರಿಗಳ ಕಾರ್ಯ ದಕ್ಷತೆಯನ್ನು ಸಾಬೀತು ಪಡಿಸುವಿರೆಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ.

**ಹೆಚ್.ವಿ.ರಾಜೀವ,** ಉಪಾಧ್ಯಕ್ಷರು

> ಆದಾಯ ತೆರಿಗೆ ಕಾಯ್ದೆ ಕಲಂ 269ಎಸ್‌ಟಿ ನಲ್ಲಿ ಸರಕಾರ, ಅಂಚೆ ಕಛೇರಿಗಳು, ಬ್ಯಾಂಕಿಂಗ್ ಕಂಪನಿಗಳು, ಬ್ಯಾಂಕ್‌ಗಳು ಹಾಗೂ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ವಿನಾಯಿತಿ ನೀಡಲಾಗಿದೆ. ಕ್ರೆಡಿಟ್ ಸಹಕಾರ ಸಂಸ್ಥೆಗಳಿಗೂ ಸಹ ವಿನಾಯಿತಿ ನೀಡಬೇಕೆಂದು ಕೇಂದ್ರ ಹಣಕಾಸು ಸಚಿವರನ್ನು ಮನ ಒಲಿಸಲು ಸಂಯುಕ್ತ ಸಹಕಾರಿಯ ವತಿಯಿಂದ ಕೇಂದ್ರ ಹಣಕಾಸು ಸಚಿವರಲ್ಲಿ ನಿಯೋಗ ಹೋಗಿ ಮನವರಿಕೆ ಮಾಡಿಕೊಡಲು ಪ್ರಯತ್ನಿಸಲಾಗಿದೆ.

## ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

**ಶ್ರೀ ಹೆಚ್.ವಿ.ರಾಜೀವ**
ಗೌರವ ಅಧ್ಯಕ್ಷರು

**ಶ್ರೀ ಎಸ್.ಆರ್.ಸತೀಶಚಂದ್ರ**
ಗೌರವ ಸದಸ್ಯರು

**ಶ್ರೀ ಶರಣಗೌಡ ಜಿ. ಪಾಟೀಲ್**
ಸಂಪಾದಕರು

**ಶ್ರೀ ವಿ.ಜೆ.ಕಾರಕೂನ**
ಸಂಚಾಲಕರು

**ಶ್ರೀ ರಘುನಂದನ ಕೆ.**
ಸದಸ್ಯರು

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
"ನಿರ್ಮಾಣ ಭವನ", ಡಾ.ರಾಜಕುಮಾರ್ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010.
ದೂರವಾಣಿ/ ಫ್ಯಾಕ್ಸ್ : 080-23378375-80, 23474408, 23573291
ಇ-ಮೇಲ್ : souharda@souharda.coop
ವೆಬ್‌ಸೈಟ್ : www.souharda.coop

## ಒಳ ಪುಟಗಳಲ್ಲಿ . . .

ಜ್ಞಾನ ಜ್ಯೋತಿ ........ 4
ಸಂಯುಕ್ತ ಸಹಕಾರಿಯ ನಿಯೋಗದಿಂದ ಕೇಂದ್ರ ಹಣಕಾಸು ಸಚಿವರ ಭೇಟಿ ........ 5
ಸಂಯುಕ್ತ ಸಹಕಾರಿಯ ಸುತ್ತೋಲೆ ........ 6
ಬೆಂಗಳೂರು ನಗರದ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ಆದಾಯ ತೆರಿಗೆ ಕಾಯ್ದೆ ತಿದ್ದುಪಡಿ ಕುರಿತು ಜಾಗೃತಿ ಶಿಬಿರ ........ 9
ಸಂಯುಕ್ತ ಸಹಕಾರಿಯ ಮುಂಬರುವ ತರಬೇತಿ ಕಾರ್ಯಕ್ರಮಗಳು ........ 10
ಪ್ರಧಾನಮಂತ್ರಿ ಭಾರತೀಯ ಜನೌಷಧಿ ಪರಿಯೋಜನೆಯ ಜನೌಷಧ ಕೇಂದ್ರಗಳ ಲೋಕಾರ್ಪಣೆ ಹಾಗೂ ಮಾಹಿತಿ ಕಾರ್ಯಾಗಾರ ........ 11
ಕಗ್ಗ ಪದ್ಯಗಳಲ್ಲಿ ಸಹಕಾರ ಸಾರ ........ 15
ಔಷಧ ವೆಚ್ಚ ನಿಯಂತ್ರಣಕ್ಕೆ ಜನೌಷಧಿ ಯೋಜನೆ - ಸಹಕಾರ ಸಂಸ್ಥೆಗಳಿಗೆ ಹೊಸ ಅವಕಾಶ ........ 19
ಆರ್ಥಿಕ ಸೇರ್ಪಡೆ ಮುಖ್ಯ ವಾಹಿನಿಯಲ್ಲಿ ಗುರುತಿಸಿಕೊಳ್ಳುವಲ್ಲಿ ಸಹಕಾರ ಸಂಸ್ಥೆಗಳ ಪಾತ್ರ ........ 22
ಸೌಹಾರ್ದ ಸಹಕಾರಿಯ ಆಡಳಿತ ........ 24

# ಸಂಪಾದಕೀಯ

## ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ಕೇಂದ್ರ ಯೋಜನೆ ಸೌಹಾರ್ದ ಸಹಕಾರಿಗಳ ವ್ಯವಹಾರ ಅಭಿವೃದ್ಧಿಗೆ ಹಾಗೂ ಕೇಂದ್ರದ ಯೋಜನೆಯಲ್ಲಿ ಪಾಲುದಾರರಾಗಲು ಸದಾವಕಾಶ

ಕೇಂದ್ರ ಸರಕಾರ ದೇಶದ ಸಾಮಾನ್ಯ ಜನರಿಗೆ ಉತ್ತಮ ಮಟ್ಟದ ಔಷಧಿಗಳನ್ನು ಕಡಿಮೆ ಬೆಲೆಯಲ್ಲಿ ಒದಗಿಸುವ ಯೋಜನೆಯೊಂದನ್ನು ಪ್ರಾರಂಭಿಸಿರುವುದು ಸ್ವಾಗತಾರ್ಹ. ಈ ಯೋಜನೆಯನ್ನು ರಾಜ್ಯ ಸರಕಾರಗಳ ಮೂಲಕ ಹಾಗೂ ಕೇಂದ್ರದಿಂದ ನೇರವಾಗಿ ವಿವಿಧ ಸಂಸ್ಥೆಗಳ ಮೂಲಕ ಲಾಭ ತೆಗೆದುಕೊಳ್ಳದೇ ನಷ್ಟ ಅನುಭವಿಸದಂತೆ ಕಾರ್ಯ ನಿರ್ವಹಿಸುವ, ಯೋಜನಾ ಆಯೋಗದ ಹಣಕಾಸಿನ ಸ್ಥಾಯಿ ಸಮಿತಿಯಲ್ಲಿ ಅನುಮೋದನೆ ಪಡೆದ ಯೋಜನೆ ಇದಾಗಿದೆ.

ಈ ಯೋಜನೆಯನ್ನು ಸಂಘ ಸಂಸ್ಥೆಗಳು ಪ್ರಾರಂಭಿಸಲು ಕೇಂದ್ರ ಸರಕಾರ 1 ಲಕ್ಷ ಪೀಠೋಪಕರಣಗಳ ವ್ಯವಸ್ಥೆಗಾಗಿ, 1 ಲಕ್ಷ ರೂ.ಗಳ ಔಷಧಿಗಳನ್ನು ಹಾಗೂ 50 ಸಾವಿರ ರೂ.ಗಳನ್ನು ಕಂಪ್ಯೂಟರ್, ಪ್ರಿಂಟರ್, ಇಂಟರ್‌ನೆಟ್ ವ್ಯವಸ್ಥೆಗಳಿಗಾಗಿ ಒಂದು ಬಾರಿ ಅನುದಾನದ ರೂಪದಲ್ಲಿ ನೀಡುತ್ತದೆ. ಪ್ರತಿಯೊಂದು ಔಷಧಿಯ ಮಾರುಕಟ್ಟೆ ಬೆಲೆಯಲ್ಲಿ 20% ಲಾಭ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಇದನ್ನು ಪ್ರಾರಂಭಿಸುವ ಸಂಘ ಸಂಸ್ಥೆಗಳಿಗೆ 120 ಚದರ ಅಡಿ ಸ್ಥಳದ ಲಭ್ಯತೆ ಅಗತ್ಯ. ಈ ಯೋಜನೆ ಪ್ರಾರಂಭಿಸುವ ಸಂಘ ಸಂಸ್ಥೆಗಳು ಕೇಂದ್ರ ಸರ್ಕಾರದ ಈ ವ್ಯವಹಾರ ನಡೆಸುವ ಸಂಸ್ಥೆಯೊಡನೆ ಒಂದು ಒಡಂಬಡಿಕೆ ಮಾಡಿಕೊಳ್ಳಬೇಕಾಗುತ್ತದೆ.

ರಾಜ್ಯದ ಸೌಹಾರ್ದ ಸಹಕಾರಿಗಳು ಈ ಯೋಜನೆಯನ್ನು ಪ್ರಾರಂಭಿಸುವುದರ ಮೂಲಕ ವಿಭಿನ್ನ ಸಹಕಾರ ಸಂಸ್ಥೆಗಳ ಪಟ್ಟಿಯಲ್ಲಿ ಸೌಹಾರ್ದ ಸಹಕಾರಿಗಳು ಸೇರುತ್ತವೆ. ಅಲ್ಲದೇ ಇದರಿಂದ ತಮ್ಮ ವ್ಯವಹಾರವನ್ನು ಹೆಚ್ಚಿಸಿಕೊಳ್ಳಬಹುದಾಗಿದೆ. ಈಗಾಗಲೇ ದಕ್ಷಿಣ ಕನ್ನಡ ಜಿಲ್ಲೆಯ ಮಾತೃಭೂಮಿ ಸೌಹಾರ್ದ ಸಹಕಾರಿಯವರು ಈ ಯೋಜನೆಯನ್ನು ಪ್ರಾರಂಭಿಸಿದ್ದಾರೆ. ರಾಜ್ಯದಲ್ಲಿ ಇ-ಸ್ಟ್ಯಾಂಪಿಂಗ್ ಯೋಜನೆಯನ್ನು ನಿರ್ವಹಿಸುತ್ತಿರುವಂತೆ ಕೇಂದ್ರದ ಜನೌಷಧ ಯೋಜನೆಯನ್ನು ಸೌಹಾರ್ದ ಸಹಕಾರಿಗಳು ಪ್ರಾರಂಭಿಸಿ, ಉತ್ತಮವಾಗಿ ನಿರ್ವಹಿಸಿದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಹೆಚ್ಚಿನ ಜನ ಮನ್ನಣೆ, ವಿಶ್ವಾಸಾರ್ಹತೆ, ಸಾರ್ವಜನಿಕ ಸೇವೆ ಹಾಗೂ ಸರಕಾರದ ಪ್ರೋತ್ಸಾಹವೂ ಗಣನೀಯ ಪ್ರಮಾಣದಲ್ಲಿ ಹೆಚ್ಚಾಗಲು ಸಾಧ್ಯವಾಗುತ್ತದೆ.

ಈ ಬಗ್ಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಬ್ಯುರೋ ಆಫ್ ಫಾರ್ಮಾ ಪಬ್ಲಿಕ್ ಸೆಕ್ಟರ್ ಅಂಡರ್ ಟೆಕಿಂಗ್ಸ್ ಆಫ್ ಇಂಡಿಯಾ, ಐಡಿಪಿಎಲ್ ಕಾರ್ಪೋರೇಟ್ ಆಫೀಸ್ ಕಾಂಪ್ಲೆಕ್ಸ್, ಓಲ್ಡ್ ದೆಹಲಿ ಗುರಗಾಂವ ರಸ್ತೆ, ದುಂದಹೆರಾ, ಗುರಗಾಂವ ಇವರನ್ನು ಸಂಪರ್ಕಿಸಲಾಗಿದೆ. ಇ-ಸ್ಟ್ಯಾಂಪಿಂಗ್‌ನಂತೆ ಸಂಯುಕ್ತ ಸಹಕಾರಿಯ ಮೂಲಕ ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ನೀಡಲು ಸಂಯುಕ್ತ ಸಹಕಾರಿಯು ಅಭಿಪ್ರಾಯಪಟ್ಟಿದೆ. ಇದಕ್ಕೆ ತಮ್ಮ ಸಲಹೆ / ಅಭಿಪ್ರಾಯಗಳನ್ನು ಕಳುಹಿಸಿ, ಸದರಿ ಯೋಜನೆಯ ಸಾಧಕ - ಬಾಧಕಗಳನ್ನು ಚರ್ಚಿಸಿ, ಮುಂದಿನ ಕ್ರಮವಿಡಲಾಗುವುದು. ಒಟ್ಟಿನಲ್ಲಿ ಇದೊಂದು ಉತ್ತಮ ಅವಕಾಶವೆಂದು ಭಾವಿಸಬಹುದಾಗಿದೆ. ■



## ಜ್ಞಾನ ಜ್ಯೋತಿ

ಶ್ರೀ ಸಿದ್ದೇಶ್ವರ ಸ್ವಾಮೀಜಿಯವರ ಉಪನ್ಯಾಸ ಸಂಗ್ರಹಗಳ ಆಯ್ದ ಭಾಗ

### ಅನ್ಯಾಸಕ್ತಿ

ಭರ್ತೃಹರಿಯು ಒಬ್ಬ ಶ್ರೇಷ್ಠ ಅನುಭವಿ ಕವಿ ಮತ್ತು ಸಂತ. ಮೊದಲು ಆತ ರಾಜನಾಗಿದ್ದ. ಶೂರನು ಸಶಕ್ತನು ಸುಂದರನೂ ಆಗಿದ್ದ. ಅವನ ಸತಿಯು ಅಷ್ಟೇ ರೂಪವತಿಯಾಗಿದ್ದಳು. ಸಿರಿ ಸಂಪದ ಯಾವುದಕ್ಕೇನೂ ಕೊರತೆ ಇರಲಿಲ್ಲ. ಒಂದು ದಿನ ರಾಜನು ವಿಹಾರಕ್ಕೆಂದು ಅರಣ್ಯಕ್ಕೆ ಹೋದ. ಬೃಹದಾಕಾರದ ವೃಕ್ಷ, ಹಸಿರು ಹಾಸಿದ ಭೂಮಿ, ಗಿರಿ ಗಹ್ವರ, ಜುಳು ಜುಳು ಹರಿಯುವ ತೊರೆಗಳಿಂದ ಅರಣ್ಯ ಅಲಂಕಾರಮಯವಾಗಿತ್ತು. ವಾತಾವರಣ ಪ್ರಶಾಂತವಾಗಿತ್ತು.

ಮಧ್ಯದಲ್ಲಿ ಒಂದು ಕುಟೀರ. ಅದರಲ್ಲಿ ಒಬ್ಬ ಹಿರಿಯ ತಪಸ್ವಿ ಇದ್ದ. ರಾಜನು ಅವರಿಗೆ ಅಭಿವಂದಿಸಿ "ಪೂಜ್ಯರು, ಆಶೀರ್ವದಿಸಬೇಕು" ಎಂದು ಪ್ರಾರ್ಥಿಸಿದ. ರಾಜನ ನಯ–ವಿನಯ ಕಂಡು ತಪಸ್ವಿಯು, ಸಂತುಷ್ಟನಾಗಿ ಒಂದು ಹಣ್ಣನ್ನು ಕೊಡುತ್ತ ರಾಜನಿಗೆ ಹೇಳಿದ – "ಇದನ್ನು ಸೇವಿಸು, ನೀನು ನೂರು ವರುಷ ಸುಂದರ ತರುಣನಾಗಿ ಇರುತ್ತಿ", ರಾಜನು ಹಣ್ಣನ್ನು ಸ್ವೀಕರಿಸಿ ಸಂತಸದಿಂದ ತಪಸ್ವಿಗೆ ವಂದಿಸಿ ಹಿಂದಿರುಗಿದ.

ಅರಮನೆಗೆ ಬರುವಾಗ ರಾಜನು ಮನದಲ್ಲಿ ಅಂದುಕೊಂಡ "ನಾನು ತರುಣನಾಗಿ, ರಾಣಿಯವರು ಮುಪ್ಪಾಗಿರುವುದು ಸರಿಯಲ್ಲ" ಅರಮನೆಗೆ ಬರುತ್ತಲೇ ಆ ಹಣ್ಣನ್ನು ರಾಣಿಯವರಿಗೆ ಕೊಟ್ಟು ಅದರ ಮಹತ್ವ ತಿಳಿಸಿದ. ರಾಣಿಯವರು ಸಂತುಷ್ಟರಾಗಿ "ಈ ಹಣ್ಣನ್ನು ನಾನು ನಂತರ ಸ್ವೀಕರಿಸುತ್ತೇನೆ" ಎಂದರು. "ಆಗಬಹುದು" ಎಂದು ರಾಜ ಸಂತಸದಿಂದ ಸಮ್ಮತಿಸಿದ. ಮರುದಿನ ಒಬ್ಬ ನರ್ತಕಿ, ರಾಜ ದರ್ಬಾರಕ್ಕೆ ಬಂದಳು. ಸಿಂಹಾಸನದಲ್ಲಿದ್ದ ರಾಜನಿಗೆ ಒಂದು ಹಣ್ಣನ್ನು ಕೊಡುತ್ತ ಹೇಳಿದಳು – "ಇದು ಅಮೃತ ಫಲ. ಇದನ್ನು ಸೇವಿಸಿದವರು ಚಿರ ಯೌವನ ಪಡೆಯುತ್ತಾರೆ. ನಾನು ಯೌವನ ಪಡೆಯುವುದರಿಂದ ಸಮಾಜಕ್ಕೆ ಇನ್ನಷ್ಟು ಹಾನಿ. ತಾವೇ ಇದನ್ನು ಸ್ವೀಕರಿಸಿ,



ದೇಶ ಸಂರಕ್ಷಿಸಿ". ಆಶ್ಚರ್ಯಚಕಿತನಾದ ರಾಜ "ನಿನ್ನ ಕೈಗೆ ಈ ಹಣ್ಣು ಹೇಗೆ ಬಂದಿತು?" ಎಂದು ಕೇಳಿದ. "ನಿಮ್ಮ ಅರಮನೆಯ ಒಬ್ಬ ತರುಣ ಸೇವಕನು ಕೊಟ್ಟ" ಎಂದಳು ನರ್ತಕಿ. ತಕ್ಷಣ ರಾಜನಿಗೆ ಆ ಹಣ್ಣಿನ ಹಿಂದೆ ನಡೆದ ವಂಚನೆ ಎಲ್ಲವೂ ಕಣ್ಣ ಮುಂದೆ ಸುಳಿಯಿತು. ಕಾಮವಾಸನೆಯಿಂದ ನಡೆದ ಅನಾಹುತ ತಿಳಿದು ರಾಜನ ಹೃದಯ ತಳಮಳಗೊಂಡು ನುಡಿಯಿತು.

ಯಾಂ ಚಿಂತಯಾಮಿ ಸತತಂ ಮಯೀ ಸಾ ವಿರಕ್ತಾ ।
ಸಾಚಾನ್ಯಮಿಚ್ಛತಿ ಜನಂ ಸಜನೋಽನ್ಯಾಸಕ್ತಾ॥
ಅಸ್ಮದ ಕೃತೆ ಪರಿತುಷ್ಯತಿ ಕಾಚಿದನ್ಯಾ।
ಧಿಕ್ತಾಂ ಚ ತಂ ಚ ಮದನಂ ಚ ಇಮಾಂಚ ಮಾಂ ಚ ॥

ಯಾರನ್ನು ನಾನು ಸತತ ನೆನೆಯುವೆನೋ ಅಂಥ ಮಹಾರಾಣಿ ನನ್ನಲ್ಲಿ ವಿರಕ್ತಳು; ಇನ್ನೊಬ್ಬನಲ್ಲಿ ಆಸಕ್ತಳು. ಆ ಇನ್ನೊಬ್ಬನಾದರೂ ಮತ್ತೊಬ್ಬಳಲ್ಲಿ ಆಸಕ್ತನು ಅವಳಾದರೋ ನನ್ನ ಒಳಿತಿಗಾಗಿ ಹಂಬಲಿಸುತ್ತಾಳೆ. ಅವಳಿಗೆ, ಅವನಿಗೆ, ಇವಳಿಗೆ, ಕಾಮನಿಗೆ ಕೊನೆಗೆ ನನಗೂ ಧಿಕ್ಕಾರವಿರಲಿ! ಈ ಘಟನೆಯಿಂದ ಮಹಾರಾಜನು ಜಾಗ್ರತನಾದ. "ತಪಸ್ವಿಯು ಈ ಹಣ್ಣನ್ನು ಕೊಟ್ಟು, ನನ್ನ ಕಣ್ಣು ತೆರೆಯಿಸಿದ" ಎಂದು ಹೇಳಿ ರಾಜನು ವೈರಾಗ್ಯ ತಾಳಿ ಅರಮನೆ ಅರಸೊತ್ತಿಗೆಯನ್ನು ಬಿಟ್ಟು ಪರಮ ಸತ್ಯ ಹುಡುಕಿಕೊಂಡು ಹೊರಟ.

## ತರಬೇತಿದಾರರ ತರಬೇತಿ ಹಾಗೂ ಸಂಪನ್ಮೂಲ ವ್ಯಕ್ತಿಗಳ ಪರಿಚಯ ಕಾರ್ಯಕ್ರಮ

ಸಂಯುಕ್ತ ಸಹಕಾರಿಯು ರಾಜ್ಯದಾದ್ಯಂತ ಹಲವು ವಿವಿಧ ಬಗೆಯ ವೈಶಿಷ್ಟ್ಯತೆಯಿಂದ ಕೂಡಿದ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿದೆ. ಸಂಯುಕ್ತ ಸಹಕಾರಿಯ ಸಂಪನ್ಮೂಲ ವ್ಯಕ್ತಿಗಳ ಪಟ್ಟಿಯಲ್ಲಿ ಹಲವಾರು ತಜ್ಞರು, ಅನುಭವಿಗಳು ನಮ್ಮ ಜೊತೆಗೆ ಇದ್ದಾರೆ. ಹೆಚ್ಚಿನವರು ಕೇಂದ್ರ ಸ್ಥಾನ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ. ರಾಜ್ಯದಾದ್ಯಂತ ನಡೆಯುವ ತರಬೇತಿ ಕಾರ್ಯಕ್ರಮಗಳಲ್ಲಿ ರಾಜ್ಯದಾದ್ಯಂತ ನುರಿತ ಹಾಗೂ ಅನುಭವಿ ತರಬೇತಿದಾರರ ಸಂಪನ್ಮೂಲವನ್ನು ಹೊಂದಬೇಕೆಂಬುದು ಹಾಗೂ ಆಯಾ ಜಿಲ್ಲೆಗಳಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಾಗ ಅದೇ ಜಿಲ್ಲೆಯ ಅಥವಾ ಹತ್ತಿರದ ಪಕ್ಕದ ಜಿಲ್ಲೆಯ ಸಂಪನ್ಮೂಲ ವ್ಯಕ್ತಿಗಳನ್ನು ತರಬೇತಿ ಕಾರ್ಯಕ್ರಮಗಳಲ್ಲಿ ಅಳವಡಿಸಿಕೊಳ್ಳಬೇಕೆಂಬುದು ಸಂಯುಕ್ತ ಸಹಕಾರಿಯ ಅಪೇಕ್ಷೆಯಾಗಿದೆ.

ಈ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿಯ ತರಬೇತಿದಾರರ ಪಟ್ಟಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿರಲು ಆಸಕ್ತಿಯುಳ್ಳ ತರಬೇತಿದಾರರು ತಮ್ಮ ವೈಯಕ್ತಿಕ ವಿವರಗಳನ್ನು ಅಂದರೆ ಹೆಸರು – ವಿಳಾಸ – ವಿದ್ಯಾಭ್ಯಾಸ – ವೃತ್ತಿ – ಅನುಭವ – ದೂರವಾಣಿ & ಮೊಬೈಲ್ ಸಂಖ್ಯೆ – ಮೇಲ್ ಐಡಿ ಹಾಗೂ ತರಬೇತಿ ನೀಡಲು ಆಸಕ್ತಿ ಹೊಂದಿರುವ ವಿಷಯಗಳನ್ನು ಸಂಯುಕ್ತ ಸಹಕಾರಿಗೆ ಪರಿಚಯಿಸಿಕೊಳ್ಳಲು ಕಳುಹಿಸಲು ಕೋರಿದೆ. ಸದ್ಯದಲ್ಲಿಯೇ ಸಂಯುಕ್ತ ಸಹಕಾರಿಯಿಂದ ತರಬೇತಿದಾರರ ತರಬೇತಿ ಕಾರ್ಯಕ್ರಮವನ್ನು ಹಾಗೂ ಸಂಪನ್ಮೂಲ ವ್ಯಕ್ತಿಗಳ ಸಭೆಯನ್ನು ಹಮ್ಮಿಕೊಳ್ಳಲಾಗುತ್ತದೆ.

# ಸಂಯುಕ್ತ ಸಹಕಾರಿಯ ನಿಯೋಗದಿಂದ ಕೇಂದ್ರ ಹಣಕಾಸು ಸಚಿವರ ಭೇಟಿ

**ಆದಾಯ ತೆರಿಗೆ ಕಲಂ 80 (ಪಿ) (2) (ಎ) ಹಾಗೂ 269 ಎಸ್‌ಟಿ ಯಿಂದ ಸಹಕಾರ ಸಂಸ್ಥೆಗಳ ತೊಂದರೆಗಳಿಗೆ ಶೀಘ್ರದಲ್ಲಿಯೇ ಪರಿಹಾರ : ಸಂಯುಕ್ತ ಸಹಕಾರಿಯ ನಿಯೋಗಕ್ಕೆ ಕೇಂದ್ರ ಹಣಕಾಸು ಸಚಿವರಾದ ಶ್ರೀ ಅರುಣ ಜೇಟ್ಲಿ ಭರವಸೆ**





**ನವದೆಹಲಿ :** ರಾಜ್ಯದ ಸೌಹಾರ್ದ ಸಹಕಾರಿಗಳು ಹಾಗೂ ಇತರೆ ಸಹಕಾರ ಸಂಸ್ಥೆಗಳು ಆದಾಯ ತೆರಿಗೆ ಕಾಯ್ದೆಯ ಕಲಂ 80 (ಪಿ) (2) (ಎ) ಹಾಗೂ ಇತ್ತೀಚಿನ ತಿದ್ದುಪಡಿ ಕಲಂ 269ಎಸ್‌ಟಿ ಇಂದ ಅನುಭವಿಸುತ್ತಿರುವ ತೊಂದರೆಗಳ ನಿವಾರಣೆಗೆ ಕ್ರಮವಿಡುವಂತೆ ಒತ್ತಾಯಿಸಿ ನಿಯೋಗದಲ್ಲಿ ತೆರಳಿ ಮಾನ್ಯ ಕರ್ನಾಟಕದ ಸಂಸದರೂ ಮತ್ತು ಸಂಸದೀಯ ವ್ಯವಹಾರಗಳ ಸಚಿವರೂ ಆದ ಶ್ರೀ ಅನಂತಕುಮಾರ್‌ರವರ ನೆರವಿನಿಂದ ಕೇಂದ್ರ ಹಣಕಾಸು ಸಚಿವರಾದ ಶ್ರೀ ಅರುಣ ಜೇಟ್ಲಿಯವರನ್ನು ದಿನಾಂಕ 10–04–2017ರಂದು ಭೇಟಿ ಮಾಡಿ, ಮನವಿ ಸಲ್ಲಿಸಿ, ವಿನಂತಿಸಲಾಯಿತು.

ನಿಯೋಗದ ಸದಸ್ಯರು ಕರ್ನಾಟಕದ ಮಾನ್ಯ ಸಂಸದರಾದ ಶ್ರೀ ಪ್ರಹ್ಲಾದ ಜೋಶಿ, ಶ್ರೀ ಪ್ರತಾಪ ಸಿಂಹ, ಶ್ರೀ ಕೆ.ಹೆಚ್. ಮುನಿಯಪ್ಪ, ಶ್ರೀ ಸಂಗಣ್ಣ ಕರಡಿ ಮತ್ತು ಮಾನ್ಯ ಕೇಂದ್ರ ಸಾಂಖ್ಯಿಕ ಮತ್ತು ಕಾರ್ಯಕ್ರಮಗಳ ಅನುಷ್ಠಾನ ಸಚಿವರಾದ ಶ್ರೀ ಸದಾನಂದ ಗೌಡ, ಮುಂತಾದವರನ್ನೂ ಭೇಟಿ ಮಾಡಿ, ವಿಷಯ ತಿಳಿಸಿ, ಅವರ ಸಹಕಾರ ಕೋರಿದರು. ಅವರೆಲ್ಲರೂ ತಮ್ಮ ಬೆಂಬಲವನ್ನು ಸೂಚಿಸಿದರು.

ಈ ನಿಯೋಗದಲ್ಲಿ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರು ಹಾಗೂ ಕ್ಯಾಂಪ್ಕೋ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಸ್.ಆರ್. ಸತೀಶ್ಚಂದ್ರ, ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ, ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ, ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಹಾಗೂ ಸಾಗರದ ಹಿರಿಯ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಬಿ.ವಿ.ರವೀಂದ್ರನಾಥ್ ಇವರುಗಳು ಇದ್ದರು.

ದೆಹಲಿಯ ಸಂಸತ್ ಭವನದಲ್ಲಿ ಕರ್ನಾಟಕದ ಮಾನ್ಯ ಕೇಂದ್ರ ಸಚಿವರಾದ ಶ್ರೀ ಅನಂತಕುಮಾರ್‌ರವರನ್ನು ಭೇಟಿ ಮಾಡಿ, ಅವರೊಡನೆ ಚರ್ಚಿಸಿ, ವಿಷಯದ ಗಂಭೀರತೆಯನ್ನು ಮನದಟ್ಟು ಮಾಡಿಕೊಡಲಾಯಿತು. ನಂತರ ನಡೆದ ಶ್ರೀ ಅರುಣ ಜೇಟ್ಲಿಯವರೊಂದಿಗಿನ ಭೇಟಿಯ ಸಮಯದಲ್ಲಿ ಸಾಗರದ ಚಾರ್ಟೆಡ್ ಅಕೌಂಟೆಂಟ್ ಶ್ರೀ ಬಿ.ವಿ.ರವೀಂದ್ರನಾಥ್‌ರವರು ಕೆಳಕಂಡ ಅಂಶಗಳ ಬಗ್ಗೆ ಮಾನ್ಯ ಹಣಕಾಸು ಸಚಿವರ ಗಮನ ಸೆಳೆದರು.

1. ಆದಾಯ ತೆರಿಗೆ ಕಲಂ 80 (ಪಿ) (2) (ಎ)ರನ್ವಯ ಸದಸ್ಯರೊಂದಿಗೆ ಪತ್ತಿನ ವ್ಯವಹಾರಗಳನ್ನು ನಡೆಸುತ್ತಿರುವ ಯಾ ಸದಸ್ಯರಿಗೆ ಸಾಲ ಸೌಲಭ್ಯ ನೀಡುತ್ತಿರುವ ಸಹಕಾರಿಗಳಿಗೆ ತನ್ನ ಸದಸ್ಯರೊಂದಿಗೆ ನಡೆಸಿದ ಪತ್ತಿನ ವ್ಯವಹಾರದಿಂದ ಬಂದ ಸಂಪೂರ್ಣ ಆದಾಯಕ್ಕೆ ಕಡಿತವಿರುತ್ತದೆ. ಆದರೆ, ಕರ್ನಾಟಕದ ಆದಾಯ ತೆರಿಗೆ ಅಧಿಕಾರಿಗಳು ಸಹಕಾರಿಗಳನ್ನು ಬ್ಯಾಂಕುಗಳು ಎಂಬ ಮಾನದಂಡದಡಿಯಲ್ಲಿ ಪರಿಗಣಿಸಿ, ಇವುಗಳಿಗೆ ತೆರಿಗೆ ವಿಧಿಸಿ ನೋಟಿಸ್ ನೀಡುವುದರ ಮೂಲಕ ಕಿರುಕುಳ ನೀಡುತ್ತಿದ್ದಾರೆ.
2. ಹಾಗೆಯೇ ಆದಾಯ ತೆರಿಗೆ ಕಲಂ 80 (ಪಿ) (2) (ಡಿ)ರನ್ವಯ ಒಂದು ಸಹಕಾರಿಯು ಬೇರೊಂದು ಸಹಕಾರಿ ಸೊಸೈಟಿಯಲ್ಲಿ ಮಾಡಿದ ಹೂಡಿಕೆಗಳ ಮೇಲೆ ಬಂದ ಆದಾಯದ ಮೇಲೆ ಸಂಪೂರ್ಣ ಕಡಿತವನ್ನು ನೀಡಲಾಗಿದೆ. ನಮ್ಮಲ್ಲಿ ಹೆಚ್ಚಿನ ಸಹಕಾರಿಗಳು ಸಹಕಾರಿ ಬ್ಯಾಂಕುಗಳಲ್ಲಿ ತಮ್ಮ ಮೀಸಲು ನಿಧಿಗಳನ್ನು ಮತ್ತು ಹೆಚ್ಚುವರಿ ನಿಧಿಗಳನ್ನು ಹೂಡಿಕೆ ಮಾಡುತ್ತಿದ್ದಾರೆ. ಸಹಕಾರಿ ಬ್ಯಾಂಕುಗಳು ಸಹಕಾರಿ ಸೊಸೈಟಿಗಳಲ್ಲ ಎಂಬ ನೆಪ ಒಡ್ಡಿ ಈ ಕಡಿತವನ್ನು ನೀಡದೇ ಸಹಕಾರಿಗಳಿಗೆ ಕಿರುಕುಳ ನೀಡುತ್ತಿದ್ದಾರೆ. ಈ ಎರಡೂ ವಿದ್ಯಮಾನಗಳು ಕರ್ನಾಟಕ–ಗೋವಾ ರಾಜ್ಯಗಳಲ್ಲಿ ಮಾತ್ರ ನಡೆಯುತ್ತಿವೆ. ಇವುಗಳ ವಿರುದ್ಧ ಸಹಕಾರಿಗಳು ಇಲಾಖೆಯ ಮೇಲ್ಮನವಿ ಪ್ರಾಧಿಕಾರಗಳಿಗೆ ಸಲ್ಲಿಸಿದ ಎಲ್ಲಾ ಮನವಿಗಳೂ ಸಹಕಾರಿಗಳ ಪರವಾಗಿ ಪುರಸ್ಕೃತವಾಗಿವೆ. ಹಾಗೆಯೇ, ಸಹಕಾರಿಗಳು ಮತ್ತು ಇಲಾಖೆ ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ಹೂಡಿದ ಎಲ್ಲಾ ವ್ಯಾಜ್ಯಗಳಲ್ಲೂ ಸಹಕಾರಿಗಳ ಪರವಾಗಿ ತೀರ್ಪುಗಳು ಬಂದಿವೆ ಎಂಬುದನ್ನು ದಾಖಲೆ ಸಹಿತ ಸಚಿವರ ಗಮನಕ್ಕೆ ತರಲಾಯಿತು.

   ಎರಡೂ ವಿಷಯಗಳನ್ನು ಮನದಟ್ಟು ಮಾಡಿಕೊಂಡ ಮಾನ್ಯ ಸಚಿವರು ಇದರಿಂದಾಗಿ ಸಹಕಾರಿಗಳಿಗೆ ಆಗುತ್ತಿರುವ ಕಿರಿಕಿರಿಯನ್ನು ಊಹಿಸಿ, ಕೂಡಲೇ ಈ ಬಗ್ಗೆ ಗಮನಹರಿಸುವುದಾಗಿ ಭರವಸೆ ನೀಡಿ, ನಮ್ಮ ಅರ್ಜಿಗಳ ಮೇಲೆ ಈ ಕುರಿತು ಅತಿ ಶೀಘ್ರವಾಗಿ ಕ್ರಮವಿಡಬೇಕೆಂದು ರೆವೆನ್ಯೂ ಸೆಕ್ರೆಟರಿಯವರಿಗೆ ಲಿಖಿತವಾಗಿ ಸೂಚನೆ ನೀಡಿದರು.
3. ನಂತರ ಕೇಂದ್ರ ಸರಕಾರ ಇತ್ತೀಚೆಗೆ 269ಎಸ್‌ಟಿ ಪ್ರಾವಧಾನದಡಿಯಲ್ಲಿ ತಂದ ನಗದು ವ್ಯವಹಾರಗಳ ಮಿತಿಯ ಮೇಲಿನ ನಿರ್ಬಂಧದಿಂದಾಗಿ ಸಹಕಾರಿಗಳ ದೈನಂದಿನ ವ್ಯವಹಾರಗಳ ಮೇಲೆ ಆಗುತ್ತಿರುವ ಪರಿಣಾಮವನ್ನು ಸಚಿವರಿಗೆ ವಿವರಿಸಲಾಯಿತು. ಸಹಕಾರಿಗಳು ವ್ಯವಹಾರವನ್ನೇ ಸ್ಥಗಿತಗೊಳಿಸಬೇಕಾದ ಅನಿವಾರ್ಯತೆಗೆ ಸಿಲುಕಿರುವುದನ್ನು ಸಚಿವರ ಗಮನಕ್ಕೆ ತರಲಾಯಿತು. ಇದರಿಂದಾಗಿ ಸಹಕಾರಿ ಚಳುವಳಿಯ ಮೇಲೆ ಆಗಬಹುದಾದ ಪರಿಣಾಮಗಳ ಬಗ್ಗೆ ಮನದಟ್ಟು ಮಾಡಿಕೊಡಲಾಯಿತು. ಈ ಕಾರಣದಿಂದ ಸಹಕಾರಿ ಸಂಸ್ಥೆಗಳನ್ನು ಈ ಪ್ರಾವಧಾನದಡಿಯಲ್ಲಿ ವಿನಾಯಿತಿಗೊಳಪಡಿಸಬೇಕೆಂಬ ಕೋರಿಕೆಯನ್ನು ಸಲ್ಲಿಸಲಾಯಿತು. ನಿಯೋಗದಲ್ಲಿರುವ ಎಲ್ಲಾ ಸದಸ್ಯರೂ ಹೆಚ್ಚಿನ ಒತ್ತು ನೀಡಿ ಮನವಿ ಮಾಡಿದಾಗ ಈ ನಮ್ಮ ಕೋರಿಕೆಯನ್ನೂ ಸಕಾರಾತ್ಮಕವಾಗಿ ಪರಿಗಣಿಸುವುದಾಗಿ ಸಚಿವರು ಭರವಸೆ ನೀಡಿದರು.

# ಸಂಯುಕ್ತ ಸಹಕಾರಿಯ ಸುತ್ತೋಲೆಗಳು :

## 1. ಸೌಹಾರ್ದ ಸಹಕಾರಿಗಳು "ಬ್ಯಾಂಕ್", "ಬ್ಯಾಂಕಿಂಗ್" ಅಥವಾ "ಸಹಕಾರಿ ಬ್ಯಾಂಕಿಂಗ್" ಎಂಬ ಪದಗಳನ್ನು ಬಳಕೆ ಮಾಡದಿರುವುದು ಹಾಗೂ ಮೂರನೇ ವ್ಯಕ್ತಿ ಚೆಕ್ ನಗದೀಕರಣದ ಕುರಿತು ಸುತ್ತೋಲೆ.

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**

ಐಎಸ್‌ಓ ಪ್ರಮಾಣೀಕೃತ ಶಾಸನಬದ್ಧ ಸಹಕಾರಿ ಸಂಸ್ಥೆ
'ನಿರ್ಮಾಣ ಭವನ', ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010.
www.souharda.coop, Ph: 080-23378375-80, E-mail souharda@souharda.coop

### ಸುತ್ತೋಲೆ

**ವಿಷಯ: ಸೌಹಾರ್ದ ಸಹಕಾರಿಗಳು "ಬ್ಯಾಂಕ್", "ಬ್ಯಾಂಕಿಂಗ್" ಅಥವಾ "ಸಹಕಾರಿ ಬ್ಯಾಂಕಿಂಗ್" ಎಂಬ ಪದಗಳನ್ನು ಬಳಕೆ ಮಾಡದಿರುವುದು ಹಾಗೂ ಮೂರನೇ ವ್ಯಕ್ತಿ ಚೆಕ್ ನಗದೀಕರಣದ ಕುರಿತು.**

**ಉಲ್ಲೇಖ: ದಿನಾಂಕ: 15.02.2017ರ ಭಾರತೀಯ ರಿಸರ್ವ್ ಬ್ಯಾಂಕ್‌ನ ಅಧಿಕಾರಿಗಳೊಂದಿಗಿನ ಸಭೆ.**

ಸಂಸ/ಶಾ-368/ಶಾ/ಆರ್‌ಬಿಐ/2017-18 ದಿನಾಂಕ : 27.04.2017

ಭಾರತೀಯ ರಿಸರ್ವ್ ಬ್ಯಾಂಕ್‌ನ ಅಧಿಕಾರಿಗಳು ದಿನಾಂಕ: 15.02.2017ರಂದು ಸಂಯುಕ್ತ ಸಹಕಾರಿಯ ಪ್ರತಿನಿಧಿಗಳೊಂದಿಗೆ ಸಭೆಯನ್ನು ನಡೆಸಿ ರಾಜ್ಯದ ಕೆಲವೊಂದು ಸೌಹಾರ್ದ ಸಹಕಾರಿಗಳು ತಮ್ಮ ನಾಮಫಲಕ/ ಪ್ರಚಾರ ಸಾಮಾಗ್ರಿ/ ವೆಬ್‌ಸೈಟ್‌ಗಳಲ್ಲಿ "ಬ್ಯಾಂಕ್", "ಬ್ಯಾಂಕಿಂಗ್" ಅಥವಾ "ಸಹಕಾರಿ ಬ್ಯಾಂಕಿಂಗ್" ಎಂಬ ಪದಗಳ ಬಳಕೆ ಮಾಡುತ್ತಿರುವ ಕುರಿತಂತೆ ತಿಳಿಸಿ, ಸಂಯುಕ್ತ ಸಹಕಾರಿಯಿಂದ ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ನಿರ್ದೇಶನ ನೀಡಲು ತಿಳಿಸಿರುತ್ತಾರೆ. ಈ ಕುರಿತಂತೆ ದಿನಾಂಕ: 17.02.2017ರಂದು ನಡೆದ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸಭೆಗೆ ವಿಷಯವನ್ನು ಮಂಡಿಸಲಾಗಿತ್ತು. ಸದರಿ ಸಭೆಯಲ್ಲಿ ಈ ಕುರಿತಂತೆ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಸುತ್ತೋಲೆ ನೀಡಲು ತೀರ್ಮಾನಿಸಲಾಗಿರುತ್ತದೆ.

ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಬ್ಯಾಂಕಿಂಗ್ ಲೈಸನ್ಸ್ ಪಡೆಯದ ಸಂಸ್ಥೆಗಳು ತಮ್ಮ ನಾಮಫಲಕ/ ಪ್ರಚಾರ ಸಾಮಾಗ್ರಿ/ ವೆಬ್‌ಸೈಟ್‌ಗಳಲ್ಲಿ "ಬ್ಯಾಂಕ್", "ಬ್ಯಾಂಕಿಂಗ್" ಅಥವಾ "ಸಹಕಾರಿ ಬ್ಯಾಂಕಿಂಗ್" ಎಂಬ ಪದಗಳ ಬಳಕೆ ಮಾಡುವುದು ಬ್ಯಾಂಕಿಂಗ್ ರೆಗ್ಯೂಲೇಶನ್ ಅಧಿನಿಯಮ, 1949 (Banking Regulation Act, 1949)ರ ಕಲಂ 7ರ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. ಆದ್ದರಿಂದ ದಿನಾಂಕ: 17.02.2017ರಂದು ನಡೆದ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸಭೆಯ ತೀರ್ಮಾನದಂತೆ ಆರ್.ಬಿ.ಐನಿಂದ ಬ್ಯಾಂಕಿಂಗ್ ಲೈಸನ್ಸ್ ಪಡೆದಿರುವ 18 ಸೌಹಾರ್ದ ಸಹಕಾರಿ ಬ್ಯಾಂಕ್‌ಗಳನ್ನು ಹೊರತುಪಡಿಸಿ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ಈ ಕೆಳಕಂಡ ಅಂಶಗಳನ್ನು ಗಮನದಲ್ಲಿರಿಸಿ ವ್ಯವಹರಿಸಲು ಸೂಚಿಸಿದೆ. ಅವುಗಳೆಂದರೆ;

1. ಸೌಹಾರ್ದ ಸಹಕಾರಿಗಳು ತಮ್ಮ ನಾಮಫಲಕ/ ಪ್ರಚಾರ ಸಾಮಾಗ್ರಿ /ವೆಬ್‌ಸೈಟ್‌ಗಳಲ್ಲಿ ಅಥವಾ ಇನ್ನಾವುದೇ ರೂಪದಲ್ಲಿ "ಬ್ಯಾಂಕ್" (Bank), "ಬ್ಯಾಂಕಿಂಗ್" (Banking) ಅಥವಾ "ಸಹಕಾರಿ ಬ್ಯಾಂಕಿಂಗ್" (Cooperative Banking) ಎಂಬ ಪದಗಳ ಬಳಕೆ ಮಾಡತಕ್ಕದ್ದಲ್ಲ.
2. ಸೌಹಾರ್ದ ಸಹಕಾರಿಗಳು ಸದಸ್ಯರ ಉಪಯೋಗಕ್ಕಾಗಿ ನಿರ್ವಹಿಸುವ ಉಳಿತಾಯ ಖಾತೆಗಳಿಗೆ ಉಳಿತಾಯ ಬ್ಯಾಂಕ್ ಅಕೌಂಟ್ (Saving Bank Account) ಎಂಬ ಹೆಸರಿನಲ್ಲಿ ಕರೆಯುವಂತಿಲ್ಲ. ಅಂತಹ ಖಾತೆಗಳು "ಸದಸ್ಯರ ಉಳಿತಾಯ ಖಾತೆ" (Members Saving Account)ಗಳಾಗಿರುತ್ತದೆ.
3. ಸೌಹಾರ್ದ ಸಹಕಾರಿಗಳು ಬ್ಯಾಂಕ್ ಮಾದರಿಯ ಚೆಕ್ (Cheque) ಅಥವಾ ಅದನ್ನು ಹೋಲುವ ಇನ್ನಾವುದೇ ಮಾದರಿಗಳನ್ನು ಮುದ್ರಿಸಿ ಸದಸ್ಯರಿಗೆ ವಿತರಿಸತಕ್ಕದ್ದಲ್ಲ.
4. ಸೌಹಾರ್ದ ಸಹಕಾರಿಗಳು ಮುದ್ರಿತ ವಿತ್ ಡ್ರಾ ಸ್ಲಿಪ್ (Withdraw Slip) ಗಳನ್ನು ಉಪಯೋಗಿಸುತ್ತಿದ್ದಲ್ಲಿ, ಅಂತಹ ವಿತ್ ಡ್ರಾ ಸ್ಲಿಪ್‌ಗಳಲ್ಲಿ "ಸ್ವಂತಕ್ಕೆ" (Self) ಎಂಬ ಪದವನ್ನು ಉಪಯೋಗಿಸತಕ್ಕದ್ದು.
5. ಸೌಹಾರ್ದ ಸಹಕಾರಿಗಳು ತಮ್ಮ ನಾಮಫಲಕ/ ಪ್ರಚಾರ ಸಾಮಾಗ್ರಿ/ ವೆಬ್‌ಸೈಟ್‌ಗಳಲ್ಲಿ ಎನ್‌ಇಎಫ್‌ಟಿ (NEFT), ಆರ್‌ಟಿಜಿಎಸ್ (RTGS) ಮತ್ತು ಡಿ.ಡಿ. (DD) ಸೌಲಭ್ಯವನ್ನು ಒದಗಿಸಲಾಗುವುದು ಎಂಬುದನ್ನು ಪ್ರಚಾರಪಡಿಸತಕ್ಕದ್ದಲ್ಲ.
6. ಸೌಹಾರ್ದ ಸಹಕಾರಿಗಳು ತನ್ನ ಸದಸ್ಯರಿಂದ ಮಾತ್ರ ಠೇವಣಿಯನ್ನು ಸಂಗ್ರಹಿಸತಕ್ಕದ್ದು. ಯಾವುದೇ ಕಾರಣಕ್ಕೂ ಸದಸ್ಯೇತರರಿಂದ ಠೇವಣಿಗಳನ್ನು ಸಂಗ್ರಹಿಸತಕ್ಕದ್ದಲ್ಲ. ಠೇವಣಿ ಸಂಗ್ರಹಣೆಗೆ ಸಾರ್ವಜನಿಕ ಮೇಳಗಳನ್ನು ಆಯೋಜಿಸತಕ್ಕದ್ದಲ್ಲ.
7. ಭಾರತೀಯ ರಿಸರ್ವ್ ಬ್ಯಾಂಕ್‌ನ ಸುತ್ತೋಲೆಯಂತೆ ರೂ. 50,000/-ಕ್ಕಿಂತ ಕಡಿಮೆ ಮೊತ್ತದ ಸದಸ್ಯರ ಚೆಕ್‌ಗಳನ್ನು ಮಾತ್ರ ನಗದೀಕರಣಗೊಳಿಸತಕ್ಕದ್ದು.
8. ಚೆಕ್ ನಗದೀಕರಣ ನಡೆಸುವ ಸಂದರ್ಭದಲ್ಲಿ ಸದಸ್ಯರ ಕುರಿತಾದ ವಿಳಾಸದ ದೃಢೀಕರಣದ ದಾಖಲೆ, ಗುರುತಿನ ದೃಢೀಕರಣದ ದಾಖಲೆ ಒಳಗೊಂಡ ಸಂಪೂರ್ಣ ವಿವರದ (ಕೆ.ವೈ.ಸಿ ನಾರ್ಮ್ಸ್‌ನಂತೆ) ದಾಖಲೆಯನ್ನು ಪಡೆಯಲು ಕಟ್ಟುನಿಟ್ಟಿನ ಕ್ರಮವಿಡಬೇಕು ಮತ್ತು ಸದರಿ ದಾಖಲೆಯನ್ನು ಸಂರಕ್ಷಿಸಲು ಕ್ರಮವಿಡಬೇಕು.
9. ಸೌಹಾರ್ದ ಸಹಕಾರಿಗಳು ಸದಸ್ಯೇತರರೊಂದಿಗೆ ವ್ಯವಹರಿಸುವ ವ್ಯವಹಾರ/ ಸೇವೆಗಳಾದ ಇ-ಸ್ಟಾಂಪಿಂಗ್, ಬಸ್ ಟಿಕೆಟ್, ಸಕಾಲ, ಜನೌಷದ ಕೇಂದ್ರ, ಪಾನ್ ಕಾರ್ಡ್ ವಿತರಣೆ ಮೊದಲಾದ ಸೇವಾ ರೂಪದ ಸೌಲಭ್ಯಗಳನ್ನು ಸದಸ್ಯೇತರರಿಗೆ ಒದಗಿಸುತ್ತಿದ್ದಲ್ಲಿ, ಅಂತಹ ಸೇವೆಗಳ ಕುರಿತು ತಮ್ಮ ಉಪವಿಧಿಗಳಲ್ಲಿ ಪ್ರಾವಧಾನ ಕಲ್ಪಿಸಿಕೊಂಡಿರಬೇಕು.

ರಾಜ್ಯದ ಪ್ರತಿಯೊಂದು ಸೌಹಾರ್ದ ಸಹಕಾರಿಯು ಮೇಲಿನ ಅಂಶಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು, ತಪ್ಪಿದಲ್ಲಿ ಆಯಾ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿಯನ್ನು ವೈಯಕ್ತಿಕವಾಗಿ ಜವಾಬ್ದಾರಿಯನ್ನಾಗಿಸಿ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು.

ಸಹಿ/-
**(ಶರಣಗೌಡ ಜಿ. ಪಾಟೀಲ್)**
ವ್ಯವಸ್ಥಾಪಕ ನಿರ್ದೇಶಕರು

## 2. ಆದಾಯ ತೆರಿಗೆ ಕಾಯ್ದೆ (Income Tax Act)ಯಲ್ಲಿ ಹೊಸದಾಗಿ ಸೇರ್ಪಡೆಗೊಳಿಸಲಾಗಿರುವ ಕಲಂ 269ST ಕುರಿತು

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
ಐಎಸ್‌ಓ ಪ್ರಮಾಣೀಕೃತ ಶಾಸನಬದ್ಧ ಸಹಕಾರಿ ಸಂಸ್ಥೆ
'ನಿರ್ಮಾಣ ಭವನ', ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010.
www.souharda.coop, Ph: 080-23378375-80, E-mail souharda@souharda.coop

ಸಂ:ಸಂಸ/ಸೂ/1/2017–18 ದಿನಾಂಕ:27.04.2017

ಇವರಿಗೆ,

**ಮಾನ್ಯ ಅಧ್ಯಕ್ಷರು/ ಮುಖ್ಯಕಾರ್ಯನಿರ್ವಾಹಕರು,**
ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು,
ಆತ್ಮೀಯ ಸಹಕಾರಿ ಬಂಧುಗಳೇ,

ಭಾರತ ಸರ್ಕಾರವು ಇತ್ತೀಚಿಗೆ ಸಂಸತ್ತಿನಲ್ಲಿ ಹಣಕಾಸು ಮಸೂದೆಯನ್ನು ಮಂಡಿಸಿ ಅನುಮೋದನೆ ಪಡೆದಿರುತ್ತದೆ. ಇದಕ್ಕೆ ರಾಷ್ಟ್ರಧ್ಯಕ್ಷರು ಸಹಮತಿ ಸೂಚಿಸಿ ಅನುಮೋದಿಸಿರುತ್ತಾರೆ. ಈ ಅಧಿನಿಯಮವು ದಿನಾಂಕ : 01.04.2017ರಿಂದ ದೇಶದ್ಯಾಂತ ಜಾರಿಗೆ ಬಂದಿದೆ. ಈ ಅಧಿನಿಯಮದಲ್ಲಿ ಆದಾಯ ತೆರಿಗೆ ಸಂಬಂಧಪಟ್ಟಂತೆ ಪ್ರಕರಣ 269STನ್ನು ಹೊಸದಾಗಿ ಸೇರ್ಪಡೆಗೊಳಿಸಲಾಗಿದೆ. ಈ ಸೇರ್ಪಡೆಯ ತತ್ಪರಿಣಾಮವಾಗಿ ದೈನಂದಿನ ವ್ಯವಹಾರದಲ್ಲಿ ದಿನವೊಂದಕ್ಕೆ ರೂ.2 ಲಕ್ಷಗಳಿಗಿಂತ ಹೆಚ್ಚಿನ ನಗದು ವ್ಯವಹಾರದ ಮೇಲೆ ನಿರ್ಬಂಧ ವಿಧಿಸಲಾಗಿದೆ.

ಈ ನಿರ್ಬಂಧಕ್ಕೆ ಸಂಬಂಧಪಟ್ಟಂತೆ ರಾಜ್ಯದಲ್ಲಿನ ಸೌಹಾರ್ದ ಸಹಕಾರಿಗಳಲ್ಲಿ ಗೊಂದಲ ಹಾಗೂ ಜಿಜ್ಞಾಸೆಗಳು ಉಂಟಾಗಿರುವುದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಗಮನಕ್ಕೆ ಬಂದಿರುತ್ತದೆ. ರಾಜ್ಯದ ಸೌಹಾರ್ದ ಸಹಕಾರಿಗಳ ಸ್ಪಷ್ಟವಾದ ತಿಳುವಳಿಕೆ ನೀಡುವ ದೃಷ್ಟಿಯಿಂದ ತಿದ್ದುಪಡಿ ಕಾಯ್ದೆಯಲ್ಲಿರುವ ಜಿಜ್ಞಾಸೆಗಳನ್ನು ತಿಳಿದುಕೊಳ್ಳಲು ಕೇಂದ್ರ ಸರ್ಕಾರದ ವಿತ್ತ ಸಚಿವರನ್ನು, ಸಿ.ಬಿ.ಡಿ.ಟಿ. ಹಾಗೂ ನುರಿತ ತಜ್ಞರನ್ನು ಸಂಪರ್ಕಿಸಿದೆ. ಈ ಹಿನ್ನೆಲೆಯಲ್ಲಿ ಸದರಿ ವಿಷಯದ ಬಗ್ಗೆ ಸಲಹೆ ರೂಪದಲ್ಲಿ ಕೆಳಕಂಡ ಸ್ಪಷ್ಟೀಕರಣ ನೀಡಲಾಗಿದೆ. ಅವುಗಳೆಂದರೆ;

1. ಆದಾಯ ತೆರಿಗೆ ಕಾಯ್ದೆ (Income Tax Act) ಕಲಂ 269ST ರನ್ವಯ ಸೌಹಾರ್ದ ಸಹಕಾರಿಗಳು ತನ್ನ ಸದಸ್ಯನಿಂದ ಯಾವುದೇ ರೀತಿಯ ಉಳಿತಾಯ/ ಠೇವಣಿ/ಸಾಲದ ಖಾತೆಗಳು ಸೇರಿದಂತೆ ಯಾವುದೇ ಉದ್ದೇಶದ ಖಾತೆಗಳಿಗೆ ರೂ. 2,00,000/–ಕ್ಕಿಂತ ಹೆಚ್ಚಿನ ಮೊತ್ತವನ್ನು ನಗದು ಮೂಲಕ ಪಡೆಯತಕ್ಕದ್ದಲ್ಲ. ರೂ. 2,00,000/–ಕ್ಕಿಂತ ಹೆಚ್ಚಿನ ಮೊತ್ತವನ್ನು ಬ್ಯಾಂಕಿನ ಅಕೌಂಟ್ ಪೇಯೀ ಚೆಕ್ ಅಥವಾ ಬ್ಯಾಂಕಿನ ಅಕೌಂಟ್ ಡ್ರಾಫ್ಟ್ ಅಥವಾ ಬ್ಯಾಂಕ್ ಅಕೌಂಟಿನ ಮೂಲಕ ನಡೆಸುವ ಪಾವತಿ ತೀರುವಳಿ ವ್ಯವಸ್ಥೆಯ ಮೂಲಕ ಪಡೆಯಲು ಅವಕಾಶವಿರುತ್ತದೆ.
(ಗಮನಿಸಿ : ಆದಾಯ ತೆರಿಗೆ ಕಾಯ್ದೆ ಕಲಂ 269SS ರನ್ವಯ ಯಾವುದೇ ಸದಸ್ಯನಿಂದ 20,000 ರೂ.ಗಳಿಗೆ ಮೀರಿದ ಸಾಲ ಅಥವಾ ಠೇವಣಿಯನ್ನು ನಗದು ರೂಪದಲ್ಲಿ ಸ್ವೀಕರಿಸುವಂತಿಲ್ಲ. ಆದಾಯ ತೆರಿಗೆ ಕಾಯ್ದೆ ಕಲಂ 269T ರನ್ವಯ ರೂ. 20,000 ಗಳಿಗೆ ಮೀರಿದ ಸಾಲ ಅಥವಾ ಠೇವಣಿಯನ್ನು ನಗದು ರೂಪದಲ್ಲಿ ಮರುಪಾವತಿ ಮಾಡುವಂತಿಲ್ಲ ಎಂಬ ಆದಾಯ ತೆರಿಗೆ ಕಾಯ್ದೆಯ ಪ್ರಾವಧಾನದಲ್ಲಿ ಯಾವುದೇ ಮಾರ್ಪಾಡುಗಳು ಆಗಿರುವುದಿಲ್ಲ. ಸದರಿ ಪ್ರಾವಧಾನಗಳು ಯಥಾವತ್ತಾಗಿ ಮುಂದುವರಿಯುವುದು.)
2. ಸೌಹಾರ್ದ ಸಹಕಾರಿಗಳು ತನ್ನ ಸದಸ್ಯರಿಂದ ಸಂಗ್ರಹಿಸುವ ಹಣವನ್ನು ತನ್ನ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಲು ಅವಕಾಶ ನೀಡಿರುತ್ತದೆ. ಆದಾಯ ತೆರಿಗೆ ಕಾಯ್ದೆ (Income Tax Act)ಗೆ ಕಲಂ 269STರಲ್ಲಿ ಸರ್ಕಾರ, ಸಹಕಾರಿ ಬ್ಯಾಂಕುಗಳೂ ಸೇರಿದಂತೆ ಯಾವುದೇ ಬ್ಯಾಂಕು, ಅಂಚೆ ಕಛೇರಿ ಉಳಿತಾಯ ಬ್ಯಾಂಕ್‌ಗಳಿಗೆ ರೂ. 2,00,000/–ಕ್ಕಿಂತ ಹೆಚ್ಚಿನ ಮೊತ್ತವನ್ನು ಜಮಾ ಮಾಡಲು ವಿನಾಯಿತಿ ನೀಡಲಾಗಿರುತ್ತದೆ.
3. ಸೌಹಾರ್ದ ಸಹಕಾರಿಯು ತನ್ನ ಖಾತೆ ಹೊಂದಿರುವ ಬ್ಯಾಂಕ್‌ನಿಂದ ಹಣ ಹಿಂಪಡೆಯಲು ಯಾವುದೇ ನಿರ್ಬಂಧಗಳಿರುವುದಿಲ್ಲ. ಈ ಕುರಿತಂತೆ ದಿನಾಂಕ: 05.04.2017ರಂದು ಆಯುಕ್ತರು, ಆದಾಯ ತೆರಿಗೆ ಇಲಾಖೆ (CBDT) ಇವರು ಪತ್ರಿಕಾ ಪ್ರಕಟಣೆಯನ್ನು ನೀಡಿರುತ್ತಾರೆ.
4. ಆದಾಯ ತೆರಿಗೆ ಕಾಯ್ದೆ (Income Tax Act) ಕಲಂ 40ಎ(3)ರನ್ವಯ ಖರ್ಚುಗಳನ್ನು ಪಾವತಿಸುವ ಸಂದರ್ಭದಲ್ಲಿ ನಗದು ಮೂಲಕ ಪಾವತಿಸುವ ಮಿತಿಯನ್ನು ರೂ. 10,000/– ನಿಗದಿಪಡಿಸಿರುತ್ತಾರೆ. (ತಿದ್ದುಪಡಿಗೂ ಪೂರ್ವದಲ್ಲಿ ಸದರಿ ಮಿತಿಯು ರೂ.20,000/– ಆಗಿತ್ತು) ಆದ್ದರಿಂದ ಸೌಹಾರ್ದ ಸಹಕಾರಿಗಳು ರೂ.10,000/–ಕ್ಕಿಂತ ಹೆಚ್ಚಿನ ವೆಚ್ಚಗಳನ್ನು ನಗದು ಮೂಲಕ ಪಾವತಿಸತಕ್ಕದ್ದಲ್ಲ.

ಈ ಮೇಲಿನ ಅಂಶಗಳನ್ನು ಅನುಸರಿಸಿ ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಚಟುವಟಿಕೆಗಳನ್ನು ಮಾಡುವುದು. ಅಲ್ಲದೇ ದಿನನಿತ್ಯದ ವ್ಯವಹಾರದಲ್ಲಿ ಎದುರಾಗುವ ಪ್ರಶ್ನೆಗಳಿಗೆ ತಜ್ಞರಿಂದ ಉತ್ತರವನ್ನು ಪಡೆದು ಸ್ವಾಭಿಮಾನಿ ಸಹಕಾರಿಯಲ್ಲಿ ಪ್ರಕಟಿಸಲಾಗುವುದು. ಸೌಹಾರ್ದ ಸಹಕಾರಿಗಳಿಗೆ ಸಂಬಂಧಿಸಿದಂತೆ ಸಂಯುಕ್ತ ಸಹಕಾರಿಯು ಅಧಿಕೃತ ಸಂಸ್ಥೆಯಾಗಿದ್ದು, ಯಾವುದೇ ವಿಷಯದ ಕುರಿತು ಸಂಯುಕ್ತ ಸಹಕಾರಿಯು ನೀಡುವ ಮಾಹಿತಿಯು ಅಧಿಕೃತವಾಗುತ್ತದೆ.

ಈ ಕುರಿತು ಹೆಚ್ಚಿನ ತಿಳುವಳಿಕೆಗಾಗಿ ರಾಜ್ಯದ 14 ಕಡೆಗಳಲ್ಲಿ ಜಾಗೃತಿ/ತಿಳುವಳಿಕೆ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿದೆ. ಈ ತರಬೇತಿ ಕಾರ್ಯಕ್ರಮದಲ್ಲಿ ನುರಿತ ಆರ್ಥಿಕ ತಜ್ಞರಿಂದ, ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳಿಂದ ಅಧಿಕೃತ ಮಾಹಿತಿಯನ್ನು ನೀಡಲಾಗುವುದು. ಈ ನಿಟ್ಟಿನಲ್ಲಿ ಎಲ್ಲಾ ಸೌಹಾರ್ದ ಸಹಕಾರಿಗಳು ಸಂಯುಕ್ತ ಸಹಕಾರಿಯು ಆಯೋಜಿಸುವ ತರಬೇತಿ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಲು ಕೋರಿದೆ.

ವಂದನೆಗಳೊಂದಿಗೆ,

ಸಹಿ/–
**(ಶರಣಗೌಡ ಜಿ. ಪಾಟೀಲ್)**
ವ್ಯವಸ್ಥಾಪಕ ನಿರ್ದೇಶಕರು

## ದಿನಾಂಕ : 05.04.2017ರಂದು ಆಯುಕ್ತರು, ಆದಾಯ ತೆರಿಗೆ ಇಲಾಖೆ (CBDT) ಇವರು ಹೊರಡಿಸಿರುವ ಪತ್ರಿಕಾ ಪ್ರಕಟಣೆಯ ಪ್ರತಿ

**Government of India**
**Ministry of Finance**
**Department of Revenue**
**Central Board of Direct Taxes**

**New Delhi, 5th April, 2017.**

# PRESS RELEASE

### Budget 2017 takes Steps to discourage Cash transactions & curb Black Money

Various legislative steps have been taken by the Finance Act, 2017 to curb black money by discouraging cash transaction and by promoting economy.

These prominently include placing restriction on cash transaction by introduction of new sections **269ST & 271DA** to the Income-tax Act. It has been provided that no person (other than those specified therein) shall receive an amount of two lakh rupees or more,

(a) in aggregate from a person in a day;

(b) in respect of a single transaction; or

(c) in respect of transactions relating to one event or occasion from a person, Otherwise than by an account payee cheque or account payee bank draft or use of electronic clearing system through a bank account.

Any contravention to the said provision shall attract penalty of a sum equal to the amount of such receipt. However, the said restriction is not applicable to any receipt by Government, banking company, post office saving bank or co-operative bank. **It has also been decided that the restriction on cash transaction shall not apply to withdrawal of cash from a bank, co-operative bank or a post office savings bank. Necessary notification in this regard is being issued.**

It has also been provided that any capital expenditure in cash exceeding rupees ten thousand shall not be eligible for claiming depreciation allowance or investment-linked deduction. Similarly, the limit on revenue expenditure in cash has been reduced from Rs.20,000 to Rs.10,000.

In order to promote digital payments in case of small unorganized businesses, the rate of presumptive taxation has been reduced from 8% to 6% for the amount of turnover realised through cheque/digital mode.

Restriction on receipt of cash donation up to Rs. 2000 has been provided on political parties for availing exemption from Income-tax. Further, it has also mandated that any donation in cash exceeding Rs.2000 to a charitable institution shall not be allowed as a deduction under the Income-tax Act.

**(Meenakshi J. Goswami)**
**Commissioner of Income Tax**
**(Media & Technical Policy)**
**Official Spokesperson, CBDT**

## ಸಂಯುಕ್ತ ಸಹಕಾರಿಯ ಶಾಸನಬದ್ಧ ಕಾರ್ಯಗಳು

ನಿಷ್ಕ ವಿವಿಧೋದ್ದೇಶ ಸೌಹಾರ್ದ ಸಹಕಾರಿಯು ಠೇವಣಿದಾರರ ಹಣವನ್ನು ಮರುಪಾವತಿಸದೇ ತನ್ನ ಠೇವಣಿದಾರರಿಗೆ ವಂಚಿಸಿರುವ ಕುರಿತು ನಿರಂತರ ದೂರುಗಳು ಸಲ್ಲಿಕೆಯಾಗುತ್ತಿರುವುದು ಗಮನಿಸಿದಾಗ ಸಹಕಾರಿಯ ಆಡಳಿತ ಮಂಡಲಿಯು ಹಣಕಾಸು ಅಕ್ರಮದಲ್ಲಿ ಭಾಗಿಯಾಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಹಾಗೆಯೇ, ಸಹಕಾರಿಯು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 34ರಡಿ ಮಾಹಿತಿಯನ್ನು ಸಂಯುಕ್ತ ಸಹಕಾರಿಗೆ ಸಲ್ಲಿಸಿರುವುದಿಲ್ಲ ಮತ್ತು ಸಹಕಾರಿಯು ಸಾಮಾನ್ಯ ಸಭೆ ನಡೆಸಿರುವ ಕುರಿತು ಹಾಗೂ ಲೆಕ್ಕಪರಿಶೋಧನೆ ನಡೆಸಿರುವ ಕುರಿತು ಯಾವುದೇ ಮಾಹಿತಿ ಮತ್ತು ದಾಖಲೆಗಳು ಸಲ್ಲಿಸಿರುವುದಿಲ್ಲ.

ಆದ್ದರಿಂದ, ಸಹಕಾರಿಯ ಎಲ್ಲಾ ನಿರ್ದೇಶಕರು ಸೌಹಾರ್ದ ಸಹಕಾರಿ ಅಧಿನಿಯಮ ಕಲಂ 25(2)(ಎ–1), (ಎ–2), (ಬಿ) ಮತ್ತು (ಸಿ)ರಡಿ ಅನರ್ಹತೆಗೆ ಗುರಿಯಾಗಿರುವುದರಿಂದ ಸಂಯುಕ್ತ ಸಹಕಾರಿಯು ದಿನಾಂಕ 24 ಏಪ್ರಿಲ್ 2017ರ ಆದೇಶದ ಮೂಲಕ ಸಹಕಾರಿಯ ಎಲ್ಲಾ ನಿರ್ದೇಶಕರನ್ನು ಅನರ್ಹಗೊಳಿಸಿ ಆದೇಶ ಹೊರಡಿಸಲಾಗಿದೆ. ಈ ಹಿನ್ನೆಲೆಯಲ್ಲಿ ಸಹಕಾರಿಯಲ್ಲಿ ಆಡಳಿತ ಮಂಡಲಿ ಅಸ್ತಿತ್ವದಲ್ಲಿಲ್ಲದೇ ಇರುವುದರಿಂದ ಸಾಂವಿಧಾನಿಕ ಬಿಕ್ಕಟ್ಟು ಉಂಟಾಗಿರುವ ಕಾರಣ ಸಹಕಾರಿಯ ವಿಶೇಷಾಧಿಕಾರಿಯಾಗಿ ಶ್ರೀ ಶಿವಕುಮಾರ ಬಿರಾದಾರ, ಮೈಸೂರು ವಿಭಾಗೀಯ ಅಧಿಕಾರಿ ಇವರನ್ನು ನೇಮಿಸಲಾಗಿದೆ.

## 3. ವರ್ಷಾಂತ್ಯದ ಆರ್ಥಿಕ ಮಾಹಿತಿ/ ವಿವಿಧ ಮಾಹಿತಿಗಳನ್ನು ಕಳುಹಿಸುವ ಹಾಗೂ ಇತರೆ ಸಂಗತಿಗಳ ಕುರಿತು ಸುತ್ತೋಲೆ

ಸಹಕಾರಿಯ ಆರ್ಥಿಕ ಅಂಕಿ ಅಂಶಗಳು, ವಿವಿಧ ಮಾಹಿತಿಗಳನ್ನು ಸಲ್ಲಿಸುವುದನ್ನೊಳಗೊಂಡಂತೆ ಸೌಹಾರ್ದ ಸಹಕಾರಿಗಳು ನಿರ್ವಹಿಸಬೇಕಾದ ಪ್ರಮುಖ ಕೆಲಸಗಳ ಮಾಹಿತಿಗಳನ್ನೊಳಗೊಂಡ ಸುತ್ತೋಲೆಯನ್ನು ದಿನಾಂಕ: 25.04.2017ರಂದು ಕಳುಹಿಸಲಾಗಿದೆ. ತಮ್ಮ ಸಹಕಾರಿಯ ದಿನಾಂಕ: 31.03.2017ಕ್ಕೆ ಅಂತ್ಯಗೊಂಡ ಆರ್ಥಿಕ ವರ್ಷಾಂತ್ಯದ ಅಂಕಿ ಅಂಶಗಳನ್ನು ಮತ್ತು ತಮ್ಮ ಸಹಕಾರಿಯ ಸಾಮಾನ್ಯ ಮಾಹಿತಿಯನ್ನು, ಆಡಳಿತ ಮಂಡಲಿ ಸದಸ್ಯರ ವಿವರ (ಹೆಸರು, ವಿಳಾಸ, ದೂರವಾಣಿ, ಇ-ಮೇಲ್ ಇತ್ಯಾದಿ)ಗಳನ್ನು ಹಾಗೂ ತಮ್ಮ ಸಹಕಾರಿಯ ಶಾಖೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಸುತ್ತೋಲೆಯಲ್ಲಿ ಲಗತ್ತಿಸಿದ ನಮೂನೆಯ ಮಾದರಿಯಲ್ಲಿ ದಿನಾಂಕ : 25.05.2017ರೊಳಗಾಗಿ ಸಂಯುಕ್ತ ಸಹಕಾರಿಯನ್ನು ತಲುಪುವಂತೆ ಕಳುಹಿಸಲು ಸೂಚಿಸಲಾಗಿದೆ. ಅಂಕಿ ಅಂಶಗಳ ವಿವರಗಳನ್ನು ಕಳುಹಿಸಲು ಲೆಕ್ಕಪರಿಶೋಧನೆಗಾಗಿ ಕಾಯದೇ ಮೇ 25ರೊಳಗಾಗಿಯೇ ಕಳುಹಿಸಲು ಸೂಚಿಸಿದೆ.

## ಸೌಹಾರ್ದ ಸಹಕಾರಿಗಳ ಗಮನಕ್ಕಾಗಿ

ಪುಟಸಂಖ್ಯೆ 6,7 ಮತ್ತು 9ರಲ್ಲಿರುವ ಮೂರು ಸುತ್ತೋಲೆಗಳನ್ನು ಈಗಾಗಲೇ ಅಂಚೆಯ ಮೂಲಕ ಕಳುಹಿಸಲಾಗಿದೆ. ಸದರಿ ಸುತ್ತೋಲೆಗಳು ಸಂಯುಕ್ತ ಸಹಕಾರಿಯ ವೆಬ್‌ಸೈಟ್ www.souharda.coopನಲ್ಲಿಯೂ ಸಹ ಲಭ್ಯವಿದೆ.

## ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯದ ಸಮಾಚಾರ

**ದಾವಾ ದಾಖಲಾತಿಗಳು :** ಬೆಳಗಾವಿ ವಿಭಾಗದಿಂದ 1234 ಮತ್ತು ಬೆಂಗಳೂರು, ಮೈಸೂರು ಹಾಗೂ ಕಲಬುರಗಿ ವಿಭಾಗಗಳಿಂದ 603 ಸೇರಿದಂತೆ ಒಟ್ಟು 1837 ದಾವಾ ಪ್ರಕರಣಗಳು ದಾಖಲಾಗಿವೆ. ಇವುಗಳ ಪೈಕಿ 1178 ಪ್ರಕರಣಗಳು ಇತ್ಯರ್ಥಗೊಂಡಿವೆ.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 206 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 03 ಪ್ರಕರಣ ಇತ್ಯರ್ಥಗೊಂಡಿದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 177 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯಕ್ಕೆ ವರ್ಗಾವಣೆಯಾಗಿರುತ್ತದೆ.

### ಸ್ವಾಭಿಮಾನಿ ಸಹಕಾರಿ ಅನಿಸಿಕೆ :
### ಕಾನೂನು ಮತ್ತು ಸಹಕಾರಿಗಳು

**– ಶ್ರೀ ಎ.ವಿ.ಎಲ್.ರಾವ್, ಮುಖ್ಯ ಕಾರ್ಯನಿರ್ವಾಹಕರು, ಯಶಸ್ವಿನಿ ಮಹಿಳಾ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಬೆಂಗಳೂರು.**

ಇದೇ ಏಪ್ರಿಲ್ 2017ರ 'ಸ್ವಾಭಿಮಾನಿ ಸಹಕಾರಿ' ಪತ್ರಿಕೆಯಲ್ಲಿ ಆದಾಯ ತೆರಿಗೆ ಕಾಯ್ದೆ ಅನ್ವಯ ಇತ್ತೀಚೆಗೆ ಆಗಿರುವ ಬದಲಾವಣೆಗಳ ಬಗ್ಗೆ ಚಾರ್ಟೆಡ್ ಅಕೌಂಟೆಂಟ್ ಶ್ರೀ ಬಿ.ವಿ.ರವೀಂದ್ರನಾಥ್, ಸಾಗರ ಅವರು ಲೇಖನ ಬರೆದು ಅದು ಸಹಕಾರಿಗಳಿಗೆ ಯಾವ ರೀತಿ ಅನ್ವಯವಾಗುತ್ತದೆ ಎಂಬುದರ ಬಗ್ಗೆ ವಿವರಿಸಿರುವುದು ಸ್ವಾಗತಾರ್ಹ. ಸ್ವಾಭಿಮಾನಿ ಸಹಕಾರಿಯಲ್ಲಿ ಪ್ರಕಟವಾಗುವ, ಕಾಯಿದೆಗೆ ಸಂಬಂಧಪಟ್ಟ ಲೇಖನದಲ್ಲಿ ಕಾಯ್ದೆ ಕಲಂ ಸಂಖ್ಯೆಯನ್ನು ನಮೂದಿಸುತ್ತಿರುವುದು, ನಾವು ಸಂಬಂಧಪಟ್ಟ ಕಾಯ್ದೆಗಳ ಪುಸ್ತಕ ತೆಗೆದು ನೋಡಿ ಅದರ ಬಗ್ಗೆ ಇನ್ನೂ ಹೆಚ್ಚು ಮಾಹಿತಿ ಪಡೆಯಲು ಅನುಕೂಲವಾಗುತ್ತಿದೆ.

## ಬೆಂಗಳೂರು ನಗರದ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ಆದಾಯ ತೆರಿಗೆ ಕಾಯ್ದೆ ತಿದ್ದುಪಡಿ ಕುರಿತು ಜಾಗೃತಿ ಶಿಬಿರ

**ಬೆಂಗಳೂರು :** ದಿನಾಂಕ : 19.04.2017ರಂದು ಬೆಂಗಳೂರಿನ ಹೋಟೆಲ್ ಪಾರಿಜಾತ ಗೇಟ್‌ವೇನಲ್ಲಿ ಬೆಂಗಳೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ಆದಾಯ ತೆರಿಗೆ ಕಾಯ್ದೆ ತಿದ್ದುಪಡಿ ಕುರಿತು ಜಾಗೃತಿ ಶಿಬಿರವನ್ನು ಏರ್ಪಡಿಸಲಾಗಿತ್ತು.

ದೀಪ ಬೆಳಗಿಸುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವರವರು ದೇಶದಲ್ಲಿ ಕಪ್ಪು ಹಣ ಚಲಾವಣೆಯನ್ನು ನಿರ್ಬಂಧಿಸುವ ನಿಟ್ಟಿನಲ್ಲಿ ಈ ತಿದ್ದುಪಡಿಯನ್ನು ತರಲಾಗಿದೆ. ಸಹಕಾರ ಸಂಸ್ಥೆಗಳು ಆತಂಕ ಪಡುವ ಅಗತ್ಯವಿಲ್ಲ. ಸೌಹಾರ್ದ ಸಹಕಾರಿಗಳು ತಮ್ಮ ಸದಸ್ಯರೊಡನೆ ವ್ಯವಹರಿಸುವಾಗ ಎಚ್ಚರಿಕೆಯಿಂದ ಕಾನೂನಿನ ವ್ಯಾಪ್ತಿಗೆ ಒಳಪಡುವಂತೆ ಕೆವೈಸಿ (Know Your Customer) ಮಾನದಂಡಗಳ ಮಿತಿಯಲ್ಲಿ ವ್ಯವಹರಿಸಬೇಕು. ಇದಕ್ಕಾಗಿ ಇಂತಹ ಜಾಗೃತಿ ಶಿಬಿರಗಳನ್ನು ರಾಜ್ಯದಾದ್ಯಂತ 13 ಸ್ಥಳಗಳಲ್ಲಿ ಏರ್ಪಡಿಸಲಾಗುತ್ತಿದೆ ಎಂದು ತಿಳಿಸಿದರು. ಮುಂದುವರೆದು ಮಾತನಾಡಿದ ಶ್ರೀಯುತರು ಕೇಂದ್ರ ಹಣಕಾಸು ಸಚಿವರನ್ನು ನಿಯೋಗದಲ್ಲಿ ಹೋಗಿ ಭೇಟಿ ಮಾಡಿ, ಕಾಯ್ದೆ ತಿದ್ದುಪಡಿಯಲ್ಲಿ ಅಂಚೆ ಕಛೇರಿ, ಸರಕಾರ, ಬ್ಯಾಂಕುಗಳು, ಪಟ್ಟಣ ಸಹಕಾರ ಬ್ಯಾಂಕುಗಳನ್ನು ಹೊರತುಪಡಿಸಿದಂತೆ ಕ್ರೆಡಿಟ್ ಸಹಕಾರ ಸಂಸ್ಥೆಗಳನ್ನು ಹೊರತುಪಡಿಸಲು ಒತ್ತಾಯಿಸಿ, ಮನವಿ ಸಲ್ಲಿಸಲಾಗಿದೆ ಮತ್ತು ಆದಾಯ ತೆರಿಗೆ ಅಧಿಕಾರಿಗಳು ಕ್ರೆಡಿಟ್ ಸಹಕಾರ ಸಂಸ್ಥೆಗಳಿಗೆ ನೀಡುತ್ತಿರುವ ಕಿರುಕುಳವನ್ನು ನಿಲ್ಲಿಸುವಂತೆ ಒತ್ತಾಯಿಸಿ ಮನವಿಯನ್ನು ಸಲ್ಲಿಸಲಾಗಿದೆ ಎಂದು ತಿಳಿಸಿದರು.



ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಸ್ವಾಗತ ಹಾಗೂ ಪ್ರಾಸ್ತಾವಿಕವನ್ನು ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಚಾರ್ಟೆಡ್ ಅಕೌಂಟೆಂಟರುಗಳಾದ ಶ್ರೀ ಬಿ.ವಿ.ರವೀಂದ್ರನಾಥ್, ಶ್ರೀ ಮಧುಕರ ಹೆಗಡೆ, ಶ್ರೀ ಪ್ರಕಾಶ ಹೆಗಡೆ, ಚಾರ್ಟೆಡ್ ಅಕೌಂಟೆಂಟರುಗಳ ಸಂಘದ ಅಧ್ಯಕ್ಷರಾದ ಶ್ರೀ ರಾಘವೇಂದ್ರ ಪುರಾಣಿಕ, ಅಖಿಲ ಭಾರತ ಚಾರ್ಟೆಡ್ ಅಕೌಂಟೆಂಟರುಗಳ ಸಂಘದ ಬೆಂಗಳೂರು ಶಾಖೆಯ ಅಧ್ಯಕ್ಷರಾದ ಶ್ರೀಮತಿ ಗೀತಾ ಇವರುಗಳು ಭಾಗವಹಿಸಿ, ಆದಾಯ ತೆರಿಗೆ ಕಾಯ್ದೆ ಕಲಂ 269ಎಸ್‌ಟಿ ಬಗ್ಗೆ ವಿವರ ನೀಡಿ, ಸೌಹಾರ್ದ ಸಹಕಾರಿಗಳ ಪ್ರಶ್ನೆಗಳಿಗೆ ಉತ್ತರಗಳನ್ನು ನೀಡಿದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ ಸೇರಿದಂತೆ ಅನೇಕ ನಿರ್ದೇಶಕರುಗಳು ಮತ್ತು ಬೆಂಗಳೂರು ನಗರದ 74 ಸೌಹಾರ್ದ ಸಹಕಾರಿಗಳಿಂದ 91 ಪ್ರತಿನಿಧಿಗಳು ಭಾಗವಹಿಸಿದ್ದರು.

# ಸಂಯುಕ್ತ ಸಹಕಾರಿಯ ಮುಂಬರುವ ತರಬೇತಿ ಕಾರ್ಯಕ್ರಮಗಳು

**1. ಆದಾಯ ತೆರಿಗೆ ಕಾನೂನಿನ ಇತ್ತೀಚಿನ ತಿದ್ದುಪಡಿ (269ST), ಸಹಕಾರಿಗಳಲ್ಲಿ ಡಿಜಿಟಲೀಕರಣ ಹಾಗೂ ತಾಂತ್ರಿಕತೆಯ ಅಳವಡಿಕೆ ಕುರಿತು ವಿಭಾಗೀಯ ಕಛೇರಿಗಳಿಂದ ಮೇ ಮಾಹೆಯಲ್ಲಿ 13 ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.**

| ಕ್ರ.ಸಂ. | ವಿಭಾಗ | ದಿನಾಂಕ | ಭಾಗವಹಿಸಬೇಕಾದ ಸೌಹಾರ್ದ ಸಹಕಾರಿಗಳು | ಕಾರ್ಯಕ್ರಮ ಆಯೋಜನೆಯ ಸ್ಥಳ |
|---|---|---|---|---|
| 1. | ಬೆಂಗಳೂರು | 07.05.2017 | ದಾವಣಗೆರೆ, ಶಿವಮೊಗ್ಗ & ಚಿಕ್ಕಮಗಳೂರು | ಜಿಲ್ಲಾ ಪತ್ರಿಕಾ ಸಂಘ, ಆರ್‌ಟಿಓ ಕಛೇರಿ ರಸ್ತೆ, ಶಿವಮೊಗ್ಗ. |
| 2. | | 10.05.2017 | ಬೆಂಗಳೂರು ಗ್ರಾಮಾಂತರ, ರಾಮನಗರ, ಚಿಕ್ಕಬಳ್ಳಾಪುರ, ಕೋಲಾರ | ಹೋಟೆಲ್ ಪಾರಿಜಾತ ಗೇಟ್ ವೇ, ಡಾ. ರಾಜಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು. |
| 3. | | 11.05.2017 | ತುಮಕೂರು & ಚಿತ್ರದುರ್ಗ | ಸೇಕ್ರೇಡ್ ಹಾರ್ಟ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಹೊರಪೇಟೆ ಮುಖ್ಯ ರಸ್ತೆ, ತುಮಕೂರು. |
| 4. | ಬೆಳಗಾವಿ | 15.05.2017 | ಚಿಕ್ಕೋಡಿ ಉಪವಿಭಾಗ ಹೊರತುಪಡಿಸಿ ಬೆಳಗಾವಿ ಜಿಲ್ಲೆಯ ಎಲ್ಲ ತಾಲ್ಲೂಕುಗಳು | ದಿ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸ್ (ಬೆಳಗಾವಿ ಶಾಖೆ), ರಾಮದೇವ ಹೋಟೆಲ್ ಹತ್ತಿರ, ಎಸ್ ಜಿ ಬಾಳೆಕುಂದ್ರಿ ಮಾರ್ಗ, ಶಿವಬಸವ ನಗರ, ಬೆಳಗಾವಿ. |
| 5. | | 16.05.2017 | ಚಿಕ್ಕೋಡಿ ಉಪವಿಭಾಗ | ಕೇಶವ ಕಲಾಭವನ, ಟಿಎಂಸಿ ಹಿಂಭಾಗ, ಕೆ ಸಿ ರಸ್ತೆ, ಚಿಕ್ಕೋಡಿ. |
| 6. | | 17.05.2017 | ವಿಜಯಪುರ | ಹೋಟೆಲ್ ಶುಭಶ್ರೀ ಸಾಗರ, ವಿಜಯಪುರ. |
| 7. | | 18.05.2017 | ಬಾಗಲಕೋಟೆ | ಬಾಗಲಕೋಟ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ., ಕೇಂದ್ರ ಕಛೇರಿ, ನವನಗರ, ಬಾಗಲಕೋಟ. |
| 8. | | 19.05.2017 | ಧಾರವಾಡ, ಹಾವೇರಿ, ಗದಗ, ಉತ್ತರ ಕನ್ನಡ | ಇನ್ಸ್‌ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್, ಹುಬ್ಬಳ್ಳಿ. |
| 9. | ಮೈಸೂರು | 18.05.2017 | ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು, ಹಾಸನ | ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಸಭಾಭವನ, ಚಾಮರಾಜ ಜೋಡಿರಸ್ತೆ, ಮೈಸೂರು. |
| 10. | | 19.05.2017 | ಉಡುಪಿ & ಮಂಗಳೂರು | ಶ್ರೀ ವೀರಭದ್ರ ಕಲಾಭವನ, ಉಡುಪಿ–ಮಂಗಳೂರು ಮುಖ್ಯರಸ್ತೆ, ಬಸ್ ನಿಲ್ದಾಣದ ಹತ್ತಿರ, ಕಿನ್ನಿಮೂಲ್ಕಿ, ಉಡುಪಿ. |
| 11. | ಕಲಬುರಗಿ | 19.05.2017 | ಬಳ್ಳಾರಿ | ಸಿದ್ಧಾರ್ಥ ರೆಸಿಡೆನ್ಸಿ, ಸ್ಟೇಷನ್ ರಸ್ತೆ, ಹೊಸಪೇಟೆ, ಬಳ್ಳಾರಿ. |
| 12. | | 20.05.2017 | ರಾಯಚೂರು & ಕೊಪ್ಪಳ | ಹೋಟೆಲ್ ಸಂತೋಷಿ ಸರೋವರ್, ಅಂಬೇಡ್ಕರ್ ಸರ್ಕಲ್ ಹತ್ತಿರ, ಸ್ಟೇಷನ್ ರಸ್ತೆ, ರಾಯಚೂರು. |
| 13. | | 22.05.2017 | ಬೀದರ, ಕಲಬುರಗಿ, ಯಾದಗಿರಿ | ಹೆಚ್.ಕೆ.ಸಿ.ಸಿ. ಸಭಾಂಗಣ, ಸೂಪರ್ ಮಾರ್ಕೆಟ್, ಕಲಬುರಗಿ. |

2. ರಾಜ್ಯದ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ ಆಯೋಜಿಸಿರುವ ರಾಜ್ಯಮಟ್ಟದ **"ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ" – ದಿನಾಂಕ : 22 & 23 ಮೇ 2017,** ಸ್ಥಳ : ಪ್ರಾದೇಶಿಕ ಆಡಳಿತ ಸಹಕಾರ ನಿರ್ವಹಣಾ ಸಂಸ್ಥೆ (ಆರ್‌ಐಸಿಎಂ), ಪದ್ಮನಾಭನಗರ, ಬನಶಂಕರಿ 2ನೇ ಹಂತ, ಬೆಂಗಳೂರು.
3. ರಾಜ್ಯದ ಸೌಹಾರ್ದ ಸಹಕಾರಿಗಳ ಮಹಿಳಾ ನಿರ್ದೇಶಕರುಗಳಿಗಾಗಿ ಆಯೋಜಿಸಿರುವ **"ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ" – ದಿನಾಂಕ : 26 & 27 ಮೇ 2017,** ಸ್ಥಳ : ಪ್ರಾದೇಶಿಕ ಆಡಳಿತ ಸಹಕಾರ ನಿರ್ವಹಣಾ ಸಂಸ್ಥೆ (ಆರ್‌ಐಸಿಎಂ), ಪದ್ಮನಾಭನಗರ, ಬನಶಂಕರಿ 2ನೇ ಹಂತ, ಬೆಂಗಳೂರು.
4. ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳಿಗಾಗಿ ಆಯೋಜಿಸಿರುವ 17ನೇ ತಂಡದ 10 ದಿನಗಳ ವ್ಯಕ್ತಿತ್ವ ವಿಕಸನ ವಿಶೇಷ ತರಬೇತಿ **– ದಿನಾಂಕ : 19 ರಿಂದ 28 ಜೂನ್ 2017ರವರೆಗೆ,** ಸ್ಥಳ : ಪ್ರಾದೇಶಿಕ ಆಡಳಿತ ಸಹಕಾರ ನಿರ್ವಹಣಾ ಸಂಸ್ಥೆ (ಆರ್‌ಐಸಿಎಂ), ಪದ್ಮನಾಭನಗರ, ಬನಶಂಕರಿ 2ನೇ ಹಂತ, ಬೆಂಗಳೂರು.
5. ಪಟ್ಟಣ ಸಹಕಾರ ಬ್ಯಾಂಕುಗಳ ಸಿಬ್ಬಂದಿಯವರಿಗಾಗಿ 7 ದಿನಗಳ ಬ್ಯಾಂಕಿಂಗ್ ಫೌಂಡೇಶನ್ ಕೋರ್ಸ್ "ಬ್ಯಾಂಕಿಂಗ್ ಪ್ರವೇಶ ತರಬೇತಿ" **– ದಿನಾಂಕ 01 ರಿಂದ 07 ಜುಲೈ 2017ರವರೆಗೆ,** ಸ್ಥಳ : ಪ್ರಾದೇಶಿಕ ಆಡಳಿತ ಸಹಕಾರ ನಿರ್ವಹಣಾ ಸಂಸ್ಥೆ (ಆರ್‌ಐಸಿಎಂ), ಪದ್ಮನಾಭನಗರ, ಬನಶಂಕರಿ 2ನೇ ಹಂತ, ಬೆಂಗಳೂರು.

## ಪ್ರಧಾನಮಂತ್ರಿ ಭಾರತೀಯ ಜನೌಷಧಿ ಪರಿಯೋಜನೆಯ ಜನೌಷದ ಕೇಂದ್ರಗಳ ಲೋಕಾರ್ಪಣೆ ಹಾಗೂ ಮಾಹಿತಿ ಕಾರ್ಯಾಗಾರ



**ಕೊಡಿಯಾಲ್‌ಬೈಲ್ :** ಮಾತೃಭೂಮಿ ಸೌಹಾರ್ದ ಸಹಕಾರಿ ನಿ., ಹಾಗೂ ಭಾರತೀಯ ಫಾರ್ಮಾ ಸಾರ್ವಜನಿಕ ಉದ್ದಿಮೆಗಳ ಬ್ಯೂರೋ (ಬಿಪಿಪಿಐ) ವತಿಯಿಂದ ಹಮ್ಮಿಕೊಂಡಿದ್ದ ಪ್ರಧಾನಮಂತ್ರಿ ಭಾರತೀಯ ಜನೌಷಧಿ ಪರಿಯೋಜನೆಯ ಜನೌಷದ ಕೇಂದ್ರಗಳ ಲೋಕಾರ್ಪಣೆ ಹಾಗೂ ಮಾಹಿತಿ ಕಾರ್ಯಾಗಾರವನ್ನು ದಿನಾಂಕ 22.04.2017ರಂದು ಟಿ.ವಿ.ರಮಣ್ ಪೈ ಕನ್ವೆನ್ಷನ್ ಸೆಂಟರ್, ಕೊಡಿಯಾಲ್‌ಬೈಲ್, ಮಂಗಳೂರಿನಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಅನಂತ ಕುಮಾರ್‌ರವರು ಉದ್ಘಾಟಿಸಿ, ಮಾತನಾಡಿದರು. ಕೇಂದ್ರ ಸಹಾಯಕ ನೀರು ಮತ್ತು ನೈರ್ಮಲ್ಯ ಖಾತೆ ಸಚಿವರಾದ ಶ್ರೀ ರಮೇಶ್ ಜಿಗಜಿಣಗಿ, ಸಂಸದರಾದ ಶ್ರೀ ನಳಿನ್ ಕುಮಾರ್ ಕಟೀಲ್, ವಿಧಾನ ಪರಿಷತ್ ಸದಸ್ಯರಾದ ಶ್ರೀ ಕ್ಯಾ. ಗಣೇಶ್ ಕಾರ್ಣಿಕ್, ಜಿ.ಪಂ. ಉಪಾಧ್ಯಕ್ಷರಾದ ಕಸ್ತೂರಿ ಪಂಜ, ಬಿಪಿಪಿಐ ಮಹಾನಿರ್ದೇಶಕರಾದ ಶ್ರೀ ರೋಹಿತ್ ಮೆಹ್ರಾ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ್‌ರವರು ಉಪಸ್ಥಿತರಿದ್ದರು. ಮಾತೃಭೂಮಿ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಭಾಸ್ಕರ ದೇವಸ್ಯ ಸ್ವಾಗತಿಸಿದರು. ಮಾತೃಭೂಮಿ ಸೌಹಾರ್ದ ಸಹಕಾರಿಯ ಉಪಾಧ್ಯಕ್ಷರು, ನಿರ್ದೇಶಕರುಗಳು ಉಪಸ್ಥಿತರಿದ್ದರು.



ಇದೇ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ್ ಹಾಗೂ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್ಚಂದ್ರರವರು ಜನೌಷಧಿ ಯೋಜನೆಯನ್ನು ಸೌಹಾರ್ದ ಸಹಕಾರಿಗಳಿಗೆ ಒದಗಿಸಿಕೊಡಲು ಮನವಿಯನ್ನು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವರಾದ ಶ್ರೀ ಅನಂತ ಕುಮಾರ್ ಹಾಗೂ ಕೇಂದ್ರ ಸಹಾಯಕ ನೀರು ಮತ್ತು ನೈರ್ಮಲ್ಯ ಖಾತೆ ಸಚಿವರಾದ ಶ್ರೀ ರಮೇಶ್ ಜಿಗಜಿಣಗಿಯವರಿಗೆ ಸಲ್ಲಿಸಲಾಯಿತು.

## ಅಧ್ಯಕ್ಷರು – ಉಪಾಧ್ಯಕ್ಷರ ಆಯ್ಕೆ

### ಅಂಬಲಪಾಡಿ ಸೌಹಾರ್ದ ಸಹಕಾರಿ ನಿ., ಉಡುಪಿ



ಶ್ರೀ ಹರೀಶ್ ಶೆಟ್ಟಿ
ಅಧ್ಯಕ್ಷರು



ಶ್ರೀ ಕೃಷ್ಣಾನಂದ ಉಪಾಧ್ಯಾಯ
ಉಪಾಧ್ಯಕ್ಷರು

### ಆಸರೆ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಸಿಂಧನೂರು



ಶ್ರೀ ಹಾಲಯ್ಯ ಶೇ. ಹಿರೇಮಠ
ಅಧ್ಯಕ್ಷರು



ಶ್ರೀ ಅಮರೇಶ ಚ. ಗುಂಜಳ್ಳಿ
ಉಪಾಧ್ಯಕ್ಷರು



**ಆಡಳಿತ ಮಂಡಲಿ ಸದಸ್ಯರುಗಳ ಆಯ್ಕೆ :** ನವಕಲ್ಯಾಣ ಕರ್ನಾಟಕ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ನಿ., ಬೆಂಗಳೂರು ಸಹಕಾರಿಯ ಆಡಳಿತ ಮಂಡಲಿಗೆ ನಡೆದ ಚುನಾವಣೆಯಲ್ಲಿ ಎಲ್ಲಾ 13 ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.



ಕೊಪ್ಪಳದ ಸೌಭಾಗ್ಯಲಕ್ಷ್ಮಿ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಆಡಳಿತ ಮಂಡಲಿ ಸದಸ್ಯರಿಂದ ಸಂಯುಕ್ತ ಸಹಕಾರಿಯ ಭೇಟಿ ಹಾಗೂ ಅಧ್ಯಯನ ಪ್ರವಾಸ

## ಸಹಕಾರಿಯ ಪ್ರಾರಂಭೋತ್ಸವ

**ಬೆಂಗಳೂರು** : ಅಭಯಶ್ರೀ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಯಲಹಂಕ ಉಪನಗರ, ಬೆಂಗಳೂರು ಸಹಕಾರಿಯನ್ನು ಶಾಸಕರಾದ ಶ್ರೀ ಎಸ್. ಆರ್.ವಿಶ್ವನಾಥ್‌ರವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ, ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ವೈ.ಕುಮಾರ್, ಸಿಂಗನಾಯಕನಹಳ್ಳಿಯ ರೈತರ ಸೇವಾ ಸಹಕಾರ ಸಂಘದ ಅಧ್ಯಕ್ಷರಾದ ಶ್ರೀಮತಿ ವಾಣಿಶ್ರೀ ವಿಶ್ವನಾಥ್, ಬಿಬಿಎಂಪಿ ಸದಸ್ಯರಾದ ಶ್ರೀ ಎಂ.ಸತೀಶ್‌ರವರು ಆಗಮಿಸಿದ್ದರು.



## ಸಹಕಾರಿಯ ಉದ್ಘಾಟನೆ

ಶ್ರೀ ಮದ್ದಾನೇಶ್ವರ ಮಹಿಳಾ ಸೌಹಾರ್ದ ಸಹಕಾರಿ ನಿ., ಗುಂಡ್ಲುಪೇಟೆ ಸಹಕಾರಿಯ ಉದ್ಘಾಟನೆ



## ಬಸವಣ್ಣನವರ ಜಯಂತಿ ಆಚರಣೆ



**ಗೋಕಾಕ** : ಕಲ್ಲೋಳಿ ಶ್ರೀ ಮಹಾಲಕ್ಷ್ಮೀ ಸೌಹಾರ್ದ ಸಹಕಾರಿ ನಿ., ಕಲ್ಲೋಳಿ ಸಹಕಾರಿಯಲ್ಲಿ ವಿಶ್ವ ಗುರು ಬಸವಣ್ಣನವರ ಜಯಂತಿಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಈರಣ್ಣ ಕಡಾಡಿ ಅವರು ಬಸವಣ್ಣನವರ ಭಾವ ಚಿತ್ರಕ್ಕೆ ಮಾಲಾರ್ಪಣೆ ಮಾಡಿ, ಜ್ಯೋತಿ ಬೆಳಗಿಸುವ ಮೂಲಕ ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ರಾಜಪ್ಪ ಗೋಸಬಾಳ ಹಾಗೂ ನಿರ್ದೇಶಕರುಗಳು ಮತ್ತು ಮುಂತಾದ ಪ್ರಮುಖರು ಉಪಸ್ಥಿತರಿದ್ದರು.

## ತರಬೇತಿ ಕಾರ್ಯಕ್ರಮ

### ರಾಷ್ಟ್ರೀಯ ಸಹಕಾರ ಶಿಕ್ಷಣ ಕೇಂದ್ರ, ನವದೆಹಲಿ
### (ರಾಷ್ಟ್ರೀಯ ಸಹಕಾರ ಯೂನಿಯನ್ ನಿ.,)

ಸಹಕಾರ ಸಂಸ್ಥೆಗಳಲ್ಲಿನ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಅಧ್ಯಕ್ಷರು, ನಿರ್ದೇಶಕರುಗಳಿಗಾಗಿ ಸಹಕಾರ ನಾಯಕತ್ವ ಅಭಿವೃದ್ಧಿ ಶಿಬಿರವನ್ನು ದಿನಾಂಕ 17.07.2017 ರಿಂದ 19.07.2017ರವರೆಗೆ ರಾಷ್ಟ್ರೀಯ ಸಹಕಾರ ಶಿಕ್ಷಣ ಕೇಂದ್ರ, ನವದೆಹಲಿಯಲ್ಲಿ ಆಯೋಜಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಆಡಳಿತ ಪರಿಣಿತಿ ಅಭಿವೃದ್ಧಿ ವಿಷಯಗಳ ಬಗ್ಗೆ ಆದ್ಯತೆ ನೀಡಲಾಗುವುದೆಂದು ಪತ್ರದಲ್ಲಿ ತಿಳಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ಪ್ರತಿನಿಧಿಗಳಿಗೆ ರಾಷ್ಟ್ರೀಯ ಸಹಕಾರ ಶಿಕ್ಷಣ ಕೇಂದ್ರದವರು 1) III ಟೈರ್ ಎಸಿ/ ಬಸ್ ಪ್ರಯಾಣದ ದರವನ್ನು ಪಾವತಿಸಲಾಗುವುದು. ಟಿಕೆಟ್‌ನ್ನು/ ಝೆರಾಕ್ಸ್ ಪ್ರತಿಯನ್ನು ಒದಗಿಸುವುದು ಕಡ್ಡಾಯ. 2) ಊಟ, ವಸತಿ, ಉಪಹಾರ ವ್ಯವಸ್ಥೆಗಳನ್ನು ತರಬೇತಿ ಅವಧಿಗೆ ಮಾತ್ರ ಒದಗಿಸಲಾಗುವುದು. 3) ತರಬೇತಿ ಮತ್ತು ತರಬೇತಿ ಅಧ್ಯಯನ ಸಾಹಿತ್ಯ ಒದಗಿಸಲಾಗುವುದು. 4) ಅಧ್ಯಯನ ಪ್ರವಾಸ ವ್ಯವಸ್ಥೆಗಳನ್ನು ಒದಗಿಸುತ್ತಾರೆ.

ಈ ತರಬೇತಿ ಕಾರ್ಯಕ್ರಮ ರಾಷ್ಟ್ರಮಟ್ಟದಾಗಿರುವುದರಿಂದ ರಾಜ್ಯದ ಸೌಹಾರ್ದ ಸಹಕಾರಿಗಳಿಂದ ಒಟ್ಟಾರೆ 4-5 ಜನರಿಗೆ ಅವಕಾಶ ಇದೆ. ತಮ್ಮ ಸಹಕಾರಿಯಿಂದ ಪ್ರತಿನಿಧಿಯನ್ನು ಕಳುಹಿಸಿ, ಕಾರ್ಯಕ್ರಮದ ಪ್ರಯೋಜನ ಪಡೆಯಲು ತಿಳಿಸಿದೆ. ಅರ್ಜಿಗಳನ್ನು ನಿರ್ದೇಶಕರು, ರಾಷ್ಟ್ರೀಯ ಸಹಕಾರ ಶಿಕ್ಷಣ ಕೇಂದ್ರ, ನಂ.3, ಸಿರಿ ಇನ್‌ಸ್ಟಿಟ್ಯೂಷನಲ್ ಏರಿಯಾ, ಆಗಸ್ಟ್ ಕ್ರಾಂತಿ ಮಾರ್ಗ, ನವದೆಹಲಿ-110016 ಇಲ್ಲಿಗೆ ಕಳಹಿಸಿ. ಹೆಚ್ಚಿನ ವಿವರಗಳಿಗಾಗಿ ಮೊಬೈಲ್ ಸಂಖ್ಯೆ 9811503851 ಅನ್ನು ಸಂಪರ್ಕಿಸುವುದು. ತಮ್ಮ ಭಾಗವಹಿಸುವಿಕೆಯ ನೋಂದಣಿಯನ್ನು ಖಚಿತ ಪಡಿಸಿಕೊಂಡ ನಂತರವೇ ದೆಹಲಿಗೆ ಹೊರಡಲು ತಿಳಿಸಿದೆ.

## ಶಾಖೆಯ ಉದ್ಘಾಟನೆ



**ಶಿವಮೊಗ್ಗ** : ಜಿಎಂ ಸೌಹಾರ್ದ ಪತ್ತಿನ ಸಹಕಾರಿ ನಿ., ದಾವಣಗೆರೆ ಸಹಕಾರಿಯ 5ನೆಯ ಶಾಖೆಯನ್ನು ಶಿವಮೊಗ್ಗ ನಗರದ ಜೈಲ್ ರಸ್ತೆಯಲ್ಲಿರುವ "ಶಿವಾ ಕಾಂಪ್ಲೆಕ್ಸ್" ಕಟ್ಟಡದಲ್ಲಿ ದಿನಾಂಕ: 27.04.2017ರಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ.ಎಂ.ಪ್ರಸನ್ನಕುಮಾರ್‌ರವರು ಉದ್ಘಾಟಿಸಿದರು. ಸದರಿ ಸಮಾರಂಭದಲ್ಲಿ ಸಹಕಾರಿಯ ಉಪಾಧ್ಯಕ್ಷರು, ನಿರ್ದೇಶಕರುಗಳು, ಪ್ರಧಾನ ವ್ಯವಸ್ಥಾಪಕರು, ಸಹಕಾರಿಯ ಧುರೀಣರು, ಸಹಕಾರ ಇಲಾಖೆ ಅಧಿಕಾರಿಗಳು, ಗಣ್ಯ ವ್ಯಕ್ತಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

## "ಜಲದಾನ್" ವಾಟರ್ ಹೀರೋ ಪ್ರಶಸ್ತಿ




**ಮುಂಬೈ :** ಗ್ರಾಮೀಣ ಭಾರತದಲ್ಲಿ ಸಮಗ್ರ ಗ್ರಾಮೀಣಾಭಿವೃದ್ಧಿಗಾಗಿ ಕೊಡಮಾಡುವ "ಜಲದಾನ್" ವಾಟರ್ ಹೀರೋ ಅಂತರರಾಷ್ಟ್ರೀಯ ಪ್ರಶಸ್ತಿಯನ್ನು ಸಿಂಧನೂರು ಪತ್ತಿನ ಸೌಹಾರ್ದ ಸಹಕಾರಿಯ ನಿರ್ದೇಶಕರಾದ ಡಾ. ಚನ್ನನಗೌಡ ಆರ್.ಪಾಟೀಲರವರು ಭಾಜನರಾಗಿದ್ದಾರೆ. ಸಿ.ಎನ್.ಎನ್. 18 ದೂರದರ್ಶನ ಹಾಗೂ ಗ್ಲೋಬಲ್ ಫಾರ್ ಸಿರೇಕ್ ಸುಲಭ ಶೌಚಾಲಯ ಇವರುಗಳ ಸಹಯೋಗದಲ್ಲಿ ಕೊಡಮಾಡುವ ಪ್ರಶಸ್ತಿಯನ್ನು ಮಹಾರಾಷ್ಟ್ರದ ಮುಖ್ಯಮಂತ್ರಿ ಶ್ರೀ ದೇವೇಂದ್ರ ಫಡ್ನಾವಿಸ್‌ರವರು ಮುಂಬೈನಲ್ಲಿ ನಡೆದ ಸಮಾರಂಭದಲ್ಲಿ ಪ್ರಧಾನ ಮಾಡಿದರು. ದೇಶದಲ್ಲಿ ಜಲ ಹಾಗೂ ಪರಿಸರ ಸಂರಕ್ಷಣೆ ಮತ್ತು ನೀರಿನಿಂದ ಬರುವ ಕಾಯಿಲೆಗಳನ್ನು ತಡೆಯುವ ಕಾರ್ಯದಲ್ಲಿ ಕಾರ್ಯನಿರ್ವಹಿಸುವ ಸಾಧಕರನ್ನು ಗುರುತಿಸಿ ಈ ಪ್ರಶಸ್ತಿಯನ್ನು ಕೊಡಲಾಗುತ್ತದೆ.

## ಶಾಖೆಯ ಉದ್ಘಾಟನೆ




**ಪುತ್ತೂರು :** ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ದರ್ಬೆ, ಪುತ್ತೂರು ಸಹಕಾರಿಯ 17ನೇ ಶಾಖೆಯನ್ನು ದಿನಾಂಕ 23-04-2017ರಂದು "ರಾಜಾಪುರ ಸಾರಸ್ವತ ಸಮಾಜ ಭವನ", ಮಾಚೋಹಳ್ಳಿ, ಬೆಂಗಳೂರಿನಲ್ಲಿ ಯಲಹಂಕ ಕ್ಷೇತ್ರದ ಶಾಸಕರಾದ ಶ್ರೀ ಎಸ್.ಆರ್.ವಿಶ್ವನಾಥ್‌ರವರು ಉದ್ಘಾಟಿಸಿ, ಶುಭಹಾರೈಸಿದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್ಚಂದ್ರರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಸಂಸ್ಥೆಯ ವತಿಯಿಂದ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಸೇವೆ ಸಲ್ಲಿಸಿ ಗುರುತಿಸಲ್ಪಟ್ಟ ಸಾಧಕರುಗಳಾದ ಅಂತರಾಷ್ಟ್ರೀಯ ಚಿತ್ರಕಲಾವಿದರಾದ ಶ್ರೀ ವಿಲಾಸ್ ನಾಯಕ್, ಕನ್ನಡ ಚಿತ್ರರಂಗದ ನಾಯಕಿ ನಟಿ ಸುಕೃತ ವಾಗ್ಲೆ, ಅಂತರಾಷ್ಟ್ರೀಯ ಖ್ಯಾತಿಯ ವೈದ್ಯರಾದ ಡಾ. ವಿದ್ಯಾಧರ್, ವಯಲಿನ್ ಪ್ರವೀಣರಾದ ಶ್ರೀ ರಾಜೇಶ್ ಕುಂಭಕೋಡುಣ್ಣಾಹಿತಿ ನಾರಾಯಣ್ ಗಾವಲ್ಕರ್‌ರವರನ್ನು ಗೌರವಿಸಲಾಯಿತು.

## ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ 2017-18ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆ




**ಕೊಂಬೆಟ್ಟು :** ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಪುತ್ತೂರು ಸಹಕಾರಿಯ ವಾರ್ಷಿಕ ಕ್ರಿಯಾ ಯೋಜನೆಯು ಕೊಂಬೆಟ್ಟುವಿನಲ್ಲಿರುವ ಮರಾಠಿ ಸಮಾಜ ಸೇವಾ ಸಂಘದ ಸಭಾ ಭವನದಲ್ಲಿ ನಡೆಯಿತು. "ಒಂದು ಸಮಾಜ ಶತಮಾನದಲ್ಲಿ ಮಾಡಿದ ಕೆಲಸವನ್ನು ಒಂದು ನಿಷ್ಠಾವಂತ, ಪ್ರಾಮಾಣಿಕ, ಉತ್ಸಾಹಿ ಯುವಜನತೆಯ ಗುಂಪು ಒಂದು ವರ್ಷದಲ್ಲಿ ಸಾಧಿಸಬಲ್ಲದು" ಎಂಬ ಧ್ಯೇಯ ವಾಕ್ಯದೊಂದಿಗೆ ವಾರ್ಷಿಕ ಕ್ರಿಯಾ ಯೋಜನೆ ಕಾರ್ಯಕ್ರಮವು ನಡೆಯಿತು.

ಕಾರ್ಯಕ್ರಮದಲ್ಲಿ ಪ್ರಾಸ್ತವಿಕವಾಗಿ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ವಿನಯ ಕುಮಾರ್ ಕಂದಡ್ಕ ಮಾತನಾಡಿದರು. ರಾಷ್ಟ್ರ ಪ್ರಶಸ್ತಿ ವಿಜೇತರಾದ ಪುತ್ತೂರಿನ ಕ್ಷೇತ್ರ ಶಿಕ್ಷಣಾಧಿಕಾರಿಯಾದ ಶ್ರೀ ಶಶಿಧರ್ ದೀಪ ಪ್ರಜ್ವಲನೆ ಮಾಡಿ ಉದ್ಘಾಟಿಸಿದರು. ಶ್ರೀ ಸರಸ್ವತಿ ಸಹಕಾರಿಯ 2016-17ನೇ ಆರ್ಥಿಕ ವರ್ಷದ ಅಂಕಿ ಅಂಶಗಳು, ನಡೆದು ಬಂದ ಹಾದಿ ಹಾಗೂ 2017-18ನೇ ಸಾಲಿನ ಯೋಜನೆಗಳ ಕುರಿತು ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಚರ್ಚಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್ಚಂದ್ರರವರು 2017-18ನೇ ಸಾಲಿನ ಬಜೆಟ್ ಮಂಡಿಸಿ ಮಾತನಾಡುತ್ತಾ ಶ್ರೀ ಸರಸ್ವತಿ ಸಹಕಾರಿಯು ರಾಜ್ಯದ ಮಾದರಿ ಸಂಸ್ಥೆಯಾಗಿ ಬೆಳೆದಿರುವುದು ನಮಗೆಲ್ಲರಿಗೂ ಹೆಮ್ಮೆಯ ವಿಚಾರ, ಪ್ರಾಮಾಣಿಕತನ, ನಿಷ್ಠೆಯಿಂದ, 100% ಹಾಜರಾತಿಯೊಂದಿಗೆ ಸಹಕಾರಿಯ ಅಭಿವೃದ್ಧಿಗೆ ನಿರಂತರವಾಗಿ ಕರ್ತವ್ಯ ನಿರ್ವಹಿಸುವಂತಾಗಬೇಕು ಎಂದರು. ಕಾರ್ಯಕ್ರಮದಲ್ಲಿ ಪ್ರಸಕ್ತ ಆರ್ಥಿಕ ವರ್ಷದಲ್ಲಿ ವಿವಾಹವಾದ ಸಹಕಾರಿಯ ಸಿಬ್ಬಂದಿಗಳಿಗೆ ಶುಭಹಾರೈಸಲಾಯಿತು. ಕಾರ್ಯಕ್ರಮದಲ್ಲಿ ಸಹಕಾರಿಯ ಎಲ್ಲಾ ನಿರ್ದೇಶಕರು ಹಾಗೂ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

ಈ ಸಂದರ್ಭದಲ್ಲಿ ರಾಷ್ಟ್ರ ಪ್ರಶಸ್ತಿ ವಿಜೇತರಾದ ಪುತ್ತೂರಿನ ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀ ಶಶಿಧರ್‌ರವರನ್ನು ಸನ್ಮಾನಿಸಲಾಯಿತು.

## ಆರ್ಥಿಕ ವರ್ಷವಾಗಿ ಜನವರಿ–ಡಿಸೆಂಬರ್ ಪರಿಗಣಿಸಲು ಪ್ರಧಾನಿ ನರೇಂದ್ರ ಮೋದಿ ಇಂಗಿತ



**ಹೊಸದಿಲ್ಲಿ :** ಪ್ರಧಾನಿ ನರೇಂದ್ರ ಮೋದಿಯವರು ದೇಶದಲ್ಲಿ ಆರ್ಥಿಕ ವರ್ಷದ ಲೆಕ್ಕಾಚಾರದ ಪದ್ಧತಿಯನ್ನು ಈಗಿನ ಏಪ್ರಿಲ್–ಮಾರ್ಚ್ ಬದಲಿಗೆ ಜನವರಿ–ಡಿಸೆಂಬರ್‌ಗೆ ಬದಲಿಸುವ ಇಂಗಿತವನ್ನು ವ್ಯಕ್ತಪಡಿಸಿದ್ದಾರೆ. ಇತ್ತೀಚೆಗೆ ನಡೆದ ನೀತಿ ಆಯೋಗದ ಸಭೆಯಲ್ಲಿ ಕೂಡ ಮೋದಿ ಈ ಬಗ್ಗೆ ಪ್ರಸ್ತಾಪಿಸಿದ್ದಾರೆ. ಈ ಸಂಬಂಧ ರಾಜ್ಯಗಳೂ ಅವಲೋಕನ ನಡೆಸಬೇಕು ಎಂದು ಮೋದಿ ತಿಳಿಸಿದ್ದಾರೆ.

ಒಂದು ವೇಳೆ ಜನವರಿ–ಡಿಸೆಂಬರ್ ಕ್ರಮ ಜಾರಿಯಾದರೆ 1867ರಲ್ಲಿ ಅಸ್ತಿತ್ವಕ್ಕೆ ಬಂದಿದ್ದ, ಬ್ರಿಟಿಷ್ ಸರ್ಕಾರಕ್ಕೆ ಅನುಗುಣವಾಗಿದ್ದ ಏಪ್ರಿಲ್–ಮಾರ್ಚ್ ಪದ್ಧತಿ ಇತಿಹಾಸದ ಪುಟ ಸೇರಲಿದೆ. ಈ ಡಿಸೆಂಬರ್ ಜನವರಿ ಸುಧಾರಣೆಯಿಂದ ಪ್ರಯೋಜನವೇನು? ಇಲ್ಲಿದೆ ವಿವರ.

ಕೃಷಿ ಕ್ಷೇತ್ರಕ್ಕೆ ಅನುಕೂಲಕರ : ಅತಿ ಹೆಚ್ಚು ಪ್ರಯೋಜನ ಕೃಷಿ ಕ್ಷೇತ್ರಕ್ಕೆ ಸಿಗಲಿದೆ. ಸದ್ಯದ ವ್ಯವಸ್ಥೆಯಲ್ಲಿ ಸರ್ಕಾರಕ್ಕೆ ತನ್ನ ಆಯವ್ಯಯದಲ್ಲಿ ಕೃಷಿ ಕ್ಷೇತ್ರದ ಮೇಲೆ ಮುಂಗಾರು ಮಳೆಯ ಪ್ರಭಾವವನ್ನು ಅಳೆಯಲು ಆಗುತ್ತಿಲ್ಲ. ಮತ್ತೊಂದು ಕಡೆ ಕೃಷಿ ಭಾರತದ ಜಿಡಿಪಿಯಲ್ಲಿ ಶೇ.15ರಷ್ಟು ಪಾಲನ್ನು ಹೊಂದಿದ್ದು, ಮಹತ್ವದ್ದಾಗಿದೆ. ಜೂನ್–ಸೆಪ್ಟೆಂಬರ್ ಅವಧಿಯಲ್ಲಿ ಮಳೆಯ ಕೊರತೆಯಾಗಿ ಬರದ ಪರಿಸ್ಥಿತಿ ನಿರ್ಮಾಣವಾಗುವ ಲಕ್ಷಣ ಕಾಣಿಸಿಕೊಂಡರೆ, ಅನುದಾನ ಮಂಜೂರು ಮಾಡಲು ಜನವರಿ–ಡಿಸೆಂಬರ್ ಆರ್ಥಿಕ ವರ್ಷದ ಪದ್ಧತಿಯಿಂದ ಹೆಚ್ಚು ಅನುಕೂಲ ಎನ್ನಲಾಗುತ್ತಿದೆ.

ಬಹುತೇಕ ರಾಷ್ಟ್ರಗಳ ಅನುಕರಣೆ : ಈಗ 156 ದೇಶಗಳು ಜನವರಿ–ಡಿಸೆಂಬರ್ ಪದ್ಧತಿಯ ಆರ್ಥಿಕ ವರ್ಷವನ್ನು ಅನುಸರಿಸುತ್ತಿವೆ. ಭಾರತವೂ ಬದಲಿಸಿಕೊಂಡರೆ, ವಿಶ್ವ ಆರ್ಥಿಕತೆಯ ಲೆಕ್ಕಾಚಾರಗಳಿಗೆ ಹೊಂದಿಕೊಂಡಂತಾಗುತ್ತದೆ. ಅಭಿವೃದ್ಧಿ ಹೊಂದಿರುವ ಬಹುತೇಕ ದೇಶಗಳು ಜನವರಿ–ಡಿಸೆಂಬರ್ ಪದ್ಧತಿಯನ್ನೇ ಪಾಲಿಸುತ್ತಿವೆ. ಮಾಜಿ ಮುಖ್ಯ ಆರ್ಥಿಕ ಸಲಹೆಗಾರ ಶಂಕರ್ ಆಚಾರ್ಯ ನೇತೃತ್ವದ ಸಮಿತಿಯು ಈ ಬದಲಾವಣೆಯ ಅಗತ್ಯವನ್ನು ಪ್ರತಿಪಾದಿಸಿತ್ತು.

## ಸುಕೋ ಬ್ಯಾಂಕ್ ಸಿಬ್ಬಂದಿಯವರಿಗೆ ತರಬೇತಿ ಹಾಗೂ ಸುಕೋ ಬ್ಯಾಂಕ್ ದಿನಾಚರಣೆ

### ಆಧುನಿಕ ಕಾರ್ಯಶೈಲಿಯನ್ನು ಅಳವಡಿಸಿಕೊಳ್ಳುವುದರಲ್ಲಿ ಸುಕೋ ಬ್ಯಾಂಕ್ ಮಾದರಿಯಾಗಿದೆ - ಶರಣಗೌಡ ಜಿ. ಪಾಟೀಲ

ರಾಜ್ಯದ ಪ್ರತಿಷ್ಠಿತ ಸೌಹಾರ್ದ ಸಹಕಾರಿ ಬ್ಯಾಂಕುಗಳಲ್ಲಿ ಒಂದಾದ ಸುಕೋ ಬ್ಯಾಂಕ್ ತನ್ನ ಎಲ್ಲಾ ಶಾಖೆಗಳ 150ಕ್ಕೂ ಹೆಚ್ಚು ಸಿಬ್ಬಂದಿಯವರಿಗೆ ದಕ್ಷತೆ ಹೆಚ್ಚಿಸುವ ನಿಟ್ಟಿನಲ್ಲಿ ದಿನಾಂಕ 29–04–2017 ರಿಂದ 01–05–2017ರವರೆಗೆ ತರಬೇತಿ ಕಾರ್ಯಕ್ರಮ ಮತ್ತು 2016–17ನೇ ಸಾಲಿನ ಪ್ರಗತಿಯ ಪರಿಶೀಲನೆ ಹಾಗೂ 2017–18ನೇ ಸಾಲಿನ ಗುರಿ ನಿಗದೀಕರಿಸುವ ಕಾರ್ಯಕ್ರಮವನ್ನು ಜರುಗಿಸುವ ಜೊತೆಗೆ ಸುಕೋ ಬ್ಯಾಂಕ್ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ, ಮಾತನಾಡಿದ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಸಂಯುಕ್ತ ಸಹಕಾರಿಯ ಸಹಯೋಗದಲ್ಲಿ ಏರ್ಪಡಿಸಿದ ಈ ತರಬೇತಿ ಬಹಳ ವ್ಯವಸ್ಥಿತವಾಗಿ ನಡೆದಿದೆ. ಉತ್ತಮ ವಿಷಯಗಳನ್ನು ಅಳವಡಿಸಲಾಗಿದೆ. ನುರಿತ ಸಂಪನ್ಮೂಲ ವ್ಯಕ್ತಿಗಳನ್ನು ಉಪನ್ಯಾಸಕಾರರಾಗಿ ಕರೆಸಲಾಗಿದೆ. ಸಂಯುಕ್ತ ಸಹಕಾರಿಯು ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಹಾಗೂ ಸೌಹಾರ್ದ ಸಹಕಾರಿ ಬ್ಯಾಂಕುಗಳ ಅಭಿವೃದ್ಧಿಗಾಗಿ ಹಮ್ಮಿಕೊಳ್ಳುತ್ತಿರುವ ತರಬೇತಿ ಕಾರ್ಯಕ್ರಮಗಳ ಬಗ್ಗೆ ವಿವರಿಸಿದರು.

ಪ್ರಾರಂಭದಲ್ಲಿ ಬ್ಯಾಂಕಿನ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಪರಿಮಳಾಚಾರ್ಯ ಅಗ್ನಿಹೊತ್ರಿಯವರು ಮಾತನಾಡಿ, ಸುಕೋ ಬ್ಯಾಂಕ್ 2016–17ನೇ ಸಾಲಿನಲ್ಲಿ ಉತ್ತಮ ಸಾಧನೆಯನ್ನು ಮಾಡಿರುವುದಕ್ಕೆ ಕಾರಣ ಉತ್ತಮ ಆಡಳಿತ ಮಂಡಲಿ ಹಾಗೂ ಸಿಬ್ಬಂದಿಯವರ ಉತ್ತಮ ಕಾರ್ಯನಿರ್ವಹಣೆ ಎಂದು ತಿಳಿಸಿ, ಎಲ್ಲಾ ಸಿಬ್ಬಂದಿಯವರನ್ನು ಅಭಿನಂದಿಸಿದರು. ಸಂಯುಕ್ತ ಸಹಕಾರಿಯು ಈ ಕಾರ್ಯಕ್ರಮಕ್ಕೆ ಸಹಯೋಗ ನೀಡಿರುವುದಕ್ಕೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯವರಿಗೆ ಕೃತಜ್ಞತೆ ಸಲ್ಲಿಸಿದರು.

ಅಧ್ಯಕ್ಷತೆ ವಹಿಸಿ, ಮಾತನಾಡಿದ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಮೋಹಿತ್ ಮಸ್ಕಿಯವರು ಬ್ಯಾಂಕು ಪ್ರತಿ ವರ್ಷ ಈ ರೀತಿಯ ಕಾರ್ಯಕ್ರಮವನ್ನು ಹಮ್ಮಿಕೊಂಡು ಸಿಬ್ಬಂದಿಯವರ ಕಾರ್ಯಸಾಧನೆಯನ್ನು ಗುರುತಿಸುವ, ಅವರನ್ನು ಪ್ರೋತ್ಸಾಹಿಸುವ ಹಾಗೂ ಮುಂದಿನ ವರ್ಷಗಳಲ್ಲಿ ಕಾರ್ಯನಿರ್ವಹಣೆಗೆ ಬೇಕಾಗುವ ಅಗತ್ಯ ಮಾಹಿತಿಯನ್ನು ಒದಗಿಸುವ ಕಾರ್ಯಕ್ರಮದ ಜೊತೆಗೆ ಮುಂದಿನ ವರ್ಷದ ಗುರಿಯನ್ನು ನಿಗದಿ ಮಾಡಲಾಗುತ್ತದೆ. ಇದರಿಂದಾಗಿ ಬ್ಯಾಂಕಿನ ಪ್ರಗತಿ ಉತ್ತಮವಾಗುತ್ತಿದೆ ಎಂದರು. ಕಳೆದ ವರ್ಷ ನಮ್ಮ ಸಂಸ್ಥೆ ಛೇಂಜ್ ಎನ್ನುವ ವಿಷಯವನ್ನು ತೆಗೆದುಕೊಳ್ಳಲಾಗಿತ್ತು. ಅದರಂತೆ, ಎಲ್ಲಾ ಬದಲಾವಣೆಗಳು ಆಗಿವೆ. ಅಂತೆಯೇ, ಈ ವರ್ಷವೂ ಸಹ ಉತ್ತಮ ಪ್ರಗತಿಯತ್ತ ಸಾಗಬೇಕಿದೆ ಎಂದರು.

ಸುಕೋ ಬ್ಯಾಂಕ್ ಸ್ಥಾಪಕ ಅಧ್ಯಕ್ಷರಾದ ಶ್ರೀ ಮನೋಹರ ಮಸ್ಕಿ, ತರಬೇತಿದಾರರಾದ ಶ್ರೀ ನಂದೀಶ ಹಿರೇಮಠ, ಶ್ರೀ ಬಸವರಾಜ ಹಾಗೂ ಶ್ರೀ ವಿಜಯಕುಮಾರರವರು ವಿವಿಧ ವಿಷಯಗಳ ಬಗ್ಗೆ ಉಪನ್ಯಾಸಗಳನ್ನು ನೀಡಿದರು.



# ತತ್ವವೊಂದರ ಹಿಡಿತಕೊಗ್ಗದಿಹ ಬಾಳೇನು ಕಿತ್ತಗಾಳಿಯ ಪಟವೋ

ಎಂ.ಬಸಪ್ಪ, ಸಹಕಾರ ಸಂಘಗಳ ಉಪನಿಬಂಧಕರು (ನಿವೃತ್ತ), ಬೆಂಗಳೂರು.

"ಉದರ ನಿಮಿತ್ತಂ ಬಹುಕೃತ ವೇಷಂ" ಎಂಬ ಶಂಕರ ವಾಣಿಯನ್ವಯ ಹೊಟ್ಟೆಯ ಪಾಡಿಗಾಗಿ ಶತಸುಳ್ಳುಗಳನ್ನು ನುಡಿಯುವ ಇಂದಿನ ನಾವುಗಳು "ಹೇಳುವುದೊಂದಾದರೆ ಮಾಡುವುದೇ ಇನ್ನೊಂದು" ಹಣಸಂಗ್ರಹಣೆಯನ್ನೇ ಏಕೈಕ ಗುರಿಯನ್ನಾಗಿಸಿ ಕೊಂಡಿರುವ ಇಂದಿನ ಜನರ ತಾಕಲಾಟದ ಮನೋಭಾವವನ್ನು ವೀಕ್ಷಿಸಿದ ಡಿ.ವಿ.ಜಿ.ಯವರು ಬದುಕಿನ ಸಿದ್ಧಾಂತದ ಬಗ್ಗೆ ಬರೆದಿರುವ ಪದ್ಯವನ್ನು ಅರಿಯೋಣ.

ಚಿಂತನಶೀಲ ಜೀವಿಗಳಾದ ಡಿ.ವಿ.ಜಿ.ಯವರು ಬದುಕಿದಂತೆ ಬರೆದು, ಬರೆದದ್ದನ್ನು ಜೀವಿತದಲ್ಲಿ ಪ್ರಾಯೋಗಿಕವಾಗಿ ತಂದವರೆಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಅವರ ಪದ್ಯಗಳಲ್ಲಿ ಹುಟ್ಟಿನಿಂದ ಸಾವಿನವರೆಗೆ, ಆತ್ಮನಿಂದ ಪರಮಾತ್ಮನವರೆಗೆ ಮಾತ್ರವಲ್ಲದೇ ಇತರೇ ಪ್ರಾಕಾರದ ವಿಷಯಗಳನ್ನೂ ಸಹ ವಿಷದವಾಗಿ ಪ್ರಸ್ತಾಪಿಸಿದ್ದಾರೆ. ಶುದ್ಧ ಸಮಾಜ ನಿರ್ಮಾಣದ ಕನಸನ್ನು ಕಂಡವರಿವರಾದ್ದರಿಂದ ಸಮಾಜದ ಶಾಂತಿಯುತ ಹಾಗೂ ಸೌಹಾರ್ದಯುತ ಬೆಳವಣಿಗೆಗಾಗಿ ಜನರು ತಮ್ಮ ತಮ್ಮ ಬದುಕಿನಲ್ಲಿ ತತ್ವಗಳನ್ನು ಅಳವಡಿಸಿಕೊಳ್ಳುವುದು ಅತ್ಯವಶ್ಯಕವೆಂದಿದ್ದಾರೆ. ನಿತ್ಯಜೀವನದ ನಡವಳಿಗಳಲ್ಲಿ ಅಡಕವಾಗಿರುವ ಸರಳ ಅನಿಸಿದರೂ ಸುಂದರವಾದ ಉದಾಹರಣೆಗಳ ಮೂಲಕ ತತ್ವಾಚರಣೆಗಳನ್ನು ನಮ್ಮ ಕಣ್ಮುಂದೆ ಚಿತ್ರೀಕೃತವಾದಂತೆ ವರ್ಣಿಸುವ ಈ ಪದ್ಯದ ಸೊಬಗನ್ನು ಗಮನಿಸಿ.

"ಸುತ್ತಸುತ್ತುವ ಖಗವ ಗೂಡನೆನಪೆಳೆಯುವುದು
ಗೊತ್ತುನೂಲ್ ಪಿಡಿದಿಹುದು ದನವ ಬಯಲಿನಲಿ
ತತ್ವವೊಂದರ ಹಿಡಿತಕೊಗ್ಗದಿಹ ಬಾಳೇನು
ಕಿತ್ತ ಗಾಳಿಯ ಪಟವೋ ಮಂಕುತಿಮ್ಮ"

ಪಕ್ಷಿಯೊಂದರ ತೀವ್ರ ಅಲೆದಾಟ ಹಾಗೂ ಹಾರಾಟದ ಮಧ್ಯೆಯೂ ತನ್ನ ಸ್ಥಿರನೆಲೆಯನ್ನು ನೆನಪಿನಲ್ಲಿಟ್ಟುಕೊಂಡಿರುವ ಹಾಗೂ ದನವೊಂದು ತನ್ನ ಹೊಟ್ಟೆ ತುಂಬಿಸಿಕೊಳ್ಳಲು ನಿರ್ದಿಷ್ಟ ಪರಿಧಿಯೊಳಗೆ ಸುತ್ತುವ ಉತ್ಕೃಷ್ಟವಾದ ಉದಾಹರಣೆಯನ್ನು ನೀಡುತ್ತಿದ್ದಾರೆ.

ಮೃಗ ಖಗ ಪಕ್ಷಿಗಳು ತಮ್ಮಗಳ ಆಹಾರಾನ್ವೇಷಣೆಗಾಗಿ ಕಾಡಿನ ವಿವಿಧ ಮೂಲೆಮೂಲೆಗಳಲ್ಲಿ ಹಾರಾಡಿ ದಿನವನ್ನು ಕಳೆದರೂ ತನ್ನ ವಾಸದ ಮೂಲಗೂಡು ಎಲ್ಲಿದೆಯೆಂಬುದನ್ನು ತನ್ನ ಸ್ಥಿರ ನೆನಪಿನಲ್ಲಿಟ್ಟುಕೊಂಡಿರುತ್ತದೆ. ತೀವ್ರ ಅಲೆದಾಟದ ಮಧ್ಯೆಯೂ ಸ್ಥಿರ ನೆನಪಿನ ತತ್ವವನ್ನು (Fixed Memory Principle) ಜಗತ್ತೇ ಮೆಚ್ಚತಕ್ಕ ಅಂಶವೆಂದಿದ್ದಾರೆ.

ಅಂತೆಯೇ ದನವೊಂದಕ್ಕೆ ತನ್ನ ಹೊಟ್ಟೆ ತುಂಬಿಸಿಕೊಳ್ಳಲು ಅವಕಾಶವಿದ್ದು, ಹುಲ್ಲಿನ ಮೈದಾನದಲ್ಲೆಲ್ಲಾ ದುರಾಸೆಯಿಂದ ಅತ್ತಿಂದಿತ್ತ ಓಡಾಡಿ ಅಲೆದಲೆದು ಹೊಟ್ಟೆ ತುಂಬಿಸಿಕೊಳ್ಳದೇ ಬರುವ ದನಕ್ಕಿಂತ ಒಂದು ಹಗ್ಗದಿಂದ ಬಂಧಿಸಲ್ಪಟ್ಟ ದನವಾದರೂ ತನ್ನ ಹಗ್ಗದ ನಿರ್ದಿಷ್ಟ ಪರಿಧಿಯೊಳಗೆ ಲಭ್ಯವಿರುವ ಹುಲ್ಲನ್ನು ಅಚ್ಚುಕಟ್ಟಾಗಿ ಮೇದು ತನ್ನ ಹೊಟ್ಟೆ ತುಂಬಿಸಿಕೊಂಡ ದನವು "ತೃಪ್ತಿಯ ದನ"ವೆಂಬ ಅಂಶವನ್ನು ಮೆಚ್ಚುಗೆಯ ವಿಷಯವಾಗಿ ತಂದಿದ್ದಾರೆ.

ಬದುಕು ತಮಗೂ ಮತ್ತು ಇತರರಿಗೂ ಸಂತೋಷಮಯ ಹಾಗೂ ಸಂತೃಪ್ತವಾಗಬೇಕಾದರೆ ನಿರ್ವಹಣೆಯಲ್ಲಿ ತತ್ವ ಹಾಗೂ ಮಿತಿಗಳನ್ನು ಅರಸುವುದು ಅತ್ಯಂತ ಅವಶ್ಯಕವಾದದ್ದೆಂಬ ಅಂಶ ಈ ಪದ್ಯದಲ್ಲಿ ಹೊರಹೊಮ್ಮಿದೆ. ಯಾವುದೇ ವ್ಯಕ್ತಿಯಾಗಲೀ ತನ್ನ ಜೀವನವು ಆದರ್ಶಮಯವಾಗಿರಬೇಕಾದರೆ ಅಂತಹ ವ್ಯಕ್ತಿಯು ತನ್ನದೇ ಆದ ತತ್ವಾದರ್ಶಗಳನ್ನು ಹೊಂದಿದ್ದಲ್ಲಿ ಮಾತ್ರ ಅದು ಅನುಕರಣ ಯೋಗ್ಯವಾಗಿರುತ್ತದೆ. ಇಲ್ಲದಿದ್ದಲ್ಲಿ ಸೂತ್ರವಿಲ್ಲದ ಗಾಳಿಯ ಪಟದಂತಾಗುತ್ತದೆಯೆನ್ನುವ ಮೂಲಕ ಸರ್ವರಿಗೂ ಸುಖಮಯವಾಗುವ "ಸಾರ್ವತ್ರಿಕ ತತ್ವ"ವಾದ ಸಹಕಾರವನ್ನು ನಿಮ್ಮ ನಿಮ್ಮ ಬಾಳಿನಲ್ಲಿ ತಂದುಕೊಳ್ಳಿ, ಹಿತಮಿತಿಗಳಿಂದ ಬದುಕಿ ಜೀವನಾದರ್ಶಗಳನ್ನು ಅನುಕರಣೆಯಲ್ಲಿ ತಂದು ಸಹಕಾರದ ಸುಖೀ ಜೀವನವನ್ನು ಅನುಷ್ಠಾನಗೊಳಿಸಿರೆಂಬ ಕರೆಯನ್ನು ಈ ಪದ್ಯದ ಮೂಲಕ ನೀಡುತ್ತಿದ್ದಾರೆ. ಇದರ ಸಾರಾಂಶವೆಂದರೆ "ನಿನಗೇನು ಬೇಡವೋ ಅದನ್ನು ನೀನು ಬೇರೆಯವರಿಗೆ ಮಾಡಬೇಡ" "Do not do to others what you should not want to be done to you" ಎಂಬುದೇ ಆಗಿದೆ.

## ದಿನಾಂಕ : 31.03.2017ಕ್ಕೆ ಅಂತ್ಯಗೊಂಡಿರುವ ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳ/ ಬ್ಯಾಂಕುಗಳ ಆರ್ಥಿಕ ಪ್ರಗತಿಯ ಅಂಕಿ ಅಂಶಗಳ ವಿವರಗಳು

### ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಪುತ್ತೂರು

| | | |
|---|---|---|
| ಠೇವಣಿಗಳು | : | ರೂ.144 ಕೋಟಿಗಳು |
| ಸಾಲಗಳು | : | ರೂ.123 ಕೋಟಿಗಳು |
| ದುಡಿಯುವ ಬಂಡವಾಳ | : | ರೂ.158 ಕೋಟಿಗಳು |
| ನಿವ್ವಳ ಲಾಭ | : | ರೂ.2.98 ಕೋಟಿಗಳು |
| ಸದಸ್ಯರು | : | 24,444 |
| ಶಾಖೆಗಳು | : | 16 |

### ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಂಗಳೂರು

| | | |
|---|---|---|
| ಶೇರು ಬಂಡವಾಳ | : | ರೂ.208 ಲಕ್ಷಗಳು |
| ಠೇವಣಿಗಳು | : | ರೂ.3500 ಲಕ್ಷಗಳು |
| ಸಾಲಗಳು | : | ರೂ.2100 ಲಕ್ಷಗಳು |
| ದುಡಿಯುವ ಬಂಡವಾಳ | : | ರೂ.4300 ಲಕ್ಷಗಳು |
| ಒಟ್ಟು ವ್ಯವಹಾರ | : | ರೂ.4900 ಲಕ್ಷಗಳು |
| ಲಾಭ | : | ರೂ.257 ಲಕ್ಷಗಳು |

### ಪವಮಾನ ಪತ್ತಿನ ಸೌಹಾರ್ದ ಸಹಕಾರಿ ನಿ., ಮಾನ್ವಿ

| | | |
|---|---|---|
| ಶೇರು ಬಂಡವಾಳ | : | ರೂ.28 ಲಕ್ಷಗಳು |
| ಠೇವಣಿಗಳು | : | ರೂ.300 ಲಕ್ಷಗಳು |
| ಸಾಲ ಮತ್ತು ಮುಂಗಡಗಳು | : | ರೂ.272 ಲಕ್ಷಗಳು |
| ಒಟ್ಟು ವ್ಯವಹಾರ | : | ರೂ.330 ಲಕ್ಷಗಳು |
| ನಿವ್ವಳ ಲಾಭ | : | ರೂ.1.21 ಲಕ್ಷಗಳು |

### ಅರಿಹಂತ ಅರ್ಬನ್ ಸೌಹಾರ್ದ ಕ್ರೆಡಿಟ್ ಸಹಕಾರಿ ಲಿ., ಹುಲ್ಲೋಳಿ

| | | |
|---|---|---|
| ಸದಸ್ಯರ ಸಂಖ್ಯೆ | : | 4,208 ಸದಸ್ಯರು |
| ವಸೂಲಾದ ಶೇರು ಬಂಡವಾಳ | : | 48,91,000 |
| ಕಾಯ್ದಿಟ್ಟ ನಿಧಿ & ಇತರೆ ನಿಧಿಗಳು | : | 5,77,83,341 |
| ಠೇವಣಿಗಳು | : | 68,40,99,027 |
| ಸಾಲಗಳು | : | 47,40,24,137 |
| ಗುಂತಾವಣೆಗಳು | : | 25,58,48,809 |
| ದುಡಿಯುವ ಬಂಡವಾಳ | : | 75,90,02,591 |
| ಲಾಭ | : | 1,17,10,566 |
| ಒಟ್ಟು ವಹಿವಾಟು | : | 392,89,81,647 |
| ಸಾಲ ವಸೂಲಾತಿ | : | 98 % |

ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲಾಗುತ್ತದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ

– ಸಂಪಾದಕರು

ನಿಮ್ಮ ಪ್ರಶ್ನೆ



ನಮ್ಮ ಉತ್ತರ

– ಸಿಎ॥ ಟಿ.ವಿ.ರವೀಂದ್ರನಾಥ್,
ಸಾಗರ

# ಆದಾಯ ತೆರಿಗೆ ಕಲಂ 269ಎಸ್‌ಟಿ ಸಂಬಂಧಿಸಿದಂತೆ ಪ್ರಶ್ನೋತ್ತರಗಳು

**1. ಈ ಕಲಂ 269ಎಸ್‌ಟಿ ಜಾರಿಗೆ ತಂದಿರುವ ಉದ್ದೇಶವೇನು?**

ಕಲಂ 269ಎಸ್‌ಟಿಯನ್ನು ಜಾರಿಗೆ ತಂದಿರುವ ಉದ್ದೇಶ ಸುಸ್ಪಷ್ಟವಾಗಿದೆ. ನಗದು ವ್ಯವಹಾರಗಳನ್ನು ನಿರ್ಬಂಧಿಸಿ ಕಾಳಹಣದ ಚಲಾವಣೆಯನ್ನು ನಿಯಂತ್ರಿಸುವುದು. ಈ ಕಲಂ ಆದಾಯ ತೆರಿಗೆ ಕಾಯ್ದೆಯ ಅಧ್ಯಾಯ 20ಬಿನಲ್ಲಿರುವ ಉಳಿದೆರಡು ಕಲಂಗಳಾದ 269ಎಸ್‌ಎಸ್ ಮತ್ತು 269ಟಿಗಳಿಗೆ ಪೂರಕವಾಗಿದೆ. ಈ ಮೂರೂ ಕಲಂಗಳು ನಿರ್ದಿಷ್ಟಪಡಿಸಿದ ಮಿತಿಗೆ ಮೀರಿದ ನಗದು ವ್ಯವಹಾರಗಳನ್ನು ನಿರ್ಬಂಧಿಸುತ್ತವೆ. ಇದುವರೆಗೆ ಠೇವಣಿ ಯಾ ಸಾಲಗಳ ಸ್ವೀಕಾರ/ ಮರುಪಾವತಿಗಳಿಗೆ ಮಾತ್ರವಿದ್ದ ನಿರ್ಬಂಧವನ್ನು ಎಲ್ಲಾ ರೀತಿಯ ಸ್ವೀಕಾರಗಳಿಗೆ ವಿಸ್ತರಿಸಲಾಗಿದೆ.

**2. ಈ ಕಲಂ 269ಎಸ್‌ಟಿ ಎಂದಿನಿಂದ ಜಾರಿಗೆ ಬರುತ್ತದೆ?**

ವಿತ್ತೀಯ ಕಾಯ್ದೆ 2017ರ ಕಲಂ 1(2)ರನ್ವಯ ಆದಾಯ ತೆರಿಗೆ ಕಾಯ್ದೆಯ ಕಲಂ 269ಎಸ್‌ಟಿ ದಿನಾಂಕ 01-04-2017ರಿಂದ ಜಾರಿಗೆ ಬರುವಂತಹುದಾಗಿರುತ್ತದೆ.

**3. ಈ ಕಲಂ 269ಎಸ್‌ಟಿ ಏನು ಹೇಳುತ್ತದೆ?**

ಕಲಂ 269ಎಸ್‌ಟಿಯ ಪ್ರಕಾರ ಯಾವುದೇ ವ್ಯಕ್ತಿಯು ಎರಡು ಲಕ್ಷ ರೂ.ಗಳು ಅಥವಾ ಹೆಚ್ಚು ಮೊತ್ತವನ್ನು

- ಒಂದು ದಿನದಲ್ಲಿ ಒಬ್ಬ ವ್ಯಕ್ತಿಯಿಂದ ಅಥವಾ
- ಒಂದು ವ್ಯವಹಾರಕ್ಕೆ ಸಂಬಂಧಿಸಿದಂತೆ ಅಥವಾ
- ಒಂದು ಘಟನೆ ಯಾ ಸಂದರ್ಭಕ್ಕೆ ಸಂಬಂಧಿಸಿದಂತೆ ಒಬ್ಬ ವ್ಯಕ್ತಿಯಿಂದ ಬ್ಯಾಂಕಿನ ಅಕೌಂಟ್ ಪೇಯೀ ಚೆಕ್ ಯಾ ಬ್ಯಾಂಕಿನ ಅಕೌಂಟ್ ಡ್ರಾಫ್ಟ್ ಯಾ ಬ್ಯಾಂಕ್ ಅಕೌಂಟಿನ ಮೂಲಕ ನಡೆಸುವ ಪಾವತಿ ತೀರುವಳಿ ವ್ಯವಸ್ಥೆಯ (Electronic Clearing System) ಹೊರತಾಗಿ ಬೇರೆ ಯಾವುದೇ ರೂಪದಲ್ಲಿ ಸ್ವೀಕರಿಸುವಂತಿಲ್ಲ.

**4. ಈ ಕಲಂ 269ಎಸ್‌ಟಿಯಿಂದ ಯಾರಿಗೆ ವಿನಾಯಿತಿ ಇದೆ?**

ಕಲಂ 269ಎಸ್‌ಟಿಯ ಅಂಶಗಳು ಕೆಳಕಂಡವರಿಗೆ ಅನ್ವಯಿಸುವುದಿಲ್ಲ;

- ಸರ್ಕಾರ, ಸಹಕಾರಿ ಬ್ಯಾಂಕುಗಳೂ ಸೇರಿದಂತೆ ಯಾವುದೇ ಬ್ಯಾಂಕು, ಅಂಚೆ ಕಛೇರಿಗಳ ಉಳಿತಾಯ ಖಾತೆಗಳ ಸ್ವೀಕೃತಿಗಳಿಗೆ,
- ಕಲಂ 269ಎಸ್‌ಎಸ್‌ನಲ್ಲಿ ತಿಳಿಸಿದ ವ್ಯವಹಾರಗಳಿಗೆ,
- ಕಾಲಕಾಲಕ್ಕೆ ಕೇಂದ್ರ ಸರ್ಕಾರವು ಅಧಿಕೃತ ಗೆಜೆಟ್‌ನಲ್ಲಿ ಪ್ರಕಟಿಸುವ ವ್ಯಕ್ತಿಗಳಿಗೆ, ವರ್ಗಗಳಿಗೆ, ಅಥವಾ ಸ್ವೀಕೃತಿಗಳಿಗೆ.

**5. ಕಲಂ 269ಎಸ್‌ಟಿ ಅಂಶಗಳನ್ನು ಉಲ್ಲಂಘಿಸಿದರೆ ಪರಿಣಾಮ ಏನಾಗುತ್ತದೆ?**

ಕಲಂ 271ಡಿಎ ಪ್ರಕಾರ ಕಲಂ 269ಎಸ್‌ಟಿಯ ಪ್ರಾವಧಾನಗಳನ್ನು ಉಲ್ಲಂಘಿಸಿದಲ್ಲಿ ಸಮಾನ ಮೊತ್ತದ ದಂಡ ಪಾವತಿಸಬೇಕಾಗುತ್ತದೆ.

**ಷರಾ :** ಅಂತಹ ಉಲ್ಲಂಘನೆಗಳಿಗೆ ಸೂಕ್ತ ಮತ್ತು ಸಾಕಷ್ಟು ಸಕಾರಣಗಳನ್ನು ಒದಗಿಸಿದಲ್ಲಿ ದಂಡ ವಿಧಿಸಲಾಗದು.

**6. ಯಾವ್ಯಾವ ಸ್ವೀಕೃತಿಗಳು ಈ ಕಲಂ 269ಎಸ್‌ಟಿಯ ವ್ಯಾಪ್ತಿಯಲ್ಲಿ ಬರುತ್ತವೆ?**

ಕಲಂ 269 ಎಸ್‌ಎಸ್‌ನಲ್ಲಿ ತಿಳಿಸಿದ ವ್ಯವಹಾರಗಳಿಗೆ ಹೊರತಾದ ಎಲ್ಲಾ ವ್ಯವಹಾರಗಳಿಗೆ ಸಂಬಂಧಿಸಿದ ಸ್ವೀಕೃತಿಗಳೂ ಈ ಕಲಂ 269ಎಸ್‌ಟಿಯ ವ್ಯಾಪ್ತಿಯಲ್ಲಿ ಬರುತ್ತವೆ. ಅಂದರೆ ಒಬ್ಬ ವ್ಯಕ್ತಿಯು ಮತ್ತೊಬ್ಬ ವ್ಯಕ್ತಿಯಿಂದ ಸ್ವೀಕರಿಸುವ ಯಾವುದೇ ರೀತಿಯ ಜಮಾಗಳೂ ಸ್ವೀಕೃತಿಯ ಪರಿಭಾಷೆಯಡಿಯಲ್ಲಿ ಬರುತ್ತವೆ. ಈ ನಿಯಮವು ಎಲ್ಲಾ ರೀತಿಯ ಸ್ವೀಕೃತಿಗಳಿಗೆ ಅಂದರೆ ಉಳಿತಾಯ, ಚಾಲ್ತಿ, ಪಿಗ್ಮಿ, ಸಾಲ, ಠೇವಣಿ, ಬಂಡವಾಳ, ಆದಾಯವೂ ಸೇರಿದಂತೆ ಯಾವುದೇ ಖಾತೆಗಳಿಗೆ ಮಾಡುವ ಜಮಾಗಳಿಗೆ ಅನ್ವಯಿಸುತ್ತದೆ. ಚರಾಸ್ತಿ–ಸ್ಥಿರಾಸ್ತಿಗಳ ಖರೀದಿ, ವಿಲೇವಾರಿ, ಸಾಲ, ಠೇವಣಿ, ದೇಣಿಗೆ, ದಾನ, ಮುಂಗಡ, ಕೈಗಡಗಳೂ ಸೇರಿದಂತೆ ಎಲ್ಲಾ ರೀತಿಯ ವ್ಯವಹಾರಗಳೂ ಈ ವ್ಯಾಖ್ಯಾನದಲ್ಲಿ ಸೇರುತ್ತವೆ.

**7. ಈ ಕಲಂ 269ಎಸ್‌ಟಿ ಪಾವತಿಗಳಿಗೂ ಅನ್ವಯಿಸುತ್ತದೆಯೇ?**

ಕಲಂ 269 ಎಸ್‌ಟಿನಲ್ಲಿ ಸ್ಪಷ್ಟಪಡಿಸಿದಂತೆ ಈ ಕಲಂ ಹಣವನ್ನು ಸ್ವೀಕರಿಸುವ ವ್ಯಕ್ತಿಗೆ ಅನ್ವಯಿಸುತ್ತದೆ. ಪ್ರತಿಯೊಂದು ಸ್ವೀಕಾರಕ್ಕೆ ಒಬ್ಬ ಪಾವತಿದಾರ ಇರಬೇಕು ಎನ್ನುವ ಹಿನ್ನೆಲೆಯಲ್ಲಿ ನೋಡಿದರೆ ಈ ಕಲಂನಲ್ಲಿ ತಿಳಿಸಿದ ಮೊತ್ತಕ್ಕಿಂತ ಹೆಚ್ಚು ಹಣವನ್ನು ಕಲಂನಲ್ಲಿ ತಿಳಿಸಿದ ಮಾರ್ಗಗಳಿಗೆ ಹೊರತಾಗಿ ಪಾವತಿಸುವಂತಿಲ್ಲ ಎಂದೂ ಅರ್ಥೈಸಬಹುದು. ಆದರೆ, ಮೂಲತಃ ಈ ಕಲಂ ಹಣ ಸ್ವೀಕಾರಕ್ಕೆ ಮಾತ್ರ ಅನ್ವಯಿಸುತ್ತದೆ.

**8. ಒಂದು ಘಟನೆ ಅಥವಾ ಸಂದರ್ಭದ ಪರಿಭಾಷೆ ಏನು?**

ಆದಾಯ ತೆರಿಗೆ ಕಾಯ್ದೆಯಲ್ಲಿ ಘಟನೆ ಅಥವಾ ಸಂದರ್ಭ ಎನ್ನುವ ಪದಗಳಿಗೆ ಪರಿಭಾಷೆಯನ್ನಾಗಲೀ, ನಿರ್ದಿಷ್ಟ ಅರ್ಥವನ್ನಾಗಲೀ ನೀಡಿರುವುದಿಲ್ಲ. ಆದರೆ, ಅವೆರಡನ್ನೂ ಒಟ್ಟಿಗೇ ಉಪಯೋಗಿಸಿರುವುದರಿಂದ ಎರಡೂ ಪದಗಳ ಅರ್ಥ ಬೇರೆ ಬೇರೆ ಎಂಬುದು ಅರಿವಾಗುತ್ತದೆ. ನಿಘಂಟಿನ ಪ್ರಕಾರ ಒಂದು ಘಟನೆ ಆಕಸ್ಮಿಕವಾಗಿ ಘಟಿಸುವುದಾದರೆ ಒಂದು ಸಂದರ್ಭ ಪೂರ್ವಯೋಜಿತ ಎಂದಾಗುತ್ತದೆ. ಉದಾ: ಹುಟ್ಟು ಘಟನೆಯಾದರೆ ಹುಟ್ಟುಹಬ್ಬ ಸಂದರ್ಭವಾಗುತ್ತದೆ. ಸಾವು ಘಟನೆಯಾದರೆ ಅಂತಿಮ ಸಂಸ್ಕಾರ ಸಂದರ್ಭವಾಗುತ್ತದೆ. ಆದಾಯ ತೆರಿಗೆ ಕಲಂ 269 ಎಸ್‌ಟಿನಲ್ಲಿ ಉಪಯೋಗಿಸುವ ಪದಗಳಿಗೆ ಅನ್ವಯಿಸಿ ವ್ಯಾವಹಾರಿಕವಾಗಿ ಹೇಳುವುದಾದರೆ ಒಂದು ಘಟನೆಯಲ್ಲಿ ಒಂದೇ ವ್ಯವಹಾರವಿರುತ್ತದೆ. ಆದರೆ, ಒಂದು ಸಂದರ್ಭದಲ್ಲಿ ಪರಸ್ಪರ ಸಂಬಂಧಿಸಿದಂತೆ ಅನೇಕ ವ್ಯವಹಾರಗಳಿರುತ್ತವೆ. ಉದಾ : ಖರೀದಿ ಯಾ ಮಾರಾಟವು ಒಂದು ಘಟನೆ ಎಂದಾದರೆ ಉತ್ಪಾದನೆ ಒಂದು ಸಂದರ್ಭ ಎನ್ನಬಹುದು. ಉತ್ಪಾದನೆಯಲ್ಲಿ ಅನೇಕ ವ್ಯವಹಾರಗಳು ಸೇರಿಕೊಂಡಿರುತ್ತವೆ.

ಇದನ್ನೇ ಸಹಕಾರಿಗಳ ವ್ಯವಹಾರಗಳಿಗೆ ಅನ್ವಯಿಸುವುದಾದರೆ ಸಾಲ ನೀಡುವುದು ಒಂದು ಘಟನೆಯಾದರೆ ಸಾಲದ ಮರುಪಾವತಿ ಒಂದು ಸಂದರ್ಭವಾಗುತ್ತದೆ. ಅಂದರೆ ಒಮ್ಮೆ ಒಬ್ಬ ವ್ಯಕ್ತಿಗೆ ಎರಡು ಲಕ್ಷಕ್ಕಿಂತ ಹೆಚ್ಚು ಸಾಲ ನೀಡಿ ನಗದಾಗಿ ಪಾವತಿಸಿದರೆ ಕಾಯ್ದೆಯ ಉಲ್ಲಂಘನೆಯಾಗುವುದು. ಅದೇ ಸಾಲದ ಮರುಪಾವತಿಯ ಸಂದರ್ಭದಲ್ಲಿ ಪ್ರತಿ ಕಂತೂ ಎರಡು ಲಕ್ಷಕ್ಕಿಂತ ಕಡಿಮೆಯಿದ್ದಲ್ಲಿ ಪ್ರತಿ ಮರುಪಾವತಿಯೂ ಒಂದು ವ್ಯವಹಾರದ ಘಟನೆಯಾಗುವುದರಿಂದ ಕಾಯ್ದೆಯ ಉಲ್ಲಂಘನೆಯಾಗುವುದಿಲ್ಲ.

**9. ಈ ಕಲಂ 269 ಎಸ್‌ಟಿಯನ್ನು ಆಳವಾಗಿ ಅಧ್ಯಯನ ಮಾಡಿದಲ್ಲಿ ಯಾವ ರೀತಿ ಅರ್ಥೈಸಬಹುದು?**

ಕಲಂ 269ಎಸ್‌ಟಿಯನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದರೆ ಮೂರು ರೀತಿಯಲ್ಲಿ ಅರ್ಥೈಸಿಕೊಳ್ಳಬಹುದು.

**(1) ಒಬ್ಬ ಸ್ವೀಕೃತಿಗಾರ, ಒಬ್ಬ ಪಾವತಿದಾರ, ಒಂದು ಅಥವಾ ಹೆಚ್ಚು ವ್ಯವಹಾರಗಳು, ಒಂದು ದಿನ :**

ಒಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಯಿಂದ ಒಂದು ದಿನದಲ್ಲಿ ಒಂದು ಅಥವಾ ಹೆಚ್ಚು ವ್ಯವಹಾರಗಳಿಗೆ ಸಂಬಂಧಿಸಿದಂತೆ ಒಟ್ಟು ಎರಡು ಲಕ್ಷ ಅಥವಾ ಹೆಚ್ಚು ಮೊತ್ತವನ್ನು ನಿರ್ದಿಷ್ಟಪಡಿಸಿದ ರೀತಿಗೆ ಹೊರತಾದ ರೀತಿಯಲ್ಲಿ ಸ್ವೀಕರಿಸುವಂತಿಲ್ಲ.

ಉದಾ : ಸಹಕಾರಿಯಿಂದ ಒಬ್ಬ ಸದಸ್ಯನು ವಾಹನ ಸಾಲವಾಗಿ 1,60,000 ರೂ.ಗಳು ಮತ್ತು ಆಭರಣ ಸಾಲವಾಗಿ 70,000 ರೂ.ಗಳನ್ನು ಪಡೆದಿರುತ್ತಾನೆ. ಎರಡೂ ಸಾಲಗಳನ್ನು ಬಡ್ಡಿಸಹಿತ ಒಂದೇ ದಿನ ನಗದಾಗಿ ಪಾವತಿಸಬಯಸುತ್ತಾನೆ. ಸಹಕಾರಿಯು ಸ್ವೀಕರಿಸುವಂತಿಲ್ಲ.

**(2) ಒಬ್ಬ ಸ್ವೀಕೃತಿಗಾರ, ಒಬ್ಬ ಪಾವತಿದಾರ, ಒಂದು ವ್ಯವಹಾರ, ಒಂದು ಯಾ ಅನೇಕ ದಿನಗಳು :** ಒಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಯಿಂದ ಒಂದು ಯಾ ಅನೇಕ ದಿನಗಳಲ್ಲಿ ಒಂದು ವ್ಯವಹಾರಕ್ಕೆ ಸಂಬಂಧಿಸಿದಂತೆ ಒಟ್ಟು ಎರಡು ಲಕ್ಷ ಅಥವಾ ಹೆಚ್ಚು ಮೊತ್ತವನ್ನು ನಿರ್ದಿಷ್ಟಪಡಿಸಿದ ರೀತಿಗೆ ಹೊರತಾದ ರೀತಿಯಲ್ಲಿ ಸ್ವೀಕರಿಸುವಂತಿಲ್ಲ.

ಉದಾ : ಸಹಕಾರಿಯಿಂದ ಒಬ್ಬ ಸದಸ್ಯನು ಓಡಿ (ಮೀರಳತೆ) ಸಾಲವಾಗಿ 10,00,000 ರೂ.ಗಳನ್ನು ಪಡೆದಿರುತ್ತಾನೆ. ಈ ಸಾಲವನ್ನು ಅನಿಗದಿತ ಕಂತುಗಳ ರೂಪದಲ್ಲಿ ಅನೇಕ ದಿನಗಳಲ್ಲಿ ನಗದು ರೂಪದಲ್ಲಿ ಪಾವತಿಸಿ ಸಾಲ ಚುಕ್ತಾ ಮಾಡಬಯಸುತ್ತಾನೆ. ಸಹಕಾರಿಯು ಸ್ವೀಕರಿಸುವಂತಿಲ್ಲ. ಅದೇ ಒಂದು ದೊಡ್ಡ ಮೊತ್ತದ ಸಾಲ ಮರುಪಾವತಿಗೆ ಕಂತುಗಳನ್ನು ನಿಗದಿಪಡಿಸಿದ್ದು, ಆ ನಿಗದಿತ ಕಂತುಗಳನ್ನು ನಿಯಮಿತವಾಗಿ ಬೇರೆ ಬೇರೆ ದಿನಗಳಂದು ಪಾವತಿಸಿದರೆ, ಪ್ರತಿಯೊಂದು ಕಂತು ಎರಡು ಲಕ್ಷ ರೂ.ಗಳನ್ನು ಮೀರದಿದ್ದರೆ, ಅಂತಹ ಸ್ವೀಕೃತಿಗಳು ಈ ಕಲಂನಡಿಯಲ್ಲಿ ಉಲ್ಲಂಘನೆಯಾಗದು. ಕಾರಣ ಪ್ರತಿಯೊಂದು ಕಂತು ಪ್ರತ್ಯೇಕ ವ್ಯವಹಾರವಾಗಿ ಪರಿಗಣಿಸಲ್ಪಡುವುದು.

**(3) ಒಬ್ಬ ಸ್ವೀಕೃತಿಗಾರ, ಒಬ್ಬ ಪಾವತಿದಾರ, ಒಂದು ಘಟನೆ ಯಾ ಸಂದರ್ಭ, ಒಂದು ಯಾ ಅನೇಕ ದಿನಗಳು :** ಒಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಯಿಂದ ಒಂದು ಯಾ ಅನೇಕ ದಿನಗಳಲ್ಲಿ ಒಂದು ಘಟನೆ ಅಥವಾ ಸಂದರ್ಭಕ್ಕೆ ಸಂಬಂಧಿಸಿದಂತೆ ಒಟ್ಟು ಎರಡು ಲಕ್ಷ ಅಥವಾ ಹೆಚ್ಚು ಮೊತ್ತವನ್ನು ನಿರ್ದಿಷ್ಟಪಡಿಸಿದ ರೀತಿಗೆ ಹೊರತಾದ ರೀತಿಯಲ್ಲಿ ಸ್ವೀಕರಿಸುವಂತಿಲ್ಲ.

ಉದಾ : ಸಹಕಾರಿಯ ವ್ಯಾವಹಾರಿಕ ಚಟುವಟಿಕೆಗಳಲ್ಲಿ ಘಟನೆ ಯಾ ಸಂದರ್ಭಗಳ ಉದಾಹರಣೆಗಳು ಅತಿ ಅಪರೂಪ. ಹಾಗಾಗಿ ಇಲ್ಲಿ ಸಹಕಾರೇತರ ಉದಾಹರಣೆಯನ್ನು ನೋಡೋಣ.

ಮೊದಲು ಘಟನೆ ಮತ್ತು ಸಂದರ್ಭಗಳ ಅರ್ಥ ವ್ಯತ್ಯಾಸ ನೋಡೋಣ. ಮನುಷ್ಯನ ಜೀವನದಲ್ಲಿ ಬರುವ ಹುಟ್ಟು ಒಂದು ಘಟನೆಯಾದರೆ ಹುಟ್ಟುಹಬ್ಬ ಆಚರಣೆ ಸಂದರ್ಭವಾಗುತ್ತದೆ. ಸಾವು ಘಟನೆಯಾದರೆ ಅಂತಿಮ ಸಂಸ್ಕಾರ ಸಂದರ್ಭವಾಗುತ್ತದೆ.

ಇದೇ ರೀತಿಯಲ್ಲಿ ಸಾಮಾನ್ಯ ಜೀವನದಲ್ಲಿ ನಡೆಯುವ ಒಂದು ಮದುವೆ ಒಂದು ಸಂದರ್ಭ ಎನ್ನಿಸುತ್ತದೆ. ಈ ಒಂದು ಸಂದರ್ಭ ಇಬ್ಬರು ವ್ಯಕ್ತಿಗಳ ಮಧ್ಯೆ ಅನೇಕ ವ್ಯವಹಾರಗಳಿಗೆ ಅನುವು ಮಾಡಿಕೊಡಬಹುದು. ಅಂತಹ ಪ್ರತಿಯೊಂದು ವ್ಯವಹಾರ ಬೇರೆ ಬೇರೆ ದಿನಗಳಂದು ಘಟಿಸಿದರೂ ಒಟ್ಟು ಮೊತ್ತ ನಿಗದಿತ ಮಿತಿಯನ್ನು ಮೀರುವಂತಿದ್ದಲ್ಲಿ ನಿರ್ದಿಷ್ಟಪಡಿಸಿದ ರೀತಿಗಳಿಗೆ ಹೊರತಾದ ರೀತಿಗಳಲ್ಲಿ ವ್ಯವಹರಿಸಿದಲ್ಲಿ ಈ ಕಲಂನ ಉಲ್ಲಂಘನೆಯಾಗುತ್ತದೆ.

**10. ಸಹಕಾರಿಯು ಒಬ್ಬ ಸದಸ್ಯನಿಂದ ಅವನು ಸಹಕಾರಿಯಲ್ಲಿ ಹೊಂದಿರುವ ಉಳಿತಾಯ ಖಾತೆಗೆ ಒಂದು ದಿನದಲ್ಲಿ ಎರಡು ಲಕ್ಷ ರೂ. ಮೀರಿ ನಗದು ಜಮಾ ಸ್ವೀಕರಿಸಬಹುದೇ?**

ಇಲ್ಲ. ಕಾಯ್ದೆ ವಿನಾಯಿತಿ ನೀಡಿದ ವ್ಯಕ್ತಿಗಳ ಹೊರತಾಗಿ ಯಾವುದೇ ವ್ಯಕ್ತಿಯು ಇನ್ನೊಂದು ವ್ಯಕ್ತಿಯಿಂದ ಯಾವುದೇ ಬಾಬ್ತು ಒಂದು ದಿನದಲ್ಲಿ ಎರಡು ಲಕ್ಷ ರೂ.ಗಳು ಅಥವಾ ಹೆಚ್ಚು ಮೊತ್ತವನ್ನು ಕಾಯ್ದೆಯಲ್ಲಿ ತಿಳಿಸಿದ ರೀತಿಯ ಹೊರತಾಗಿ ಬೇರೆ ಯಾವುದೇ ರೂಪದಲ್ಲಿ ಸ್ವೀಕರಿಸುವಂತಿಲ್ಲ. ಆದ್ದರಿಂದ, ಸಹಕಾರಿಯು ಒಬ್ಬ ವ್ಯಕ್ತಿಯಿಂದ ಯಾವುದೇ ಬಾಬ್ತು ಒಂದು ದಿನ ಎರಡು ಲಕ್ಷ ಯಾ ಹೆಚ್ಚು ನಗದು ಸ್ವೀಕರಿಸುವಂತಿಲ್ಲ.

**11. ಸಹಕಾರಿಯ ಒಬ್ಬ ಸದಸ್ಯನು 10 ಲಕ್ಷ ರೂ.ಗಳನ್ನು ಹೊಂದಿದ್ದು, ಅದರ ಅವಧಿ ಪೂರ್ಣಗೊಂಡಿರುತ್ತದೆ. ಸಹಕಾರಿಯು ಸದರಿ ಮೊತ್ತವನ್ನು ಸದಸ್ಯನ ಠೇವಣಿ ಖಾತೆಯಿಂದ ಅವನ ಉಳಿತಾಯ ಖಾತೆಗೆ ವರ್ಗಾಯಿಸಬಹುದೇ? ಆಗ 269ಎಸ್‌ಟಿ ಕಲಂನ ಉಲ್ಲಂಘನೆಯಾಗುವುದೇ?**

ವರ್ಗಾಯಿಸಬಹುದು. ಕಾಯ್ದೆಯ ಉಲ್ಲಂಘನೆಯಾಗುವುದಿಲ್ಲ. ಈ ನಿಯಮವು ವ್ಯವಹಾರದ ಲೆಕ್ಕಗಳಲ್ಲಿ ಎರಡು ವ್ಯಕ್ತಿಗಳ ಮಧ್ಯೆ ಹೊಂದಾಣಿಕೆ ಯಾ ವರ್ಗಾವಣೆ ನಮೂದುಗಳ (adjustment or transfer entry in the books of account) ಮೂಲಕ ಮಾಡುವ ನಮೂದುಗಳಿಗೆ ಅನ್ವಯಿಸುತ್ತದೆಯೇ ಹೊರತು ಒಬ್ಬ ವ್ಯಕ್ತಿಯ ಎರಡು ಖಾತೆಗಳಿಗಲ್ಲ!

**12. ಮೇಲೆ 11ರಲ್ಲಿ ತಿಳಿಸಿದ ಸನ್ನಿವೇಶದಲ್ಲಿ ಸದರಿ ಸದಸ್ಯನು ತನ್ನ ಉಳಿತಾಯ ಖಾತೆಯಿಂದ ಪ್ರತಿದಿನ 2 ಲಕ್ಷ ರೂ.ಗಳಿಗಿಂತ ಕಡಿಮೆಯಂತೆ ಹಿಂಪಡೆದು ಸದರಿ ಠೇವಣಿಯ ಮೊತ್ತವನ್ನು ಕೆಲವು ದಿನಗಳಲ್ಲಿ ಪೂರ್ಣವಾಗಿ ಹಿಂಪಡೆಯಬಹುದೇ? ಆಗ 269ಎಸ್‌ಟಿ ಕಲಂನ ಉಲ್ಲಂಘನೆಯಾಗುವುದೇ?**

ಹಿಂಪಡೆಯಬಹುದು. ಕಾಯ್ದೆಯ ಉಲ್ಲಂಘನೆಯಾಗುವುದಿಲ್ಲ. ಸಹಕಾರಿಯಲ್ಲಿ ತಾನು ಹೊಂದಿರುವ ಉಳಿತಾಯ ಖಾತೆಯಲ್ಲಿರುವ ಹಣವನ್ನು ಸದಸ್ಯನಾದ ಒಬ್ಬ ವ್ಯಕ್ತಿ ಒಂದು ದಿನ ಎರಡು ಲಕ್ಷ ರೂ.ಗಳಿಗೆ ಮೀರಿ ಹಿಂಪಡೆಯುವಂತಿಲ್ಲ. ಆದರೆ, ಅನೇಕ ದಿನಗಳಲ್ಲಿ ಮಿತಿಗಿಂತ ಕಡಿಮೆ ಮೊತ್ತದಲ್ಲಿ ಹಿಂಪಡೆದಲ್ಲಿ ಪ್ರತಿಯೊಂದು ಹಿಂಪಡೆತವೂ ಒಂದೊಂದು ವ್ಯವಹಾರವಾಗುವುದರಿಂದ ಈ ನಿಯಮದ ಉಲ್ಲಂಘನೆಯಾಗದು.

**13. ಸಹಕಾರಿಯ ಒಬ್ಬ ಸದಸ್ಯನು 10 ಲಕ್ಷ ರೂ.ಗಳಿಗೆ ಮೀರಿದ ಸಾಲ ಪಡೆದಿದ್ದು, ತಿಂಗಳ ಕಂತು ಎರಡು ಲಕ್ಷ ರೂ.ಗಳಿಗಿಂತ ಹೆಚ್ಚಿದೆ. ಈಗ ಅವನು ತನ್ನ ಕಂತುಗಳನ್ನು ನಗದಾಗಿ ಪಾವತಿಸಬಹುದೇ?**

ಇಲ್ಲ. ಸಹಕಾರಿಯು ಒಂದು ವ್ಯಕ್ತಿ ಎಂದು ಪರಿಗಣಿಸಲ್ಪಟ್ಟಿರುವುದರಿಂದ ಸಹಕಾರಿಯು ಒಬ್ಬ ವ್ಯಕ್ತಿಯಿಂದ ಯಾವುದೇ ಬಾಬ್ತು (ಸಾಲದ ಬಾಬ್ತೂ ಸೇರಿದಂತೆ) ಒಂದು ದಿನದಲ್ಲಿ ಎರಡು ಲಕ್ಷ ರೂ.ಗಳು ಅಥವಾ ಹೆಚ್ಚು ಮೊತ್ತವನ್ನು ಕಾಯ್ದೆಯಲ್ಲಿ ತಿಳಿಸಿದ ರೀತಿಯ ಹೊರತಾಗಿ ಬೇರೆ ಯಾವುದೇ ರೂಪದಲ್ಲಿ ಸ್ವೀಕರಿಸುವಂತಿಲ್ಲ. ಆದ್ದರಿಂದ, ಪ್ರತಿ ಕಂತು ಎರಡು ಲಕ್ಷ ಮೀರಿದ್ದಲ್ಲಿ, ಕಾಯ್ದೆ ಕಲಂನಲ್ಲಿ ತಿಳಿಸಿದ ವಿಧಾನಗಳಿಗೆ ಹೊರತಾದ

ವಿಧಾನಗಳಲ್ಲಿ ಸದರಿ ಕಂತುಗಳನ್ನು ಸ್ವೀಕರಿಸುವಂತಿಲ್ಲ.

**14. ಮೇಲಿನ ಉದಾಹರಣೆಯಲ್ಲಿ ತಿಂಗಳ ಕಂತು ಎರಡು ಲಕ್ಷ ರೂ.ಗಳಿಗಿಂತ ಕಡಿಮೆ ಇದ್ದರೆ ಅವನು ಕಂತನ್ನು ನಗದು ರೂಪದಲ್ಲಿ ಪಾವತಿಸಬಹುದೇ?**

ಸಾಲ ಹತ್ತು ಲಕ್ಷ ಮೀರಿದ್ದರೂ ಪ್ರತಿ ಕಂತೂ ಒಂದು ವ್ಯವಹಾರ ನಮೂದು (Transaction) ಆಗುವುದರಿಂದ ಬೇರೆ ಬೇರೆ ದಿನಗಳಂದು ಪಾವತಿಸುವ ಪ್ರತಿ ಕಂತು ಎರಡು ಲಕ್ಷ ರೂ.ಗಳಿಗಿಂತ ಕಡಿಮೆ ಇದ್ದರೆ ಈ ನಿಯಮ ಉಲ್ಲಂಘನೆಯಾಗದು.

**15. ಸಹಕಾರಿಯ ಸದಸ್ಯನೊಬ್ಬನು ಪ್ರತಿದಿನ 5,000 ರೂ.ಗಳಂತೆ ನಿತ್ಯನಿಧಿ (ಪಿಗ್ಮಿ) ಪಾವತಿ ಮಾಡುತ್ತಿದ್ದಾನೆ. ವರ್ಷದ ಕೊನೆಯಲ್ಲಿ ಅವನಿಂದ ಸ್ವೀಕರಿಸುವ ಒಟ್ಟು ಮೊತ್ತ 2 ಲಕ್ಷ ರೂ.ಗಳನ್ನು ಮೀರುವುದರಿಂದ 269ಎಸ್‌ಟಿ ಕಲಂ ಉಲ್ಲಂಘನೆಯಾಗುವುದೇ?**

ಸಂಗ್ರಹಿಸಿದ ಪಿಗ್ಮಿಯ ಒಟ್ಟು ಮೊತ್ತ ಎರಡು ಲಕ್ಷ ಮೀರಿದ್ದರೂ ಅವನು ಪ್ರತಿದಿನ ಪಾವತಿಸುವ ಪ್ರತಿ ಚಂದಾ ಒಂದು ವ್ಯವಹಾರ ನಮೂದು (Transaction) ಆಗುವುದರಿಂದ ಬೇರೆ ಬೇರೆ ದಿನಗಳಂದು ಪಾವತಿಸುವ ಪ್ರತಿ ಚಂದಾ ಮಿತಿಗಿಂತ ಕಡಿಮೆ ಇದ್ದರೆ ಈ ನಿಯಮದ ಉಲ್ಲಂಘನೆಯಾಗುವುದಿಲ್ಲ.

(ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಇಂತಹ ವ್ಯವಹಾರಗಳು ಠೇವಣಿ ಸಂಗ್ರಹಣೆಯ ವ್ಯವಹಾರವಾಗಿದ್ದರಿಂದ ಇವುಗಳಿಗೆ 269ಎಸ್‌ಟಿ ಅನ್ವಯಿಸುವುದಿಲ್ಲ. ಬದಲಿಗೆ 269ಎಸ್‌ಎಸ್ ಅನ್ವಯಿಸುತ್ತದೆ.)

**16. ಸಹಕಾರಿಯ ಸದಸ್ಯನೊಬ್ಬನಿಗೆ ನೀಡಿದ ಸಾಲಕ್ಕೆ ಜಾಮೀನುದಾರರಾಗಿರುವ ಸದಸ್ಯರೊಬ್ಬರು ಸದರಿ ಸಾಲಕ್ಕೆ ತಮ್ಮ ಖಾತೆಯಿಂದ ಎರಡು ಲಕ್ಷ ಮೀರಿದ ಮೊತ್ತವನ್ನು ವರ್ಗಾಯಿಸುವುದರ ಮೂಲಕ ಪಾವತಿಸಬಹುದೇ?**

ಈ ನಿಯಮದಲ್ಲಿ ನಿರ್ದಿಷ್ಟ ಮೊತ್ತಕ್ಕಿಂತ ಅಧಿಕ ಮೊತ್ತದ ಹಣ ಸ್ವೀಕಾರದ ವಿಧಗಳನ್ನು ಸ್ಪಷ್ಟವಾಗಿ ನಿರ್ದಿಷ್ಟ ಪಡಿಸಲಾಗಿದೆ. ಅಂತಹ ವಿಧಾನಗಳಿಗೆ ಹೊರತಾಗಿ ವ್ಯವಹಾರದ ಲೆಕ್ಕಗಳಲ್ಲಿ ಎರಡು ವ್ಯಕ್ತಿಗಳ ಮಧ್ಯೆ ಹೊಂದಾಣಿಕೆ ಯಾ ವರ್ಗಾವಣೆ ನಮೂದುಗಳ (adjustment or transfer entry in the books of account) ಮೂಲಕವೂ ಸ್ವೀಕಾರ ಮಾಡುವಂತಿಲ್ಲವಾದ್ದರಿಂದ ಈ ರೀತಿಯ ನಮೂದುಗಳು ಕಾಯ್ದೆಯ ಉಲ್ಲಂಘನೆಯಾದೀತು!

**17. ಸಹಕಾರಿಯ ಸದಸ್ಯನು ಸಹಕಾರಿಯಲ್ಲಿ ತಾನು ಹೊಂದಿರುವ ತನ್ನ ಉಳಿತಾಯ ಖಾತೆಯಿಂದ ಹಿಂಪಡೆಯುವ ಹಣಕ್ಕೆ ಸದರಿ ಕಾಯ್ದೆ ಕಲಂ 269ಎಸ್‌ಟಿ ಅನ್ವಯಿಸುವುದೇ?**

ಹೌದು. ಸಹಕಾರಿಯ ಸದಸ್ಯರ ಉಳಿತಾಯ ಖಾತೆಯಲ್ಲಿನ ವ್ಯವಹಾರಗಳಿಗೆ ನಗದು ಮಿತಿ ಇಂತಿಷ್ಟೇ ಎಂಬುದು ಇದುವರೆಗೆ ಇರಲಿಲ್ಲ. ಆದರೆ, 2017ರ ಏಪ್ರಿಲ್ ಒಂದರ ನಂತರ ಒಬ್ಬ ವ್ಯಕ್ತಿಯು ತಾನು ಸದಸ್ಯನಾಗಿರುವ ಸಹಕಾರಿಯಲ್ಲಿ ತಾನು ಹೊಂದಿರುವ ಉಳಿತಾಯ ಖಾತೆಯಿಂದ ಕೂಡ ಎರಡು ಲಕ್ಷ ರೂ.ಗಳು ಅಥವಾ ಹೆಚ್ಚು ಮೊತ್ತವನ್ನು ಕಾಯ್ದೆಯ ಕಲಂ 269ಎಸ್‌ಟಿಯಲ್ಲಿ ತಿಳಿಸಿದ ರೀತಿಯ ಹೊರತಾಗಿ ಬೇರೆ ಯಾವುದೇ ರೂಪದಲ್ಲಿ ಹಿಂಪಡೆಯುವಂತಿಲ್ಲ.

ಆದರೆ, ಈ ನಿಯಮ ಬ್ಯಾಂಕುಗಳಿಗೆ ಅನ್ವಯಿಸುವುದಿಲ್ಲವಾದ್ದರಿಂದ ಒಬ್ಬ ವ್ಯಕ್ತಿ ಸಹಕಾರಿ ಬ್ಯಾಂಕೂ ಸೇರಿದಂತೆ ಯಾವುದೇ ಬ್ಯಾಂಕಿನಲ್ಲಿರುವ ತನ್ನ ಯಾವುದೇ ಖಾತೆಗಳಿಂದ ಹಿಂಪಡೆಯುವ ಅಥವಾ ಸ್ವೀಕರಿಸುವ ಮೊತ್ತಕ್ಕೆ ಅನ್ವಯಿಸುವುದಿಲ್ಲ.

**18. ಯಾವ ರೀತಿಯ ಸ್ವೀಕೃತಿಗಳು ಈ ಕಲಂನ ಅಡಿಯಲ್ಲಿ ಬರುತ್ತವೆ?**

ಒಬ್ಬ ವ್ಯಕ್ತಿಯು ಮತ್ತೊಬ್ಬ ವ್ಯಕ್ತಿಯಿಂದ ಸ್ವೀಕರಿಸುವ ಯಾವುದೇ ರೀತಿಯ ಜಮಾಗಳೂ ಸ್ವೀಕೃತಿಯ ಪರಿಭಾಷೆಯಡಿಯಲ್ಲಿ ಬರುತ್ತವೆ. ಈ ನಿಯಮವು ಎಲ್ಲಾ ರೀತಿಯ ಸ್ವೀಕೃತಿಗಳಿಗೆ ಅಂದರೆ ಉಳಿತಾಯ, ಚಾಲ್ತಿ, ಪಿಗ್ಮಿ, ಸಾಲ, ಠೇವಣಿ, ಬಂಡವಾಳ, ಆದಾಯವೂ ಸೇರಿದಂತೆ ಯಾವುದೇ ಖಾತೆಗಳಿಗೆ ಮಾಡುವ ಜಮಾಗಳಿಗೆ ಅನ್ವಯಿಸುತ್ತದೆ. ಚರಾಸ್ತಿ–ಸ್ಥಿರಾಸ್ತಿಗಳ ಖರೀದಿ, ವಿಲೇವಾರಿ, ಸಾಲ, ಠೇವಣಿ, ದೇಣಿಗೆ, ದಾನ, ಮುಂಗಡ, ಕೈಗಡಗಳೂ ಸೇರಿದಂತೆ ಎಲ್ಲಾ ರೀತಿಯ ವ್ಯವಹಾರಗಳೂ ಈ ವ್ಯಾಖ್ಯಾನದಲ್ಲಿ ಸೇರುತ್ತವೆ.

**19. ಒಂದು ಘಟನೆ ಅಥವಾ ಸಂದರ್ಭದ ಪರಿಭಾಷೆ ಏನು?**

ಆದಾಯ ತೆರಿಗೆ ಕಾಯ್ದೆಯಲ್ಲಿ ಘಟನೆ ಅಥವಾ ಸಂದರ್ಭ ಎನ್ನುವ ಪದಗಳಿಗೆ ಪರಿಭಾಷೆಯನ್ನಾಗಲೀ, ನಿರ್ದಿಷ್ಟ ಅರ್ಥವನ್ನಾಗಲೀ ನೀಡಿರುವುದಿಲ್ಲ. ಆದರೆ, ಅವೆರಡನ್ನೂ ಒಟ್ಟಿಗೇ ಉಪಯೋಗಿಸಿರುವುದರಿಂದ ಎರಡೂ ಪದಗಳ ಅರ್ಥ ಬೇರೆ ಬೇರೆ ಎಂಬುದು ಅರಿವಾಗುತ್ತದೆ. ನಿಘಂಟಿನ ಪ್ರಕಾರ ಒಂದು ಘಟನೆ ಆಕಸ್ಮಿಕವಾಗಿ ಘಟಿಸುವುದಾದರೆ ಒಂದು ಸಂದರ್ಭ ಪೂರ್ವಯೋಜಿತ ಎಂದಾಗುತ್ತದೆ. ಉದಾ: ಹುಟ್ಟು ಘಟನೆಯಾದರೆ ಹುಟ್ಟುಹಬ್ಬ ಸಂದರ್ಭವಾಗುತ್ತದೆ. ಸಾವು ಘಟನೆಯಾದರೆ ಅಂತಿಮ ಸಂಸ್ಕಾರ ಸಂದರ್ಭವಾಗುತ್ತದೆ.

ಆದಾಯ ತೆರಿಗೆ ಕಲಂ 269ಎಸ್‌ಟಿನಲ್ಲಿ ಉಪಯೋಗಿಸುವ ಪದಗಳಿಗೆ ಅನ್ವಯಿಸಿ ವ್ಯಾವಹಾರಿಕವಾಗಿ ಹೇಳುವುದಾದರೆ ಒಂದು ಘಟನೆಯಲ್ಲಿ ಒಂದೇ ವ್ಯವಹಾರವಿರುತ್ತದೆ. ಆದರೆ, ಒಂದು ಸಂದರ್ಭದಲ್ಲಿ ಪರಸ್ಪರ ಸಂಬಂಧಿಸಿದಂತೆ ಅನೇಕ ವ್ಯವಹಾರಗಳಿರುತ್ತವೆ. ಉದಾ : ಖರೀದಿ ಯಾ ಮಾರಾಟವು ಒಂದು ಘಟನೆ ಎಂದಾದರೆ ಉತ್ಪಾದನೆ ಒಂದು ಸಂದರ್ಭ ಎನ್ನಬಹುದು. ಉತ್ಪಾದನೆಯಲ್ಲಿ ಅನೇಕ ವ್ಯವಹಾರಗಳು ಸೇರಿಕೊಂಡಿರುತ್ತವೆ. ಇದನ್ನೇ ಸಹಕಾರಿಗಳ ವ್ಯವಹಾರಗಳಿಗೆ ಅನ್ವಯಿಸುವುದಾದರೆ ಸಾಲ ನೀಡುವುದು ಒಂದು ಘಟನೆಯಾದರೆ, ಸಾಲದ ಮರುಪಾವತಿ ಒಂದು ಸಂದರ್ಭವಾಗುತ್ತದೆ. ಅಂದರೆ ಒಮ್ಮೆ ಒಬ್ಬ ವ್ಯಕ್ತಿಗೆ ಎರಡು ಲಕ್ಷಕ್ಕಿಂತ ಹೆಚ್ಚು ಸಾಲ ನೀಡಿ ನಗದಾಗಿ ಪಾವತಿಸಿದರೆ ಕಾಯ್ದೆಯ ಉಲ್ಲಂಘನೆಯಾಗುವುದು. ಅದೇ ಸಾಲದ ಮರುಪಾವತಿಯ ಸಂದರ್ಭದಲ್ಲಿ ಪ್ರತಿ ಕಂತೂ ಎರಡು ಲಕ್ಷಕ್ಕಿಂತ ಕಡಿಮೆಯಿದ್ದಲ್ಲಿ ಪ್ರತಿ ಮರುಪಾವತಿಯೂ ಒಂದು ವ್ಯವಹಾರ ಯಾ ಘಟನೆಯಾಗುವುದರಿಂದ ಕಾಯ್ದೆಯ ಉಲ್ಲಂಘನೆಯಾಗುವುದಿಲ್ಲ.

**20. ಕಲಂ 269 ಎಸ್‌ಟಿ ಬಗ್ಗೆ ಗಮನಿಸಬೇಕಾದ ಇತರೆ ಅಂಶಗಳೇನು?**

- ಈ ನಿಯಮವು ಕೇವಲ ಸ್ವೀಕಾರಗಳಿಗೆ ಅನ್ವಯಿಸುತ್ತದೆಯೇ ಹೊರತು ಪಾವತಿಗಳಿಗಲ್ಲ.
- ಈ ಕಲಂನ ಜಾರಿಯಿಂದಾಗಿ ಈ ಮೊದಲಿನಿಂದಲೇ ಜಾರಿಯಲ್ಲಿರುವ 269ಎಸ್‌ಎಸ್ ಕಲಂನ ಅಂಶಗಳಲ್ಲಿ ಯಾವುದೇ ಬದಲಾವಣೆಯಿಲ್ಲ.
- ಈ ನಿಯಮ ಪಾನ್ ಹೊಂದಿರಲಿ, ಇಲ್ಲದಿರಲಿ, ಎಲ್ಲಾ ವ್ಯಕ್ತಿಗಳಿಗೂ ಅನ್ವಯಿಸುತ್ತದೆ.
- ಅಂತಹ ಸ್ವೀಕಾರವು ಆದಾಯ ತೆರಿಗೆ ವ್ಯಾಪ್ತಿಗೆ ಬರಲಿ, ಬಾರದಿರಲಿ, ಎಲ್ಲಾ ವ್ಯವಹಾರಗಳಿಗೂ ಅನ್ವಯ.
- ಸ್ವೀಕೃತಿಯ ಮೂಲ ಅಥವಾ ಸ್ವೀಕೃತಿಯ ಸ್ವರೂಪ ಹೇಗೇ ಇರಲಿ, ಈ ನಿಯಮ ಅನ್ವಯಿಸುತ್ತದೆ.
- ಅಪ್ಪ–ಮಗ, ಗಂಡ–ಹೆಂಡತಿ, ಮುಂತಾದ ಪರಸ್ಪರ ಸಂಬಂಧಿಕರ ಮಧ್ಯದ ವ್ಯವಹಾರವೂ ಇದರ ವ್ಯಾಪ್ತಿಯಲ್ಲಿ ಬರುತ್ತದೆ.
- ಯಾವುದೇ ತೆರಿಗೆ ಬಾಧ್ಯತೆ ಇರದ ಎರಡು ವ್ಯಕ್ತಿಗಳ ನಡುವೆಯ ವ್ಯವಹಾರಗಳಿಗೂ ಇದು ಅನ್ವಯಿಸುತ್ತದೆ.
- ಈ ನಿಯಮದಿಂದಾಗಿ ನಿಗದಿತ ಮೊತ್ತಕ್ಕಿಂತ ಹೆಚ್ಚಿನ ವಹಿವಾಟನ್ನು ನಗದು, ಬೇರರ್ ಚೆಕ್, ಕ್ರಾಸ್ ಮಾಡದ ಚೆಕ್, ಸೆಲ್ಫ್ ಚೆಕ್ ಮೂಲಕವೂ ಮಾಡುವಂತಿಲ್ಲ!

# ಔಷಧ ವೆಚ್ಚ ನಿಯಂತ್ರಣಕ್ಕೆ ಜನೌಷಧಿ ಯೋಜನೆ – ಸಹಕಾರ ಸಂಸ್ಥೆಗಳಿಗೆ ಹೊಸ ಅವಕಾಶ

▶▶ ರಘುನಂದನ ಕೆ., ಸಹಪ್ರಧಾನ ವ್ಯವಸ್ಥಾಪಕ, ಕರಾಸೌಸಂಸನಿ., ಬೆಂಗಳೂರು

ಆರೋಗ್ಯವೇ ಭಾಗ್ಯವೆಂದು ಖುಷಿಯಿಂದ ಜೀವನ ನಡೆಸುತ್ತಿರುವ ಕುಟುಂಬವೊಂದರಲ್ಲಿನ ವ್ಯಕ್ತಿಗೆ ದಿಢೀರ್ ಎಂದು ಅನಾರೋಗ್ಯ ಉಂಟಾಗುತ್ತದೆ. ಆಸ್ಪತ್ರೆಗಳಿಗೆ ಓಡಾಟ ಶುರುವಾಗುತ್ತದೆ. ವೈದ್ಯಕೀಯ ವೆಚ್ಚವೆಂಬ ಭೂತ ಕಾಡತೊಡಗುತ್ತದೆ. ಐದೋ ಹತ್ತೋ ವರ್ಷ ದುಡಿದು ಕೂಡಿಟ್ಟ ಮೊತ್ತವೆಲ್ಲ ಒಂದು ಅನಾರೋಗ್ಯದ ಹೆಸರಲ್ಲಿ ಬರಿದಾಗುತ್ತದೆ. ಸಾಲ ಬೆಳೆಯುತ್ತದೆ. ಆರೋಗ್ಯ ವಿಮೆ ದೊರೆತರೂ ಚಿಕಿತ್ಸೆಗಷ್ಟೇ ಸೀಮಿತ, ದುಬಾರಿ ಮಾತ್ರೆಗಳನ್ನು, ಇಂಜೆಕ್ಷನ್‌ಗಳನ್ನು ಖರೀದಿಸುವುದು ಹೇಗೆ? ಇದು ಭಾರತದ ಬಹುತೇಕ ಜನಸಾಮಾನ್ಯರ, ಬಹುಶಃ ನಮ್ಮ ನಿಮ್ಮೆಲ್ಲರ ಜೀವನದ ವಾಸ್ತವ. ಅನಾರೋಗ್ಯದ ಆತಂಕದಲ್ಲೇ ಎಷ್ಟೋ ಕುಟುಂಬಗಳು ಜೀವಿಸುತ್ತಿವೆ. ಆರೋಗ್ಯವೂ ಈಗ ಉದ್ದಿಮೆ, ಆಸ್ಪತ್ರೆಗಳಿಗೂ, ವೈದ್ಯರುಗಳಿಗೂ ಈ ಉದ್ದಿಮೆ ಬೆಳೆಸುವ ಟಾರ್ಗೆಟ್‌ಗಳಿವೆ. ಇದರ ನಡುವೆ ಅನಾರೋಗ್ಯ ಉಂಟಾದರೂ ಹಣಕಾಸು ಪರಿಸ್ಥಿತಿಯನ್ನು ಕೈ ಮೀರದಂತೆ ಉಳಿಸಿಕೊಳ್ಳುವ ಹೆಣಗಾಟ ಜನಸಾಮಾನ್ಯರದು.

ಈಗ ಊಹಿಸಿಕೊಳ್ಳಿ, ಅಲರ್ಜಿಗೆ ನೀಡಲಾಗುವ ಸೋಡಿಯಂ ಮಾತ್ರೆಯೊಂದು ರೂ.136/– ರ ಬದಲಾಗಿ ರೂ.13/–ಕ್ಕೆ ದೊರೆತರೆ..? ಕ್ಯಾನ್ಸರ್‌ಗೆ ನೀಡಲಾಗುವ ರೂ.6412/–ರ ಇಂಜೆಕ್ಷನ್ ಒಂದು ರೂ.631/–ಕ್ಕೆ ಸಿಕ್ಕರೆ...?? ರೂ.292ರ ಒಂದು ಇಂಜೆಕ್ಷನ್ ರೂ.32ಕ್ಕೆ ದೊರೆತರೆ...??? ಹೌದು, ಇದು ಕಲ್ಪನೆಯಲ್ಲ, ಹೀಗೊಂದು ಸಾಧ್ಯತೆಯ ಅನಾವರಣವಾಗಿದೆ, ಬಡವರಿಗೂ ಎಟಕುವ ದರದಲ್ಲಿ ಔಷಧಗಳು ಸಿಗುವಂತಾಗಬೇಕು, ಔಷಧ ದರ ಹೆಚ್ಚೆನ್ನುವ ಕಾರಣದಿಂದ ಖರೀದಿಸಲು ಸಾಧ್ಯವಾಗದೇ ಪ್ರಾಣ ಕಳೆದುಕೊಳ್ಳುವಂತಾಗಬಾರದು ಎನ್ನುವ ಆಶಯವೊಂದು ಯೋಜನೆಯ ಸ್ವರೂಪ ಪಡೆದುಕೊಂಡಿದೆ. ಈ ಯೋಜನೆಯೇ "ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ಪರಿಯೋಜನೆ".

**ಯೋಜನೆಯ ಹಿನ್ನೆಲೆ :** ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ಪರಿಯೋಜನೆ 2008ರಲ್ಲಿ ಕೇಂದ್ರ ಸರ್ಕಾರದ ರಾಸಾಯನಿಕ ಮತ್ತು ರಸಗೊಬ್ಬರ ಸಚಿವಾಲಯ ಹಾಗೂ ಔಷಧೀಯ ವಿಭಾಗದ ಪ್ರಯತ್ನಗಳ ಫಲವಾಗಿ ಆರಂಭವಾಗಿದೆ. ಉತ್ತಮ ಗುಣಮಟ್ಟವೆಂದರೆ ಹೆಚ್ಚು ದರ ಎಂದರ್ಥವಲ್ಲ ಎನ್ನುವ ಪರಿಜ್ಞಾನವನ್ನು ಬೆಳೆಸುವ ಮೂಲಕ ಹಾಗೂ ಕೈಗೆಟಕುವ ದರದಲ್ಲಿ ಗುಣಮಟ್ಟದ ಔಷಧವನ್ನು ಒದಗಿಸಿ, ಆ ಮೂಲಕ ವೈದ್ಯಕೀಯ ವೆಚ್ಚವನ್ನು ಕಡಿಮೆ ಮಾಡಿ, ಆರೋಗ್ಯ ಭಾಗ್ಯವನ್ನು ಪುನರ್ ವ್ಯಾಖ್ಯಾನಿಸುವುದು ಈ ಯೋಜನೆಯ ಆಶಯ. ಕಡಿಮೆ ದರದ ಜನೌಷಧಿಗಳನ್ನು "ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ಕೇಂದ್ರ"ಗಳನ್ನು ತೆರೆಯುವ ಮೂಲಕ ಮಾರಾಟ ಮಾಡಲಾಗುತ್ತದೆ. ಮೊದಲ ಜನೌಷಧಿ ಕೇಂದ್ರ 25 ನವೆಂಬರ್ 2008ರಲ್ಲಿ ಪಂಜಾಬಿನ ಅಮೃತಸರ್‌ದಲ್ಲಿ ಆರಂಭವಾಗಿದೆ.

2008 ರಿಂದ ಮುಂದಿನ ಐದು ವರ್ಷಗಳ ಅವಧಿಯಲ್ಲಿ 630 ಜಿಲ್ಲೆಗಳಲ್ಲಿ ಕನಿಷ್ಠ ಒಂದಾದರೂ ಜನೌಷಧಿ ಕೇಂದ್ರ ಹೊಂದುವ ಉದ್ದೇಶ ಹೊಂದಲಾಗಿತ್ತು. 2012ರವರೆಗೆ ಕೇವಲ 157 ಕೇಂದ್ರಗಳು ತೆರೆಯಲ್ಪಟ್ಟವು & ಅವುಗಳಲ್ಲಿಯೂ ಕೆಲವು ಸ್ಥಗಿತಗೊಂಡವು. ದಿ ಪಬ್ಲಿಕ್ ಹೆಲ್ತ್ ಫೌಂಡೇಷನ್ ಆಫ್ ಇಂಡಿಯಾ ಈ ಬಗ್ಗೆ ಮೌಲ್ಯಮಾಪನ ನಡೆಸಿ, 2012 ಡಿಸೆಂಬರ್‌ನಲ್ಲಿ ವರದಿ ನೀಡಿತು, ರಾಜ್ಯ ಸರ್ಕಾರದ ಮೇಲಿನ ಅತಿಯಾದ ಅವಲಂಬನೆ, ಕಳಪೆ ಸರಬರಾಜು ನಿರ್ವಹಣೆ, ಕಡಿಮೆ ಜೌಷಧಿಗಳು ಪಟ್ಟಿಯಲ್ಲಿರುವುದು (11 ಚಿಕಿತ್ಸೆಗಳ 85 ಔಷಧಗಳು ಮಾತ್ರ ಪಟ್ಟಿಯಲ್ಲಿದ್ದವು), ವೈದ್ಯರು ಜನೌಷಧಿಗಳನ್ನು ಬರೆಯದಿರುವುದು, ತಮಿಳುನಾಡು, ಹರಿಯಾಣ, ರಾಜಸ್ಥಾನ ರಾಜ್ಯಗಳ ಉಚಿತ ಔಷಧಿ ವಿತರಣೆ ಯೋಜನೆಗಳು, ಜನರಲ್ಲಿ ಇವುಗಳ ಗುಣಮಟ್ಟದ ಬಗ್ಗೆ ಜಾಗೃತಿ ಇಲ್ಲದಿರುವುದು ಈ ಯೋಜನೆಯ ಹಿನ್ನಡೆಗೆ ಕಾರಣವೆಂದು ವರದಿ ಹೇಳಿತು.

ನಂತರದಲ್ಲಿ ಹೊಸ ವ್ಯವಹಾರ ಯೋಜನೆಯನ್ನು ರೂಪಿಸಿ 500 ಕೇಂದ್ರಗಳನ್ನು ತೆರೆಯುವ ಬಗ್ಗೆ ಪ್ರಯತ್ನಗಳಾದವು. 2012ರಲ್ಲಿ ಇದನ್ನು ಉಪವಿಭಾಗಗಳಿಗೆ, ಪ್ರಮುಖ ನಗರಗಳಿಗೆ ಹಾಗೂ ಪಟ್ಟಣಗಳಿಗೆ ವಿಸ್ತರಿಸಲಾಯಿತು. ಸ್ವಯಂ ಸುಸ್ಥಿರ ವ್ಯವಹಾರ ಮಾದರಿಯಾಗಿ (Self Sustaining Business Model) ಸರ್ಕಾರದ ಆರಂಭಿಕ ಬೆಂಬಲವನ್ನು ಹೊರತುಪಡಿಸಿ, ಅನುದಾನ ಸಬ್ಸಿಡಿಗಳ ಹಂಗಿಲ್ಲದೇ ಬೆಳೆಯಬೇಕೆನ್ನುವ, ಲಾಭದ ಉದ್ದೇಶವಿಲ್ಲದ ಸೇವೆಯೇ ತತ್ವ ಎನ್ನುವ ಆಶಯ ಹೊಂದಲಾಗಿತ್ತು. ಆದರೂ ಯಾವುದೇ ಪ್ರಯೋಜನವಾಗಲಿಲ್ಲ, 2015ರ ಅಂತ್ಯಕ್ಕೆ ಕೇಂದ್ರಗಳ ಸಂಖ್ಯೆ 99ಕ್ಕೆ ಇಳಿಯಿತು. ಮಾರಾಟದಲ್ಲಿ ಜನೌಷಧಿಗಳ ಪಟ್ಟಿಯಲ್ಲಿ 200 ಔಷಧಿಗಳು ಸೇರಿತ್ತಾದರೂ ಶೇ.50ರಷ್ಟು ಔಷಧಿಗಳು ಮಾತ್ರ ಮಾರಾಟಕ್ಕೆ ಲಭ್ಯವಿದ್ದವು. 2015–16ರಲ್ಲಿ ಮಹತ್ವದ ಬದಲಾವಣೆಗಳಾದವು. ಈ ಯೋಜನೆಯ ಪರಿಣಾಮಕಾರಿ ಅನುಷ್ಠಾನದ ಕುರಿತಂತೆ ಅನೇಕ ಹಂತದಲ್ಲಿ ಚರ್ಚೆಗಳಾಗಿ ಕಾರ್ಯತಂತ್ರವನ್ನು ರೂಪಿಸಲಾಯಿತು. ಈ ಕಾರ್ಯತಂತ್ರ ಸ್ವಾಪ್–2015 ಎಂದು ಕರೆಯಲ್ಪಟ್ಟು ರಾಸಾಯನಿಕ & ರಸಗೊಬ್ಬರ ಸಚಿವರಿಂದ 2015 ಸೆಪ್ಟೆಂಬರ್‌ನಲ್ಲಿ ಅನುಮೋದನೆಗೊಂಡಿತು. ನಂತರ ಈ ಯೋಜನೆಯ ಪರಿಣಾಮಕಾರಿ ಅನುಷ್ಠಾನದಲ್ಲಿ ಪ್ರಗತಿಯಾಗತೊಡಗಿತು.

ಮಾರ್ಚ್ 2017ರಂತೆ ಈ ಯೋಜನೆಯಡಿಯಲ್ಲಿ ಡಯಾಬಿಟಿಕ್, ಕಾರ್ಡಿಯಿಕ್, ಬ್ಲಡ್ ಪ್ರೆಶರ್, ವಿಟಮಿನ್ಸ್, ಆಂಟಿ ಬಯೋಟಿಕ್ಸ್ ಸೇರಿದಂತೆ 154 ವೈದ್ಯಕೀಯ ಚಿಕಿತ್ಸೆಗಳಿಗೆ ಸಂಬಂಧಿಸಿದ 1000ಕ್ಕೂ ಹೆಚ್ಚು ಜನೌಷಧಗಳು ಲಭ್ಯವಿದೆ. 28 ರಾಜ್ಯಗಳಿಂದ 850ಕ್ಕೂ ಹೆಚ್ಚು ಜನೌಷಧ ಕೇಂದ್ರಗಳು ಕಾರ್ಯನಿರತವಾಗಿವೆ. ಸರಬರಾಜು ಪ್ರಕ್ರಿಯೆಯನ್ನು ವ್ಯವಸ್ಥಿತಗೊಳಿಸಲಾಗಿದೆ. ಐದು ಸಿ&ಎಫ್ ಏಜೆಂಟ್‌ಗಳನ್ನು 40 ಸರಬರಾಜುದಾರರನ್ನು ನೇಮಕಗೊಳಿಸಲಾಗಿದೆ. ಔಷಧೀಯ ಇಲಾಖೆಯ ಹಾಗೂ ರಾಸಾಯನಿಕ, ರಸಗೊಬ್ಬರ ಸಚಿವಾಲಯದ ಆಡಳಿತಾತ್ಮಕ ನಿಯಂತ್ರಣದ ಅಡಿಯಲ್ಲಿ ಈ ಯೋಜನೆಯ ಅನುಷ್ಠಾನ ಏಜೆನ್ಸಿಯಾಗಿ

ಬಿಪಿಪಿಐ (Bureau of Pharma PSUs of India) ಸ್ಥಾಪಿಸಲಾಗಿದೆ. ಇದು 1860ರ ಸೊಸೈಟೀಸ್ ಆಕ್ಟ್‌ನಲ್ಲಿ 2010 ಏಪ್ರಿಲ್‌ನಲ್ಲಿ ಸ್ವತಂತ್ರ ಸೊಸೈಟಿಯಾಗಿ ನೋಂದಣಿಯಾಗಿದೆ. ಜನೌಷಧಿಗಳ ಸಂಗ್ರಹಣೆ, ಸರಬರಾಜು ಮತ್ತು ಮಾರಾಟದ ಬಗ್ಗೆ ಇದು ನಿಗಾವಹಿಸುತ್ತದೆ.

**ಏನಿದು ಜನೌಷಧಿ (ಜನರಿಕ್ ಮೆಡಿಸಿನ್) & ಹೇಗೆ ಕಡಿಮೆ ದರದಲ್ಲಿ ಲಭ್ಯವಾಗುತ್ತವೆ? :** ಬ್ರಾಂಡೆಡ್ ಔಷಧಿಗಳನ್ನು ಹೆಚ್ಚಿನ ದರದಲ್ಲಿ ಮಾರಾಟ ಮಾಡಲಾಗುತ್ತದೆ ಎನ್ನುವುದು ಎಲ್ಲರಿಗೂ ತಿಳಿದಿರುವ ವಿಷಯ. ಈ ಔಷಧಿಗಳ ಕುರಿತು ಸಂಶೋಧನೆ, ತಯಾರಿಕೆ, ಪರಿಶೀಲನೆ, ಉತ್ಪಾದನೆ, ಮಾರಾಟಕ್ಕಾಗಿ ಔಷಧ ಕಂಪನಿಗಳು ಬೃಹತ್ ಪ್ರಮಾಣದಲ್ಲಿ ಹೂಡಿಕೆಗಳನ್ನು ಮಾಡಿರುತ್ತವೆ. ಇದರ ಆಧಾರದಲ್ಲಿ ಈ ಔಷಧವನ್ನು ಕಂಪನಿಯ ಬ್ರಾಂಡ್‌ನಡಿಯಲ್ಲಿ ಮಾರಾಟ ಮಾಡಲು ನಿರ್ದಿಷ್ಠ ವರ್ಷಗಳ ಅವಧಿಯನ್ನು ನಿಗದಿ ಪಡಿಸಿ ಪೇಟೆಂಟ್ ನೀಡಲಾಗುತ್ತದೆ. ಪೇಟೆಂಟ್ ಅವಧಿ ಮುಕ್ತಾಯದ ನಂತರದಲ್ಲಿ ಔಷಧಿಗಳನ್ನು ಕಂಪನಿಗಳ ಹೆಸರಿಲ್ಲದೇ ಅಗ್ಗದ ದರದಲ್ಲಿ ಮಾರಾಟ ಮಾಡಲಾಗುತ್ತದೆ. ಇವು ಈಗಾಗಲೇ ಚಾಲ್ತಿಯಲ್ಲಿರುವ ಪರಿಶೀಲಿಸಲ್ಪಟ್ಟ ಔಷಧಗಳೇ ಆಗಿರುವುದರಿಂದ ಬ್ರಾಂಡೆಡ್ ಔಷಧಿಯಷ್ಟೇ ಉತ್ತಮ ಗುಣಮಟ್ಟ ಮತ್ತು ರೋಗ ನಿವಾರಕ ಸಾಮರ್ಥ್ಯವನ್ನು ಹೊಂದಿರುತ್ತವೆ. ಇವುಗಳಿಗೆ ಸಂಶೋಧನಾ ವೆಚ್ಚ ಸೇರಿದಂತೆ ಅನೇಕ ಆರಂಭಿಕ ವೆಚ್ಚ ಇರದ ಕಾರಣ ಕಡಿಮೆ ದರದಲ್ಲಿ ದೊರೆಯತ್ತವೆ.

**ಜನೌಷಧಿಯ ಗುಣಮಟ್ಟಕ್ಕೆ ಖಾತ್ರಿಯೇನು? :** ಈ ಯೋಜನೆಯ ಅನುಷ್ಠಾನ ಏಜೆನ್ಸಿಯಾಗಿರುವ ಬಿಪಿಪಿಐ, ಖಾಸಗಿ ಸಂಸ್ಥೆಗಳಿಂದ & ಔಷಧೀಯ ಕೇಂದ್ರಗಳಿಂದ ಜನೌಷಧಿಯನ್ನು ಟೆಂಡರ್ ಪ್ರಕ್ರಿಯೆಯ ಮೂಲಕ ಪಡೆದುಕೊಳ್ಳುತ್ತದೆ. ಔಷಧ ಉತ್ಪನ್ನಗಳನ್ನು ಪಡೆದ ನಂತರದಲ್ಲಿ ಸದರಿ ಔಷಧಗಳ ಮಾದರಿಗಳನ್ನು ಎನ್‌ಎಬಿಎಲ್ (National Accreditation Board for testing & calibration Laboratories)ಗೆ ಕಳುಹಿಸಿ, ಔಷಧದ ಗುಣಮಟ್ಟದ ಬಗ್ಗೆ ಪರಿಶೀಲನೆ ನಡೆಸಲಾಗುತ್ತದೆ ಹಾಗೂ ಪ್ರಮಾಣ ಪತ್ರ ಪಡೆಯಲಾಗುತ್ತದೆ. ನಂತರ ಮಾರಾಟಕ್ಕೆ ಸರಬರಾಜು ಮಾಡಲಾಗುತ್ತದೆ.

**ಜನೌಷಧಿ ಮಾರಾಟ ಕೇಂದ್ರಗಳನ್ನು ತೆರೆಯುವುದು ಹೇಗೆ? :**

- ರಾಜ್ಯ ಸರ್ಕಾರ, ರಾಜ್ಯ/ ಕೇಂದ್ರ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು, ಪ್ರತಿಷ್ಠಿತ ಎನ್‌ಜಿಓಗಳು, ಟ್ರಸ್ಟ್, ಖಾಸಗಿ ಆಸ್ಪತ್ರೆಗಳು, ದತ್ತಿ ಸಂಸ್ಥೆಗಳು, ವೈದ್ಯರು, ನಿರುದ್ಯೋಗಿಗಳು, ಉದ್ಯಮಿಗಳು ಜನೌಷಧಿ ಮಾರಾಟ ಕೇಂದ್ರಗಳನ್ನು ಆರಂಭಿಸಬಹುದು.
- ಜನೌಷಧಿ ಕೇಂದ್ರ ಆರಂಭಿಸಲು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ,




ವ್ಯಕ್ತಿಗಳಿಗೆ ಹಾಗೂ ಎನ್‌ಜಿಓ ಸೇರಿದಂತೆ ಸಹಕಾರ ಸಂಸ್ಥೆಗಳಿಗೆ ಪ್ರತ್ಯೇಕ ಮಾನದಂಡಗಳಿದ್ದು, ಸಹಕಾರ ಸಂಸ್ಥೆಗಳಿಗೆ ಅನ್ವಯಿಸುವ ಮಾನದಂಡಗಳ ಬಗ್ಗೆ ಇಲ್ಲಿ ಮಾಹಿತಿ ನೀಡಿದೆ. ಇವು ಬಹುತೇಕವಾಗಿ ಯಾವುದೇ ಜನೌಷಧ ಕೇಂದ್ರ ಆರಂಭಿಸುವ ಎಲ್ಲರಿಗೂ ಅನ್ವಯಿಸುತ್ತವೆ.

- ಸಹಕಾರಿ ಸಂಸ್ಥೆಗಳು ಜನೌಷಧಿ ಕೇಂದ್ರವನ್ನು ಆರಂಭಿಸುವುದಾದಲ್ಲಿ – http://janaushadhi.gov.in/ ವೆಬ್‌ಸೈಟಿನಲ್ಲಿ ಲಭ್ಯವಿರುವ ಅರ್ಜಿಯನ್ನು ಭರ್ತಿ ಮಾಡಿ ಬಿಪಿಪಿಐ (Bureau of Pharma PSUs of India)ಗೆ ಸಲ್ಲಿಸಬೇಕು.
- ಬಿ ಫಾರ್ಮಸಿ ಮುಗಿಸಿದವರನ್ನು ಜನೌಷಧಿ ಕೇಂದ್ರದ ನಿರ್ವಹಣೆಗಾಗಿ ನೇಮಕ ಮಾಡಿಕೊಳ್ಳಬೇಕಾಗುತ್ತದೆ. ಅವರ ವಿವರಗಳನ್ನು ಅರ್ಜಿಯೊಂದಿಗೆ ಸಲ್ಲಿಸಬೇಕಾಗುತ್ತದೆ.
- ಜನೌಷಧಿ ಕೇಂದ್ರ ನಡೆಸಲು ಮಳಿಗೆಯು 125 ಚದರಡಿಯಷ್ಟು ಜಾಗ ಹೊಂದಿರಬೇಕಾಗುತ್ತದೆ. ಅಂತಹ ಸ್ಥಳ ಹಾಗೂ ಕಟ್ಟಡ/ ಜಾಗ ಹೊಂದಿರುವ ಬಗ್ಗೆ ದಾಖಲಾತಿಗಳನ್ನು/ ಬಾಡಿಗೆ ಕರಾರು ಪತ್ರವನ್ನು ಪ್ರಸ್ತುತಪಡಿಸಬೇಕಾಗುತ್ತದೆ.
- ಜನೌಷಧಿ ಕೇಂದ್ರ ನಡೆಸುವಷ್ಟು ಹಣಕಾಸು ಸಾಮರ್ಥ್ಯ ಇರುವ ಬಗ್ಗೆ ದಾಖಲಾತಿ ನೀಡಬೇಕಾಗುತ್ತದೆ ಅಥವಾ ಅಫಿಡೆವಿಟ್ ನೀಡಬೇಕಾಗುತ್ತದೆ ಹಾಗೂ ಜನೌಷಧಿ ಕೇಂದ್ರ ನಡೆಸುವ ಬಗ್ಗೆ ಅಗತ್ಯಕ್ಕನುಗುಣವಾಗಿ ಹೂಡಿಕೆ ಮಾಡಲು ಸಿದ್ಧವಿರಬೇಕಾಗುತ್ತದೆ.

**ಜನೌಷಧಿ ಕೇಂದ್ರಗಳಿಗೆ ಇರುವ ಅವಕಾಶಗಳೇನು? :**

- ಖಾಸಗಿ ಉದ್ದಿಮೆದಾರರು, ಸಂಘ ಸಂಸ್ಥೆಗಳು, ಎನ್‌ಜಿಓಗಳು ಆರಂಭಿಸುವ ಜನೌಷಧಿ ಕೇಂದ್ರಗಳು ಬಿಪಿಪಿಐನ ಕೇಂದ್ರವನ್ನು ಅಂತರ್ಜಾಲದೊಂದಿಗೆ ಬೆಸೆದುಕೊಂಡಿರುತ್ತವೆ. ಬಿಪಿಪಿಐನಿಂದ ಸಂಬಂಧಿಸಿದ ಸಾಫ್ಟ್‌ವೇರ್ ಒದಗಿಸಲಾಗುತ್ತದೆ.
- ಆರಂಭದಲ್ಲಿ ಪೀಠೋಪಕರಣಗಳು ಹಾಗೂ ಮಳಿಗೆಯ ಸ್ಥಾಪನೆಗಾಗಿ ಒಂದು ಲಕ್ಷ ರೂಪಾಯಿಗಳವರೆಗೆ, ಗಣಕಯಂತ್ರ ಖರೀದಿ ಹಾಗೂ ಇಂಟರ್‌ನೆಟ್ ಸೌಲಭ್ಯಕ್ಕಾಗಿ ಐವತ್ತು ಸಾವಿರ ರೂಪಾಯಿಗಳವರೆಗೆ ಹಾಗೂ ಮುಂಗಡವಾಗಿ ಒಂದು ಲಕ್ಷ ರೂಪಾಯಿಗಳವರೆಗಿನ ಜನೌಷಧಿಗಳನ್ನು ಹಣ ಮರುಪಾವತಿಯ ನಿಬಂಧನೆಗೊಳಪಟ್ಟು ಬಿಪಿಪಿಐನಿಂದ ನೀಡಲಾಗುತ್ತದೆ.
- ಜನೌಷಧಿ ಕೇಂದ್ರಗಳಿಗೆ ರೂ.2.50/– ಲಕ್ಷದಷ್ಟು ಪ್ರೋತ್ಸಾಹ ಧನವನ್ನು ಕೂಡ ನೀಡಲಾಗುತ್ತದೆ. ಇದನ್ನು ಶೇ.15ರಂತೆ ಅಥವಾ ಮಾಸಿಕ ಮಾರಾಟದ ಆಧಾರದಲ್ಲಿ ಅಥವಾ ಪ್ರತಿ ಮಾಹೆ ರೂ.10,000/– ದಂತೆ ಪಾವತಿಸಲಾಗುತ್ತದೆ.
- ಜನೌಷಧಗಳನ್ನು ಗರಿಷ್ಠ ಮಾರಾಟ ದರದಲ್ಲಿ ಮಾರಾಟ ಮಾಡಿದಲ್ಲಿ ಜನೌಷಧಿ ಕೇಂದ್ರಕ್ಕೆ ಶೇ.20ರಷ್ಟು ಮಾರ್ಜಿನ್ ದೊರೆಯುತ್ತದೆ. ಇದನ್ನು ಹೊರತುಪಡಿಸಿ ಶೇ.10ರಷ್ಟು ಹಂಚಿಕೆದಾರರಿಗೆ ಮಾರ್ಜಿನ್ ಇರುತ್ತದೆ.
- ಔಷಧಗಳ ಅವಧಿ ಮುಕ್ತಾಯದಿಂದ (Expiry) ನಷ್ಟವಾದಲ್ಲಿ, ಉಂಟಾದ ನಷ್ಟ ಅಥವಾ ಮಾರಾಟದ ಶೇ.2ರಷ್ಟು ಇದರಲ್ಲಿ ಯಾವುದು ಕಡಿಮೆಯೋ ಅಷ್ಟನ್ನು ಪರಿಹಾರವಾಗಿ ನೀಡಲಾಗುತ್ತದೆ.
- ಜನೌಷಧಿ ಕೇಂದ್ರಗಳಿಗೆ 30 ದಿನಗಳವರೆಗೆ & ಹಂಚಿಕೆದಾರರಿಗೆ 60 ದಿನಗಳವರೆಗೆ ಪೋಸ್ಟ್ ಡೇಟೆಡ್ ಚೆಕ್ ಪಡೆದು ಕ್ರೆಡಿಟ್ ನೀಡಲಾಗುತ್ತದೆ.
- ಔಷಧ ಅಂಗಡಿಗಳನ್ನು ನಿರ್ವಹಿಸುವ ಅನುಭವವಿಲ್ಲದವರಿಗೆ ತರಬೇತಿಯನ್ನು ನೀಡಲಾಗುತ್ತದೆ.

'ಜನೌಷಧ' ಮಳಿಗೆಗಳನ್ನು ರಾಜ್ಯದ ಸೌಹಾರ್ದ ಸಹಕಾರಿಗಳ ಮೂಲಕ ಜನಸಾಮಾನ್ಯರಿಗೆ ತಲುಪಿಸುವ ಕಾರ್ಯವನ್ನು ಮಾಡಲು ಸಂಯುಕ್ತ ಸಹಕಾರಿಯು ಉತ್ಸುಕವಾಗಿದೆ. ರಾಜ್ಯದ ಸೌಹಾರ್ದ ಸಹಕಾರಿಗಳು ಈಗಾಗಲೇ ಇ–ಸ್ಟ್ಯಾಂಪಿಂಗ್, ಸಕಾಲ ಸೇರಿದಂತೆ ಇಂತಹ ಹಲವಾರು ಜವಾಬ್ದಾರಿಯನ್ನು ಯಶಸ್ವಿಯಾಗಿ ಮತ್ತು ಸಮರ್ಥವಾಗಿ ನಿರ್ವಹಿಸಿರುತ್ತವೆ.

**ಕೇಂದ್ರ ಸರ್ಕಾರವು ಜನೌಷಧ ಮಳಿಗೆಗಳನ್ನು ಸಂಯುಕ್ತ ಸಹಕಾರಿಯ ಮೂಲಕ ಸೌಹಾರ್ದ ಸಹಕಾರಿಗಳಿಗೆ ತೆರೆಯಲು ಅವಕಾಶ ಕಲ್ಪಿಸುವ ಮೂಲಕ ರಾಜ್ಯದ ಸೌಹಾರ್ದ ಕ್ಷೇತ್ರವನ್ನು ಪ್ರೋತ್ಸಾಹಿಸುವಂತೆ ಶ್ರೀ ಹೆಚ್.ಎನ್. ಅನಂತಕುಮಾರ್, ಮಾನ್ಯ ಕೇಂದ್ರ ಸಚಿವರು, ರಾಸಾಯನಿಕ ಮತ್ತು ರಸಗೊಬ್ಬರ ಇಲಾಖೆ, ನವದೆಹಲಿ ಇವರಿಗೆ ದಿನಾಂಕ : 21.04.2017 ರಂದು ಸಂಯುಕ್ತ ಸಹಕಾರಿಯಿಂದ ಮನವಿ ಸಲ್ಲಿಸಲಾಗಿದೆ.**

**ಕರ್ನಾಟಕದಲ್ಲಿ ಜನೌಷಧಿ ಯೋಜನೆಯ ಅನುಷ್ಠಾನದ ಪ್ರಯತ್ನಗಳು :** ರಾಜ್ಯ ಸರ್ಕಾರದ ಆಸ್ಪತ್ರೆ ಹಾಗೂ ವೈದ್ಯಕೀಯ ಕಾಲೇಜುಗಳಲ್ಲಿ ಕೇಂದ್ರ ಆರಂಭಿಸುವ, ಪ್ರತಿಷ್ಠಿತ ಸಂಘ ಸಂಸ್ಥೆಗಳೊಂದಿಗೆ, ಎನ್‌ಜಿಓಗಳೊಂದಿಗೆ ದೊಡ್ಡ ಸಂಖ್ಯೆಯಲ್ಲಿ ಕೇಂದ್ರ ಸ್ಥಾಪಿಸುವ ಬಗ್ಗೆ ಒಪ್ಪಂದ ಮಾಡಿಕೊಳ್ಳಲಾಗುತ್ತಿದೆ. ಕರ್ನಾಟಕದ ಸರ್ಕಾರಿ ಸ್ವಾಮ್ಯದ ಎಂಎಸ್‌ಐಎಲ್ – ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿ.,ಗೆ ಸರ್ಕಾರಿ ಆಸ್ಪತ್ರೆ ಆವರಣದಲ್ಲಿ ಮಳಿಗೆ ತೆರೆಯಲು ರಾಜ್ಯ ಸರ್ಕಾರ ಅನುಮತಿ ನೀಡಿದೆ.

ಕರ್ನಾಟಕ ಸ್ಟೇಟ್ ಡ್ರಗ್ಸ್ ಲಾಜಿಸ್ಟಿಕ್ಸ್ & ವೇರ್ ಹೌಸಿಂಗ್ ಹಾಗೂ ರೆಡ್‌ಕ್ರಾಸ್ ಸೊಸೈಟಿಗಳಿಗೆ ರಾಜ್ಯ ಸರ್ಕಾರ ಈ ಹಿಂದೆಯೇ ಅನುಮತಿ ನೀಡಿತ್ತು. ಇಂಡಿಯನ್ ಮೆಡಿಕಲ್ ಅಸೋಸಿಯೇಷನ್ ಮಾರಾಟ ಮಳಿಗೆಯನ್ನು ಆರಂಭಿಸಲು ಕ್ರಮವಿಟ್ಟಿದೆ. ಇದಲ್ಲದೇ ಸೌಹಾರ್ದ ಸಹಕಾರ ಕ್ಷೇತ್ರದಲ್ಲಿ – ಮಂಗಳೂರಿನ ಮಾತೃಭೂಮಿ ಸೌಹಾರ್ದ ಸಹಕಾರಿಯು ಕೇಂದ್ರ ಸರ್ಕಾರದಿಂದ ಜನೌಷಧ ಕೇಂದ್ರಗಳನ್ನು ತೆರೆಯಲು ಅನುಮತಿಯನ್ನು ಪಡೆದುಕೊಂಡಿರುತ್ತದೆ.

ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ, ಸಮುದಾಯ ಆರೋಗ್ಯ ಕೇಂದ್ರ, ತಾಲ್ಲೂಕು/ ಜಿಲ್ಲಾ ಸಾರ್ವಜನಿಕ ಆಸ್ಪತ್ರೆ ಸೇರಿದಂತೆ ರಾಜ್ಯದ ಇತರೆ ಆರೋಗ್ಯ ಕೇಂದ್ರಗಳಲ್ಲಿ ಜನರಿಕ್ ಔಷಧಿ ಖರೀದಿಸಿ ಬಳಸಲು ಹಾಗೂ ಜನೌಷಧಿ ಮಳಿಗೆ ತೆರೆಯಲು ರಾಜ್ಯ ಸರ್ಕಾರ ಕಾರ್ಯಕ್ರಮ ಹಮ್ಮಿಕೊಂಡಿದೆ.

ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರುಗಳು ರೋಗಿಗಳಿಗೆ ಬ್ರಾಂಡೆಡ್ ಔಷಧಿಗಳನ್ನು ಸಲಹಾ ಚೀಟಿಯಲ್ಲಿ ಬರೆದುಕೊಡುವುದನ್ನು ನಿಷೇಧಿಸಿ, ಜನರಿಕ್ ಔಷಧಿಗಳನ್ನೇ ಕಡ್ಡಾಯವಾಗಿ ಸ್ಪಷ್ಟವಾಗಿ ಕಾಣಿಸುವಂತೆ ದೊಡ್ಡ ಅಕ್ಷರದಲ್ಲಿ ಬರೆಯಲು ಸೂಚಿಸಲಾಗಿದೆ.

ಬ್ರಾಂಡೆಡ್ ಹೆಸರಿನಲ್ಲಿ ಸಲಹಾ ಚೀಟಿ ನೀಡುವುದು ಹಾಗೂ ಖಾಸಗಿ ಔಷಧ ಅಂಗಡಿಗಳಿಂದ ಬ್ರಾಂಡೆಡ್ ಔಷಧ ಖರೀದಿಗೆ ಪ್ರೇರೇಪಿಸಿದ್ದು ಕಂಡುಬಂದಲ್ಲಿ ಅಂತಹ ವೈದ್ಯಾಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎನ್ನುವ ಆದೇಶವನ್ನು ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ




ಇಲಾಖೆ ದಿನಾಂಕ:01.10.2016ರಲ್ಲಿ ಹೊರಡಿಸಿದೆ.

ಜನೌಷಧಗಳ ಪಟ್ಟಿ ಹಾಗೂ ದರದ ಹೋಲಿಕೆಯ ವಿವರ, ಜನೌಷಧಿ ಕೇಂದ್ರ ಆರಂಭಿಸುವ ಮಾರ್ಗದರ್ಶಿ, ಇನ್ನಿತರ ಮಾಹಿತಿಗಳು http://janaushadhi.gov.in/ ವೆಬ್‌ಸೈಟ್‌ನಲ್ಲಿ ಲಭ್ಯವಿದೆ. ಎಲ್ಲಾ ಚಿಕಿತ್ಸೆಗಳಲ್ಲಿ ಸಾಮಾನ್ಯವಾಗಿ ಬಳಸುವ ಔಷಧಗಳನ್ನು ಜನೌಷಧಿಯಾಗಿ ದೊರೆಯುವಂತೆ ಹಾಗೂ ಆರೋಗ್ಯ ರಕ್ಷಣೆಯ ಎಲ್ಲಾ ಉತ್ಪನ್ನಗಳು ಈ ಯೋಜನೆಯಡಿ ಬರುವಂತೆ ಮಾಡುವ ಪ್ರಯತ್ನ ಸರ್ಕಾರದ ಹಂತದಲ್ಲಿ ಜಾರಿಯಲ್ಲಿದೆ. ಬಡತನದ, ಮಧ್ಯಮ ಹಾಗೂ ಕೆಳ ಮಧ್ಯಮ ವರ್ಗದ ಕುಟುಂಬಗಳನ್ನೇ ಹೆಚ್ಚಾಗಿ ಹೊಂದಿರುವ ಭಾರತದಲ್ಲಿ ವೈದ್ಯಕೀಯ ವೆಚ್ಚ ಹೆಚ್ಚಳದ ಸಮಸ್ಯೆಯನ್ನು ನಿವಾರಿಸಿ ಕಡಿಮೆ ದರದಲ್ಲಿ ಹೆಚ್ಚು ಗುಣಮಟ್ಟದ ಔಷಧವನ್ನು ಒದಗಿಸುವ ಅವಕಾಶ ಇದಾಗಿದೆ.


ಹಣಕಾಸು ವ್ಯವಹಾರಗಳೊಂದಿಗೆ ಆರೋಗ್ಯ ವೆಚ್ಚ ನಿಯಂತ್ರಣದ ಸರ್ಕಾರದ ಯೋಜನೆಯಲ್ಲಿ ಸಹಕಾರ ಸಂಸ್ಥೆಗಳು ಭಾಗಿಯಾಗಿ ಜನೌಷಧಿ ಕೇಂದ್ರ ಆರಂಭಿಸಲು ಹಾಗೂ ತಮ್ಮ ಸದಸ್ಯರಲ್ಲಿ ಈ ಬಗ್ಗೆ ಜಾಗೃತಿ ಮೂಡಿಸಲು ಮುಂದೆ ಬರಬೇಕಿದೆ. ■




## ಹರಿದ ಅಥವಾ ಬಣ್ಣ ಬಿದ್ದ ನೋಟಿಗೆ 'ನೋ' ಅನ್ನುವಂತಿಲ್ಲ

ಸ್ವಲ್ಪ ಗಲೀಜಾದ, ಮಾಸಿದ, ಯಾರೋ ಪೆನ್ನಿಂದ ಗೀಚಿದ ನೋಟುಗಳು ಅಥವಾ ಬಣ್ಣ ಬಿದ್ದ ನೋಟುಗಳನ್ನು ಸ್ವೀಕರಿಸುವಂತೆ ಬ್ಯಾಂಕ್‌ಗಳಿಗೆ ಭಾರತೀಯ ರಿಸರ್ವ್ ಬ್ಯಾಂಕ್ ಸೂಚನೆ ನೀಡಿದ್ದು, ಈ ಸಂಬಂಧ ಸುತ್ತೋಲೆಯನ್ನು ಹೊರಡಿಸಿದೆ. ಹೋಳಿ ಹಬ್ಬದ ಸಂದರ್ಭದಲ್ಲಿ ಬಣ್ಣ ಬಿದ್ದ ನೋಟುಗಳನ್ನು ಸ್ವೀಕರಿಸದಂತೆ ಬ್ಯಾಂಕ್‌ಗಳಿಗೆ ಆರ್‌ಬಿಐ ಸೂಚಿಸಿತ್ತು. ನೋಟುಗಳನ್ನು ಚೊಕ್ಕಟವಾಗಿಡುವ ನಿಟ್ಟಿನಲ್ಲಿ ಈ ಕ್ರಮ ಕೈಗೊಳ್ಳಲಾಗಿತ್ತು. ಆದರೆ, ಇದನ್ನೇ ನೆಪ ಮಾಡಿಕೊಂಡ ಬ್ಯಾಂಕ್‌ಗಳು, ಇಂತಹ ನೋಟುಗಳು ಬಂದಾಗ ಸ್ವೀಕರಿಸುತ್ತಿರಲಿಲ್ಲ. ಸಾರ್ವಜನಿಕರ ದೂರುಗಳು ಹೆಚ್ಚಿದ ಪರಿಣಾಮ, ಆರ್‌ಬಿಐ ಹೊಸ ಸುತ್ತೋಲೆ ಹೊರಡಿಸಿದೆ. ಸಾರ್ವಜನಿಕರಿಂದ ಇಂತಹ ನೋಟುಗಳನ್ನು ಪಡೆಯುವ ಆರ್‌ಬಿಐ ಅವುಗಳನ್ನು ನಾಶಮಾಡುತ್ತದೆ.

# ಆರ್ಥಿಕ ಸೇರ್ಪಡೆ ಮುಖ್ಯ ವಾಹಿನಿಯಲ್ಲಿ ಗುರುತಿಸಿಕೊಳ್ಳುವಲ್ಲಿ ಸಹಕಾರ ಸಂಸ್ಥೆಗಳ ಪಾತ್ರ



▶▶ ಬಿ.ಎ.ಮಹದೇವಪ್ಪ, ಸನ್ಮತಿ ಪ್ರತಿಷ್ಠಾನ, ಶಿವಮೊಗ್ಗ.

**ಇತ್ತೀಚೆಗೆ ದೇಶದಲ್ಲಿ ಸ್ವಾಯತ್ತ ಸಹಕಾರ ಕಾಯ್ದೆಗಳಡಿಯಲ್ಲಿ ಕರ್ನಾಟಕದಲ್ಲಿ 2001ರಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ಪ್ರಾರಂಭವಾಗಿ ಉತ್ತಮವಾಗಿ ಹಾಗೂ ಮಾದರಿಯಾಗಿ ಮತ್ತು ಹಳೆಯ ಕಾಯ್ದೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಸ್ಥೆಗಳಿಗೆ ಪ್ರೋತ್ಸಾಹವನ್ನು ನೀಡುವಂತೆ ರಾಜ್ಯದ 4000 ಸೌಹಾರ್ದ ಸಹಕಾರಿಗಳ ಕಾರ್ಯ ಶ್ಲಾಘನೀಯವಾಗಿದೆ. ಆರ್ಥಿಕ ಸೇರ್ಪಡೆ ಕಾರ್ಯಕ್ರಮದಲ್ಲಿ ಉತ್ತಮ ಉದಾಹರಣೆಯಾಗಿವೆ ಎಂಬುದರಲ್ಲಿ ಎರಡು ಮಾತಿಲ್ಲ.**

ಪ್ರಜಾಪ್ರಭುತ್ವವು ಸಮಾಜದಲ್ಲಿ ಆಳವಾಗಿ ಬೇರು ಬಿಡಬೇಕೆಂದರೆ ಅಲ್ಲಿನ ಅಭಿವೃದ್ಧಿಯು ಎಲ್ಲರನ್ನು ಒಳಗೊಳ್ಳುವಂತಿರಬೇಕು. ಇಲ್ಲದಿದ್ದರೆ ಪ್ರಜಾಪ್ರಭುತ್ವವು... ಉಳ್ಳವರಿಗಾಗಿ, ಉಳ್ಳವರಿಂದ ಮತ್ತು ಉಳ್ಳವರಿಗೋಸ್ಕರ ಅನ್ನುವಂತಾಗಿ ಬಿಡುತ್ತದೆ ಹಾಗೂ ಅಭಿವೃದ್ಧಿಯ ಸಾಮರ್ಥ್ಯವನ್ನು ಪೂರ್ಣವಾಗಿ ಉಪಯೋಗಿಸುವುದು ಸಾಧ್ಯವಾಗುವುದಿಲ್ಲ. ಒಟ್ಟು ರಾಷ್ಟ್ರೀಯ ಉತ್ಪನ್ನವನ್ನು ಆದರ್ಶ ಗರಿಷ್ಠ ಮಟ್ಟಕ್ಕೆ ಒಯ್ಯುವುದು ಸಾಧ್ಯವಾಗಬೇಕಾದರೆ ಅದರಲ್ಲಿ ಸಮಾಜದ ಎಲ್ಲರೂ ಸಹಭಾಗಿಗಳಾಗಬೇಕು. ಅಭಿವೃದ್ಧಿಯ ಫಲಗಳನ್ನು ಎಲ್ಲರೂ ಅನುಭವಿಸಬೇಕು. ಆರ್ಥಿಕ ಅಭಿವೃದ್ಧಿಯು ಎಲ್ಲರನ್ನು ಒಳಗೊಳ್ಳುವಂತಿರಬೇಕು. ಜನರ ಬದುಕಿನ ಸಮೃದ್ಧತೆ ಅಂದರೆ ಜನರು ಅಕ್ಷರಸ್ಥರಾಗಿರಬೇಕು, ಆರೋಗ್ಯಕಾಯರಾಗಿ ದೀರ್ಘ ಆಯಸ್ಸುಳ್ಳವರಾಗಬೇಕು ಮತ್ತು ಘನತೆಯಿಂದ ಮತ್ತು ಗೌರವದಿಂದ ಬದುಕುವುದು ಸಾಧ್ಯವಾಗಬೇಕು. ಅಭಿವೃದ್ಧಿಗೆ ತನ್ನಷ್ಟಕ್ಕೆ ಜನರನ್ನು ಒಳಗೊಳ್ಳುವ ಗುಣ ಇರುವುದಿಲ್ಲ. ಅದನ್ನು ಪ್ರಜ್ಞಾಪೂರ್ವಕವಾಗಿ ಸಾಧಿಸಿಕೊಳ್ಳಬೇಕು. ಕೇವಲ ತಲಾ ವರಮಾನದ ಹೆಚ್ಚಳದಿಂದ ಮಾತ್ರ ಅಭಿವೃದ್ಧಿ ಸಾಧ್ಯವಾಗುವುದಿಲ್ಲ. ಎಲ್ಲ ಆಯಾಮಗಳಲ್ಲೂ ಸಮಾನತೆಯನ್ನು ಸಾಧಿಸಿಕೊಂಡಾಗ ಮಾತ್ರ ಅಭಿವೃದ್ಧಿ ಎಲ್ಲರನ್ನೂ ಒಳಗೊಳ್ಳುವುದು ಸಾಧ್ಯ. ಏಕೆಂದರೆ ಜನರು ಅಭಿವೃದ್ಧಿಯ ಸಾಧನ ಮಾತ್ರವಲ್ಲ, ಅವರು ಅಭಿವೃದ್ಧಿಯ ಕರ್ತೃಗಳು. ಅಭಿವೃದ್ಧಿಯನ್ನು ಅನುಭವಿಸಬೇಕಾದವರು ಜನರು.

ಈ ಹಿನ್ನೆಲೆಯಲ್ಲಿ ಎಲ್ಲರನ್ನೂ ಮತ್ತು ಎಲ್ಲವನ್ನೂ ಒಳಗೊಂಡ ಅಭಿವೃದ್ಧಿಯು... ಸುಸ್ಥಿರ ಅಭಿವೃದ್ಧಿ ಎನಿಸುತ್ತದೆ. ಇದನ್ನು ಸಾಧಿಸಲು... ಈ ದಿನಗಳ ಸನ್ನಿವೇಶದಲ್ಲಿ ಸಹಕಾರ ಕ್ಷೇತ್ರ ಹೆಚ್ಚು ಸೂಕ್ತವಾಗುತ್ತದೆ ಹಾಗೂ "ಸಹಕಾರ ಸಂಸ್ಥೆಗಳ ಮೂಲಕ ಆರ್ಥಿಕ ಸೇರ್ಪಡೆ" ಎಂಬ ವಿಷಯ ಬಹಳ ಮುಖ್ಯವಾಗುತ್ತದೆ.

ಸಹಕಾರ ಕ್ಷೇತ್ರ... ರೈತರ ಕ್ಷೇತ್ರ, ಮಹಿಳೆಯರ ಕ್ಷೇತ್ರ, ಆರ್ಥಿಕವಾಗಿ ಹಿಂದುಳಿದವರ ಕ್ಷೇತ್ರ. ಸಹಕಾರ ಸಂಸ್ಥೆಗಳು ಸಾಮಾಜಿಕ ಬದ್ಧತೆಯನ್ನುಹೊಂದಿರುವ ವ್ಯಾವಹಾರಿಕ ಸಂಸ್ಥೆಗಳಾಗಿದ್ದು, ಸದಸ್ಯರ ಆರ್ಥಿಕ – ಸಾಮಾಜಿಕ ಅಭಿವೃದ್ಧಿ ಇವುಗಳ ಉದ್ದೇಶವಾಗಿದೆ. ಪ್ರಸ್ತುತ 30 ಕೋಟಿಗೂ ಹೆಚ್ಚು ಮಾನವ ಸಂಪನ್ಮೂಲವನ್ನು ಹೊಂದಿರುವ ಈ ಕ್ಷೇತ್ರದಲ್ಲಿ 6 ಲಕ್ಷಕ್ಕೂ ಹೆಚ್ಚು ಸಹಕಾರ ಸಂಸ್ಥೆಗಳು... ನೂರಕ್ಕೆ ನೂರರಷ್ಟು ಗ್ರಾಮೀಣ ಕಾರ್ಯವ್ಯಾಪ್ತಿಯನ್ನು ಹೊಂದಿವೆ. ಈ ಸಂಸ್ಥೆಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು



ಮತ್ತು ಹೆಚ್ಚಿನ ಸಿಬ್ಬಂದಿಗಳು... ಎಲ್ಲರೂ ಸ್ಥಳೀಯರೇ. ಸ್ಥಳೀಯವಾಗಿ ಎಲ್ಲರನ್ನೂ ಮತ್ತು ಎಲ್ಲವನ್ನೂ ಒಳಗೊಂಡ ಅಭಿವೃದ್ಧಿಯನ್ನು ಸಾಧಿಸಲು ಸಹಕಾರ ಕ್ಷೇತ್ರಕ್ಕಿಂತ ಪರ್ಯಾಯ ಕ್ಷೇತ್ರ ಇನ್ನೊಂದಿಲ್ಲ. ಹೊಸ ಆರ್ಥಿಕ ನೀತಿ, ತೀವ್ರ ಪೈಪೋಟಿಗಳ ನಡುವೆಯು, ಗ್ರಾಮೀಣ ಸಾಲ ಪೂರೈಕೆಯನ್ನು ಯಶಸ್ವಿಯಾಗಿ ನಿರ್ವಹಿಸುವ ಕಾರ್ಯವು ಕೃಷಿ ಪತ್ತಿನ ಸಹಕಾರ ಸಂಘಗಳಿಂದ ಮಾತ್ರ ಸಾಧ್ಯವೆಂಬುದನ್ನು ಈಗಾಗಲೇ ಸಾಬೀತುಪಡಿಸಲಾಗಿದೆ. ರೈತ ಬಂಧುಗಳಿಗೆ ನೀಡುವ ಕೃಷಿ ಸಾಲದ... ಶೇ.95ರಷ್ಟು ಹಣ ನಬಾರ್ಡ್, ಅಪೆಕ್ಸ್ ಬ್ಯಾಂಕ್ ಮತ್ತು ಜಿಲ್ಲಾ ಬ್ಯಾಂಕುಗಳಿಂದ... ಗ್ರಾಮಗಳಿಗೆ ಬರುತ್ತದೆ. ಹಾಲು ಉತ್ಪಾದಕರಿಗೆ ವಾರಕ್ಕೊಮ್ಮೆ ನೀಡುವ ಹಣ... ನಗರದಿಂದ ಹಳ್ಳಿಗೆ ಬರುತ್ತದೆ. ಸ್ವ–ಸಹಾಯ ಗುಂಪುಗಳಿಗೆ ನೀಡುತ್ತಿರುವ ಸಾಲ ಸೌಲಭ್ಯದ ಹಣ... ನಗರದಿಂದ ಹಳ್ಳಿಗಳ ಮೂಲೆ ಮೂಲೆಗೆ ಬರುತ್ತದೆ. ಈ ವ್ಯವಸ್ಥೆಗೆ ಅಗತ್ಯವಿರುವ ಸ್ಥಳೀಯ ವಿದ್ಯಮಾನ ಹಾಗೂ ಜನರ ನಾಡಿಮಿಡಿತವನ್ನು ಚೆನ್ನಾಗಿ ತಿಳಿದಿರುವ ಸ್ಥಳೀಯ ನೆಟ್‌ವರ್ಕ್ ಸಹಕಾರಿ ವಲಯದಲ್ಲಿ ಮಾತ್ರ ಇದೆ. ಈ ಗುಣಲಕ್ಷಣಗಳನ್ನು ಯಾವುದೇ ರಾಷ್ಟ್ರೀಕೃತ–ವಾಣಿಜ್ಯ ಬ್ಯಾಂಕುಗಳಲ್ಲಿ ಅಥವಾ ಗ್ರಾಮೀಣ ಬ್ಯಾಂಕುಗಳಲ್ಲಿ ನೋಡಲಾಗುವುದಿಲ್ಲ.

ರಾಜ್ಯದಲ್ಲಿ... ರೂ. 3 ಲಕ್ಷಗಳವರೆಗೆ ಶೂನ್ಯ ಬಡ್ಡಿ ಹಾಗೂ ರೂ. 10 ಲಕ್ಷದವರೆಗೆ 3ರ ಬಡ್ಡಿ ದರದಲ್ಲಿ ಅಲ್ಪಾವಧಿ ಸಾಲಗಳನ್ನು ನೀಡಲಾಗುತ್ತಿದೆ. 2015–16ನೇ ಸಾಲಿನಲ್ಲಿ 22.56 ಲಕ್ಷ ರೈತರಿಗೆ 10,236 ಕೋಟಿ ಅಲ್ಪಾವಧಿ ಸಾಲ ಹಾಗೂ 22,478 ರೈತರಿಗೆ 374 ಕೋಟಿ ಮಧ್ಯಮಾವಧಿ ಸಾಲವನ್ನು ವಿತರಿಸಲಾಗಿದೆ. ಈ ಸಾಲದ ಪ್ರಯೋಜನ ಪಡೆದಿರುವವರಲ್ಲಿ ಸಣ್ಣ/ಅತಿ ಸಣ್ಣ ರೈತರು, ಮಹಿಳೆಯರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರು ಹಾಗೂ ಅಲ್ಪ ಸಂಖ್ಯಾತರು ಮತ್ತು ಹಿಂದುಳಿದ ವರ್ಗದ ಸದಸ್ಯರುಗಳೂ ಇದ್ದಾರೆ.

ರಾಜ್ಯದಲ್ಲಿ... 14 ಸಾವಿರ ಹಾಲು ಉತ್ಪಾದಕರ ಸಹಕಾರ ಸಂಘಗಳಿದ್ದು, ಪ್ರತಿದಿನ 65 ಲಕ್ಷ ಲೀಟರ್ ಹಾಲು ಸಂಗ್ರಹವಾಗುತ್ತಿದ್ದು, 36 ಲಕ್ಷ ಲೀಟರ್ ಮಾರಾಟವಾಗುತ್ತಿದೆ. 365 ದಿವಸವೂ... ಬೆಳಿಗ್ಗೆ ಮತ್ತು ಸಂಜೆ ಹಾಲು ಸಂಗ್ರಹಣೆ ಆಗುತ್ತಿದ್ದು, ಉತ್ಪಾದಕರಿಗೆ 1 ಲೀಟರಿಗೆ ರೂ. 20.25 ಮತ್ತು ರೂ. 4.00 ಗಳನ್ನು ನೀಡಲಾಗುತ್ತಿದೆ. ಹೈನುಗಾರಿಕೆಯನ್ನು ವ್ಯಾಪಕವಾಗಿ ಅಭಿವೃದ್ಧಿ ಪಡಿಸಲು, ರೈತರಿಗೆ ಲಾಭದಾಯಕವಾದ ಉಪ ಜೀವನದ ಸಾಧ್ಯತೆಯನ್ನು ತೋರಿಸಲು, ಆದಾಯದ ಹೊಸ ಮೂಲವನ್ನು ದೊರಕಿಸಿಕೊಡಲು ಮತ್ತು ಮಹಿಳಾ

ಸಬಲೀಕರಣಕ್ಕೆ ಪ್ರೋತ್ಸಾಹ ನೀಡಲು ರಾಜ್ಯದಲ್ಲಿ ಕೆ.ಎಂ.ಎಫ್. ಮತ್ತು 14 ಹಾಲು ಉತ್ಪಾದಕರ ಒಕ್ಕೂಟಗಳು ಕಾರ್ಯನಿರ್ವಹಿಸುತ್ತಿವೆ. "ಹೈನುಗಾರಿಕೆ ಇರುವ ಮನೆಗಳಲ್ಲಿ... ಯಾರೂ ಉಪವಾಸ ಮಲಗುವುದಿಲ್ಲ. ದಿನದ ಅಥವಾ ವಾರದ ಆದಾಯ ಇರುವ ಯಾವ ರೈತನಿಗೂ... ಸಾಲ ಹೊರೆ ಎನಿಸುವುದಿಲ್ಲ" ಎಂದು ಹೇಳಿರುವ ಡಾ॥ ವರ್ಗೀಸ್ ಕುರಿಯನ್‌ರವರ ಮಾತುಗಳು ಸಹಕಾರ ಸಂಸ್ಥೆಗಳು ಆರ್ಥಿಕ ಸೇರ್ಪಡೆ ಕಾರ್ಯಕ್ರಮದಲ್ಲಿ ಮಹತ್ತರ ಪಾತ್ರವನ್ನು ವಹಿಸಬಲ್ಲವು ಎಂಬುದನ್ನು ಸ್ಪಷ್ಟಪಡಿಸುತ್ತವೆ.

ಸ್ವಸಹಾಯ ಗುಂಪುಗಳು... ಮಹಿಳಾ ಸಬಲೀಕರಣದ ಆಶಾಕಿರಣ...! ರಾಜ್ಯದ ಸಹಕಾರಿ ಕ್ಷೇತ್ರದಲ್ಲಿ... ಒಟ್ಟು 2,39,836 ಸ್ವಸಹಾಯ ಗುಂಪುಗಳಿದ್ದು, ಇವುಗಳಿಗೆ ಈವರೆವಿಗೆ ಒಟ್ಟು ರೂ. 4416 ಕೋಟಿ ಸಾಲ ಮತ್ತು 17838 ಜಂಟಿ ಬಾಧ್ಯತಾ ಗುಂಪುಗಳಿಗೆ ಈವರೆವಿಗೆ ರೂ. 122 ಕೋಟಿ ಸಾಲ ನೀಡಲಾಗಿದೆ. ಇದರಿಂದಾಗಿ ಆರ್ಥಿಕ–ಸಾಮಾಜಿಕ ಮೌನಕ್ರಾಂತಿ ಉಂಟಾಗಿದ್ದು, ಹಳ್ಳಿಗಳಿಂದ ಜನರು ಪಟ್ಟಣಕ್ಕೆ ವಲಸೆ ಹೋಗುವ ಪ್ರಮಾಣ ಕಡಿಮೆಯಾಗಿರುವುದಲ್ಲದೇ, ಗ್ರಾಮೀಣ ಉದ್ಯೋಗಗಳ ಹೆಚ್ಚಳಕ್ಕೆ ಕಾರಣವಾಗುತ್ತಿದೆ. ಇದಲ್ಲದೆ ಆರ್ಥಿಕ ಸೇರ್ಪಡೆಯ ಮುಖ್ಯ ಲಕ್ಷಣಗಳಾದ C.R.I.S.P. ಅಂದರೆ ಸಾಲ ವಿತರಣೆ, ಹಣ ಪಾವತಿ, ವಿಮೆ, ಉಳಿತಾಯ ಮತ್ತು ಪಿಂಚಣಿ ಮುಂತಾದ ಐದು ರೀತಿಯ ಹಣಕಾಸು ಸೌಲಭ್ಯಗಳನ್ನು ಸ್ವಸಹಾಯ ಗುಂಪುಗಳ ಮೂಲಕವೂ ಸಹ ಪಡೆದುಕೊಳ್ಳಲು ಸಾಧ್ಯವಾಗುತ್ತಿದೆ.

ಸಹಕಾರಿ ರೈತರ ಆರೋಗ್ಯ ವಿಮೆ... ಒಂದು ವಿಶಿಷ್ಟ ಯೋಜನೆ. ಗ್ರಾಮೀಣ ಸದಸ್ಯರಿಂದ ವರ್ಷಕ್ಕೆ ರೂ.250, ಪರಿಶಿಷ್ಟ ಜಾತಿ–ಪಂಗಡದವರಿಂದ ರೂ.50 ಮಾತ್ರ ವಂತಿಗೆಯನ್ನು ಪಡೆದು, ರಾಜ್ಯದ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ, ಹೃದಯ ಸಂಬಂಧಿ ಕಾಯಿಲೆಗೆ ಸ್ಟಂಟ್ ಹಾಕುವುದು, ಮೂಳೆ ಮುರಿತಕ್ಕೆ ರಾಡ್ ಅಳವಡಿಕೆ, ಮೂತ್ರಪಿಂಡ ತೊಂದರೆಗೆ ಡಯಾಲಿಸಿಸ್ ಸೇರಿದಂತೆ 823 ಶಸ್ತ್ರಚಿಕಿತ್ಸೆಗಳ ಸೌಲಭ್ಯಗಳನ್ನು ಒದಗಿಸುತ್ತಿರುವುದು ಸಹಕಾರ ಇಲಾಖೆಯ ಮೂಲಕ ಸಹಕಾರ ಸಂಸ್ಥೆಗಳ ಭಾಗವಹಿಸುವಿಕೆಯನ್ನು ಸ್ಪಷ್ಟಪಡಿಸುತ್ತದೆ. ಇದು ಸಮಾಜದ ಎಲ್ಲರ ಆರೋಗ್ಯದ ಬಗ್ಗೆ ಇರುವ ಕಾಳಜಿಯನ್ನು ಸೂಚಿಸುತ್ತದೆ.

ಸಹಕಾರ ಸಂಸ್ಥೆಗಳು ಅವುಗಳ ಸದಸ್ಯರಿಗೆ ಕಡಿಮೆ ವೆಚ್ಚದಲ್ಲಿ ಗೊಬ್ಬರ, ಬೀಜ ಕ್ರಿಮಿನಾಶಕಗಳನ್ನು ಪೂರೈಕೆ ಮಾಡುತ್ತಿವೆ. ಕೃಷಿ ಉತ್ಪನ್ನಗಳ ಮಾರಾಟ ಮತ್ತು ಸಂಸ್ಕರಣೆ, ವಿಮೆ, ಆರೋಗ್ಯ ಮುಂತಾದ ಸೌಲಭ್ಯಗಳನ್ನು ಕಲ್ಪಿಸಿಕೊಳ್ಳುತ್ತಿವೆ. ಇಲ್ಲಿ ಅತಿ ಆಸೆಗಾಗಲೀ, ಹೆಚ್ಚಿನ ಲಾಭಗಳಿಕೆಗಾಗಲಿ ಮಹತ್ವ ನೀಡುವುದಿಲ್ಲ. ಅನಾವಶ್ಯಕವಾದ ಮಧ್ಯವರ್ತಿಗಳ ಪ್ರವೇಶವನ್ನು ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ಮಾರಾಟ ಮತ್ತು ಪರಿಷ್ಕರಣ ಸಹಕಾರ ಸಂಘಗಳು ಕಾರ್ಯಪ್ರವೃತ್ತವಾಗಿವೆ.

ದುರ್ಬಲ ವರ್ಗಗಳ ಸಾಮಾಜಿಕ–ಆರ್ಥಿಕ ಅಭಿವೃದ್ಧಿಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರ ಇಂದು ಹೆಚ್ಚಾಗಿದೆ. ನೇಕಾರಿಕೆ, ಕುಂಬಾರಿಕೆ, ಮೀನುಗಾರಿಕೆ, ಕರಕುಶಲ ಕೈಗಾರಿಕೆ ಮುಂತಾದ ಸಹಕಾರ ಸಂಸ್ಥೆಗಳ ನೆರವು ಬಹಳ ಮುಖ್ಯವಾಗುತ್ತಿದೆ. ಒಂದು ವೇಳೆ ಸಹಕಾರಿ ವ್ಯವಸ್ಥೆ ಇಲ್ಲವಾದರೆ ಈ ಜನರ ಜೀವನ ಸ್ಥಿತಿ ಇನ್ನಷ್ಟು ಹದಗೆಡುತ್ತದೆ. ಯೂರೋಪಿನ ಕೈಗಾರಿಕಾ ಕ್ರಾಂತಿಯ ಪ್ರಾರಂಭದ ದಿನಗಳಲ್ಲಿ ಈ ರೀತಿಯ ಸಹಕಾರ ಸಂಸ್ಥೆಗಳು ಇಲ್ಲದೇ ಇದ್ದ ಪರಿಸ್ಥಿತಿ ಇದ್ದುದ್ದರಿಂದಲೇ ಆ ದಶಕಗಳು ಸಹಕಾರಿ ವ್ಯವಸ್ಥೆಯ ಬಗ್ಗೆ ಚಿಂತನೆ ಮಾಡಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬೇಕಾಗುತ್ತದೆ.

ಬ್ಯಾಂಕೋದ್ಯಮದಲ್ಲಿ ತೊಡಗಿರುವ ಪಟ್ಟಣ ಸಹಕಾರ ಬ್ಯಾಂಕುಗಳು ಗಣಕೀಕರಣ, ಕೋರ್ ಬ್ಯಾಂಕಿಂಗ್ ಮೊದಲಾದವುಗಳನ್ನು ಅಳವಡಿಸಿಕೊಂಡು ಸ್ಪರ್ಧಾತ್ಮಕವಾಗಿ ಅತ್ಯುತ್ತಮ ಸೇವೆಗಳನ್ನು ಗ್ರಾಹಕರಿಗೆ ಒದಗಿಸುತ್ತಿವೆ. ವೈ. ಹೆಚ್. ಮಾಲೇಗಾಂವ್ ಸಮಿತಿಯು ರಿಸರ್ವ್ ಬ್ಯಾಂಕಿಗೆ ನೀಡಿರುವ ವರದಿಯಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳು ಜನಸಾಮಾನ್ಯರಿಗೆ ಬ್ಯಾಂಕಿಂಗ್ ಸೌಲಭ್ಯ ನೀಡುವಲ್ಲಿ ಉಪಯುಕ್ತ ಪಾತ್ರ ವಹಿಸುತ್ತಿವೆ. ಎಲ್ಲಿ ಬ್ಯಾಂಕಿಂಗ್ ವ್ಯವಸ್ಥೆ ಇಲ್ಲವೋ ಅಲ್ಲಿ ಪಟ್ಟಣ ಸಹಕಾರಿ ಬ್ಯಾಂಕಿಂಗ್ ಆರಂಭವಾಗಬೇಕು ಎಂದು ತಿಳಿಸಿರುವುದು ಆರ್ಥಿಕ ಸೇರ್ಪಡೆಯಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಮಹತ್ತತೆಯನ್ನು ಸೂಚಿಸುತ್ತದೆ.

ಇತ್ತೀಚೆಗೆ ದೇಶದಲ್ಲಿ ಸ್ವಾಯತ್ತ ಸಹಕಾರ ಕಾಯ್ದೆಗಳಡಿಯಲ್ಲಿ ಕರ್ನಾಟಕದಲ್ಲಿ 2001ರಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ಪ್ರಾರಂಭವಾಗಿ ಉತ್ತಮವಾಗಿ ಹಾಗೂ ಮಾದರಿಯಾಗಿ ಮತ್ತು ಹಳೆಯ ಕಾಯ್ದೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಸ್ಥೆಗಳಿಗೆ ಪ್ರೋತ್ಸಾಹವನ್ನು ನೀಡುವಂತೆ ರಾಜ್ಯದ 4000 ಸೌಹಾರ್ದ ಸಹಕಾರಿಗಳ ಕಾರ್ಯ ಶ್ಲಾಘನೀಯವಾಗಿದೆ. ಆರ್ಥಿಕ ಸೇರ್ಪಡೆ ಕಾರ್ಯಕ್ರಮದಲ್ಲಿ ಉತ್ತಮ ಉದಾಹರಣೆಯಾಗಿವೆ ಎಂಬುದರಲ್ಲಿ ಎರಡು ಮಾತಿಲ್ಲ.

ಎಲ್ಲಕ್ಕಿಂತ ಮುಖ್ಯವಾಗಿ... ಸಹಕಾರ ಸಂಸ್ಥೆಗಳ ಮೂಲಕ ದೇಶದ 16 ಮಿಲಿಯನ್ ಜನರಿಗೆ ನೇರ ಉದ್ಯೋಗವನ್ನು ಒದಗಿಸಿರುವುದಲ್ಲದೆ, 15 ಮಿಲಿಯನ್ ಜನರಿಗೆ ಅಪ್ರತ್ಯಕ್ಷವಾಗಿ ಕೆಲಸಗಳನ್ನು ನೀಡಿ, ಆ ಕುಟುಂಬಗಳಿಗೆ ಆಸರೆಯಾಗಿರುವುದು ಗಮನಿಸಬೇಕಾದ ವಿಷಯ. ಎರಡೂವರೆ ದಶಕದ ಹಿಂದೆ ಉದಾರೀಕರಣ ಮತ್ತು ಜಾಗತೀಕರಣದ ನೀತಿಗಳು ನಮ್ಮ ದೇಶವನ್ನು ಪ್ರವೇಶಿಸಿದ ನಂತರ ಉದ್ಭವವಾದ ಸಮಸ್ಯೆಗಳ ಮಧ್ಯೆಯೇ ಸಹಕಾರ ಸಂಸ್ಥೆಗಳು ಸರ್ಕಾರದ ಸಹಾಯಧನ ಹಾಗೂ ರಿಯಾಯ್ತಿಗಳಿಲ್ಲದೇ ಬೆಳೆಯುತ್ತಿವೆ. ಮುಕ್ತ ಮಾರುಕಟ್ಟೆಯಲ್ಲಿ ಸಮರ್ಥವಾಗಿ ಪಾಲ್ಗೊಳ್ಳುತ್ತಿವೆ. ತಮ್ಮ ಗುರಿಗಳನ್ನು ಸಾಧಿಸಲು ಸದಸ್ಯರಲ್ಲಿ ಉಳಿತಾಯ, ಸ್ವಂತ ಬಂಡವಾಳದ ವೃದ್ಧಿ, ವೃತ್ತಿಪರತೆ, ಕಂಪ್ಯೂಟರೀಕರಣ ಮತ್ತು ತಾಂತ್ರಿಕತೆಯ ಮೂಲಕ ಹೊಸ ಮಾರ್ಗಗಳನ್ನು ಕಂಡುಕೊಂಡು ಬದಲಾವಣೆಗೆ ತೆರೆದುಕೊಳ್ಳುತ್ತಿವೆ. ಆರ್ಥಿಕ ಹಿಂಜರಿತದಂತಹ ಗಂಭೀರ ಸನ್ನಿವೇಶಗಳಲ್ಲೂ ಸಹಕಾರ ಸಂಸ್ಥೆಗಳು ತಮ್ಮ ಅಗತ್ಯತೆಯನ್ನು ಅಸ್ತಿತ್ವವನ್ನು ಉಳಿಸಿಕೊಂಡಿವೆ.

ಇಂದು ಗ್ರಾಮ–ನಗರಗಳ ಅಂತರ ಕಡಿಮೆಯಾಗುತ್ತಿದೆ. ಗ್ರಾಮೀಣ ಜನತೆ ಬ್ಯಾಂಕಿಂಗ್ ವ್ಯವಹಾರದ ಕಡೆ, ಬ್ಯಾಂಕಿಂಗ್ ಸೇವೆಗಳ ಬಗ್ಗೆ ಬಹಳ ನಿರೀಕ್ಷೆಯಿಂದ ನೋಡುತ್ತಿದ್ದಾರೆ. ಟೆಲಿ ಬ್ಯಾಂಕಿಂಗ್, ಮೊಬೈಲ್ ಬ್ಯಾಂಕಿಂಗ್, ಬ್ರ್ಯಾಂಚ್‌ಲೆಸ್ ಬ್ಯಾಂಕಿಂಗ್ ಮುಂತಾದ ಹೊಸ ರೀತಿಯ ಬ್ಯಾಂಕಿಂಗ್ ಸೇವೆಗಳನ್ನು ನೀಡುವ ಬಗ್ಗೆ ಸಹಕಾರಿ ಬ್ಯಾಂಕುಗಳು ಸನ್ನದ್ಧವಾಗಿದೆ. ದೇಶದಲ್ಲಿ ಶೇ.25 ಕ್ಕೂ ಹೆಚ್ಚು ಬಡವರಿದ್ದಾರೆ. ಇವರು ಇನ್ನೂ ಬ್ಯಾಂಕಿಗೆ ಕಾಲಿಟ್ಟಿಲ್ಲ. ಆರ್ಥಿಕ ಸೇರ್ಪಡೆಯಂತಹ ಒಂದು ಉತ್ತಮ ಕಾರ್ಯಕ್ರಮದ ಮೂಲಕ ಸಹಕಾರ ಸಂಸ್ಥೆಗಳು ಈ ಜನತೆಗೆ ಸುಲಭ ಬ್ಯಾಂಕಿಂಗ್ ಸೇವೆಯನ್ನು ಕಲ್ಪಿಸಿಕೊಡುವ ಎಲ್ಲ ಮೂಲ ಸೌಕರ್ಯಗಳನ್ನು ಹೊಂದಿವೆ.

ಭಾರತದ ರಾಷ್ಟ್ರಪತಿ ಡಾ.ಪ್ರಣಬ್ ಮುಖರ್ಜಿಯವರು ರಾಷ್ಟ್ರೀಯ ಸಹಕಾರಿ ಕಾಂಗ್ರೆಸ್‌ನಲ್ಲಿ "ನಮ್ಮ ರಾಷ್ಟ್ರದ ಆರ್ಥಿಕ–ಸಾಮಾಜಿಕ ಬೆಳವಣಿಗೆಗೆ ಸಹಕಾರವೇ ಬುನಾದಿಯಾಗಿದೆ. ಸಹಕಾರ ತತ್ವ, ಶಿಕ್ಷಣ, ಆಹಾರ ಭದ್ರತೆ, ಉದ್ಯೋಗ ಸೃಷ್ಟಿ, ಆರೋಗ್ಯ ರಕ್ಷಣೆಗೂ ಅಪೂರ್ವ ಕೊಡುಗೆ ನೀಡಬಲ್ಲವು" ಎಂದು ಹೇಳಿರುವ ಮಾತುಗಳು ಸಹಕಾರ ಕ್ಷೇತ್ರದ ಗಟ್ಟಿತನದ ಮಹತ್ವವನ್ನು ಸೂಚಿಸುತ್ತವೆ.

ಆರ್ಥಿಕ ಸೇರ್ಪಡೆ ಕಾರ್ಯಕ್ರಮವು ಸರಳ ಬ್ಯಾಂಕಿಂಗ್ ವ್ಯವಹಾರದ ಲಕ್ಷಣಗಳನ್ನು ಮೀರಿದ ಸಾಧ್ಯತೆ ಹೊಂದಿದೆ. ಗ್ರಾಮೀಣ ಭಾರತದ ಬದಲಾವಣೆಗೆ ಸಾಕ್ಷಿಯಾಗಿದೆ. ಪ್ರಧಾನ ಮಂತ್ರಿ ಸುರಕ್ಷಾ ವಿಮಾ ಯೋಜನೆ, ಪ್ರಧಾನ ಮಂತ್ರಿ ಜೀವನ ಜ್ಯೋತಿ ವಿಮಾ ಯೋಜನೆ ಮತ್ತು ಅಟಲ್ ಪಿಂಚಣಿ ಯೋಜನೆಗಳಲ್ಲಿ

25ನೇ ಪುಟಕ್ಕೆ...

# ಸೌಹಾರ್ದ ಸಹಕಾರಿಯ ಆಡಳಿತ (ಸಾಲ ವಿತರಣೆಗೆ ಸಂಬಂಧಿಸಿದಂತೆ)

**ಶರಣಪ್ಪ ರೋಜಾ,** ಸಹಕಾರ ಸಂಘಗಳ ಸಹಾಯಕ ನಿಬಂಧಕರು (ನಿವೃತ್ತ), ಕಲಬುರಗಿ.




ಸೌಹಾರ್ದ ಸಹಕಾರಿ ಸಂಸ್ಥೆಗಳು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಮೇರೆಗೆ ನೋಂದಣಿಯಾದ ಸಂಸ್ಥೆಗಳಾಗಿರುತ್ತವೆ. ಈ ಸಂಸ್ಥೆಗಳು ಸೌಹಾರ್ದ ಸಹಕಾರಿ ಅಧಿನಿಯಮ, 1997 ಮತ್ತು ನಿಯಮಗಳು, 2004 ಹಾಗೂ ನೋಂದಾಯಿತ ಬೈಲಾ ಅವಕಾಶಗಳಿಗನುಗುಣವಾಗಿ ಕಾರ್ಯನಿರ್ವಹಿಸುತ್ತವೆ.

ಸೌಹಾರ್ದ ಸಹಕಾರಿ ಸಂಸ್ಥೆಗಳ ಆಡಳಿತ ನಿರ್ವಹಣೆಯ ಜವಾಬ್ದಾರಿ ಆಯಾ ಸಂಸ್ಥೆಗಳ ಸದಸ್ಯರಿಂದ ಪ್ರಜಾಸತ್ತಾತ್ಮಕ ರೀತಿಯಲ್ಲಿ ಚುನಾಯಿತರಾದ ಆಡಳಿತ ಮಂಡಲಿಯಲ್ಲಿ ವಿಹಿತವಾಗಿರುತ್ತದೆ.

ಹೊಸದಾಗಿ ಚುನಾಯಿತರಾದ ಆಡಳಿತ ಮಂಡಲಿಯ ಸದಸ್ಯರಿಗೆ ಸೌಹಾರ್ದ ಸಹಕಾರಿಯ ಬೈಲಾಗಳಲ್ಲಿರುವ ಉದ್ದೇಶಗಳ ಬಗ್ಗೆ, ಸೌಹಾರ್ದ ಸಹಕಾರಿ ಅಧಿನಿಯಮ ಹಾಗೂ ನಿಯಮಗಳಲ್ಲಿರುವ ಅವಕಾಶಗಳ ಬಗ್ಗೆ ತರಬೇತಿ ಅವಶ್ಯಕವಾಗಿರುತ್ತದೆ. ಸದರಿ ತರಬೇತಿ ಆಯೋಜಿಸುವ ನಿರ್ವಹಣೆಯನ್ನು ರಾಜ್ಯ ಮಟ್ಟದ ಸಂಯುಕ್ತ ಸಹಕಾರಿ ಕೈಗೊಳ್ಳುತ್ತದೆ. ಅಲ್ಲದೇ, ಸೌಹಾರ್ದ ಸಹಕಾರಿ ಸಂಸ್ಥೆಗಳು ಕಾನೂನು ಮತ್ತು ನಿಯಮಗಳ ಪಾಲನೆ ಮಾಡುತ್ತಿರುವ ಬಗ್ಗೆ ಮೇಲ್ವಿಚಾರಣೆಯನ್ನು ಕೂಡಾ ಮಾಡುತ್ತವೆ. ಈ ಸಂಸ್ಥೆಗಳಿಗೆ ಸುಗಮವಾಗಿ ಆಡಳಿತ ನಡೆಸುವುದಕ್ಕೆ ಸೂಕ್ತ ಮಾರ್ಗದರ್ಶನ ಕೂಡಾ ನೀಡುತ್ತದೆ.

ಸೌಹಾರ್ದ ಸಹಕಾರಿ ಸಂಸ್ಥೆಗಳಲ್ಲಿ ತೊಡಗಿಸಿದ ಬಂಡವಾಳ ಸದಸ್ಯರ ಶೇರು ಬಂಡವಾಳ, ಸದಸ್ಯರ ಠೇವಣಿಯಿಂದ ಕೂಡಿರುತ್ತದೆ. ಸದರಿ ಬಂಡವಾಳದ ಉಪಯೋಗವನ್ನು ಆಡಳಿತ ಮಂಡಲಿಯವರು ಬಹಳ ಕಾಳಜಿಪೂರ್ವಕವಾಗಿ ಮತ್ತು ಎಚ್ಚರಿಕೆಯಿಂದ ಮಾಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ನಿರ್ಲಕ್ಷತೆ ಉಂಟಾದಲ್ಲಿ ಬಂಡವಾಳ ತೊಡಗಿಸಿದ ಸದಸ್ಯರಿಗೆ ಮೋಸ ಎಸಗಿದಂತಾಗುತ್ತದೆ.

ಬಹಳಷ್ಟು ನೋಂದಣಿಯಾದ ಸೌಹಾರ್ದ ಸಹಕಾರಿ ಸಂಸ್ಥೆಗಳು ಪತ್ತಿನ ಸಂಸ್ಥೆಗಳಾಗಿದ್ದು, ಪಟ್ಟಣ ಪ್ರದೇಶಕ್ಕೆ ಸೀಮಿತವಾಗಿರುತ್ತವೆ. ಸದಸ್ಯರಿಗೆ ಸಾಲ ಮಂಜೂರುಗೊಳಿಸುವ ಅಧಿಕಾರ ಆಯಾ ಸಂಸ್ಥೆಯ ಆಡಳಿತ ಮಂಡಲಿ ನಿರ್ವಹಿಸುತ್ತದೆ. ಸಾಲ ಮಂಜೂರಿ ಕುರಿತಂತೆ ಆಡಳಿತ ಮಂಡಲಿ ಗಮನಿಸಲೇಬೇಕಾದ ಮುಖ್ಯವಾದ ಅಂಶಗಳ ಬಗ್ಗೆ ಇಲ್ಲಿ ಉಲ್ಲೇಖಿಸುವುದು ಸೂಕ್ತವೆಂದು ಭಾವಿಸಿದೆ.

ಸಾಲದಲ್ಲಿ ಎರಡು ಮುಖ್ಯ ಪ್ರಕಾರಗಳು. ಒಂದು ಭದ್ರತೆಯಿಂದ ಕೂಡಿದ ಸಾಲ, ಇನ್ನೊಂದು ಭದ್ರತೆ ರಹಿತ ಸಾಲ. ಭದ್ರತೆಯಿಂದ ಕೂಡಿದ ಸಾಲ ಮಂಜೂರಿಗೊಳಿಸಲು ಸದಸ್ಯರಿಂದ ಸಾಲಕ್ಕಾಗಿ ನೀಡಿದ ಭದ್ರತೆ ಅಂದರೆ ಸ್ಥಿರ ಆಸ್ತಿಯ ಕ್ಲಿಯರ್ ಟೈಟಲ್ ಇದೆಯೋ ಇಲ್ಲವೋ ಎಂಬ ಬಗ್ಗೆ ಕಾನೂನು ಸಲಹೆಗಾರರಿಂದ ಸಲಹೆ ಪಡೆದು, ಅದನ್ನು ಆಧರಿಸಿ ಸಾಲ ಮಂಜೂರಿಗೊಳಿಸುವುದು ಅವಶ್ಯಕ ಮತ್ತು ಸುರಕ್ಷಿತ. ಇನ್ನೊಂದು ಭದ್ರತೆ ರಹಿತ ಸಾಲ, ಈ ಸಾಲ ಮಂಜೂರಿ ಮಾಡುವಲ್ಲಿ ಮತ್ತು ವಿತರಿಸುವಲ್ಲಿ ರಿಸ್ಕ್ ಹೆಚ್ಚಾಗಿರುತ್ತದೆ. ಆದ್ದರಿಂದ ಸಾಲ ಮಂಜೂರಿಗಿಂತ ಪೂರ್ವದಲ್ಲಿ ಸದಸ್ಯನು ಯಾವ ಉದ್ದೇಶಕ್ಕಾಗಿ ಸಾಲ ಪಡೆಯುತ್ತಿದ್ದಾನೆ ಮತ್ತು ಅದರ ಅವಶ್ಯಕತೆ ಎಷ್ಟರ ಮಟ್ಟಿಗೆ ಇದೆ, ಅವನ ವ್ಯಾಪಾರ ವಹಿವಾಟು ತೃಪ್ತಿಕರವಾಗಿದೆಯೇ, ಅವನ ವಿಶ್ವಾಸಾರ್ಹ ಮತ್ತು ಸಾಲ ಮರುಪಾವತಿಸುವ ಸಾಮರ್ಥ್ಯ ಮತ್ತು ಸೌಹಾರ್ದ ಸಹಕಾರಿ ಖಾತೆಯಲ್ಲಿ ಯಾವ ರೀತಿ Transaction ಮಾಡುತ್ತಿರುವನು ಎಂಬುವ ಬಗ್ಗೆ ಕುಲಂಕೂಷವಾಗಿ ಪರಿಶೀಲಿಸಿ ಯಾವುದೇ ಪಕ್ಷಪಾತಕ್ಕೆ, ಒತ್ತಡಕ್ಕೆ ಒಳಗಾಗದೇ ಪಾರದರ್ಶಕವಾಗಿ ಸಾಲದ ಅವಶ್ಯಕತೆ ಇರುವ ಸದಸ್ಯನಿಗೆ ಮಾತ್ರ ಸಾಲ ಮಂಜೂರಿಗೊಳಿಸಬೇಕು ಮತ್ತು ಸಾಲ ಯಾವ ಉದ್ಧೇಶಕ್ಕಾಗಿ ಮಂಜೂರಿಗೊಳಿಸಿದೆ, ಆ ಉದ್ಧೇಶಕ್ಕೆ ಉಪಯೋಗಿಸುತ್ತಿದ್ದಾನೆ ಎನ್ನುವುದನ್ನು ಕೂಡಾ ಗಮನಿಸಬೇಕು.

ಸಾಲ ವಿತರಿಸುವಾಗ ಸಾಲಕ್ಕೆ ಸಂಬಂಧಿಸಿದ ಎಲ್ಲಾ ಕಾಗದ ಪತ್ರಗಳನ್ನು ಪರಿಪೂರ್ಣವಾಗಿ ಪಡೆಯುವುದು ಅವಶ್ಯಕ. ಸಾಲಕ್ಕೆ ಜಾಮೀನು ನೀಡಿದ ಸದಸ್ಯರ ವಿಳಾಸ ಪರಿಪೂರ್ಣವಾಗಿ ಪಡೆಯದೇ ಇರುವಂತಹ ಸಂದರ್ಭಗಳು ಎಷ್ಟೋ ಸಲ ಗಮನಕ್ಕೆ ಬಂದಿರುತ್ತವೆ. ಇಂತಹ ಪ್ರಕರಣಗಳನ್ನು ಸಾಲ ವಸೂಲಿಗೋಸ್ಕರ ದಾವಾ ಪ್ರಕ್ರಿಯೆಗೆ ಒಳಪಡಿಸಿದಾಗ ನ್ಯಾಯಾಲಯಕ್ಕೆ ಜಾಮೀನುದಾರರಿಗೆ ಸರಿಯಾದ ವಿಳಾಸ ಇಲ್ಲದ ಕಾರಣಕ್ಕಾಗಿ ನೋಟೀಸು ನೀಡುವುದು ಕಷ್ಟ ಸಾಧ್ಯವಾಗುತ್ತದೆ.

ಭದ್ರತೆ ಪಡೆದು ಸಾಲ ನೀಡಿದ ಪ್ರಕರಣಗಳಲ್ಲಿ ಅಂದರೆ ಸ್ಥಿರ ಆಸ್ತಿ ಅಡಮಾನವಾಗಿ ಇಟ್ಟುಕೊಂಡು ನೀಡಿದ ಸಾಲಗಳಲ್ಲಿ ಕೆಲವೊಂದು ಸಂದರ್ಭಗಳಲ್ಲಿ ಋಣಭಾರ ವಿವರವನ್ನು ಸಬ್‌ರಿಜಿಸ್ಟ್ರಾರ್‌ರವರ ಕಛೇರಿಯಿಂದ ಪಡೆಯದೇ ಸಾಲ ವಿತರಿಸಿರುವುದು ಅನುಭವಕ್ಕೆ ಬಂದಿರುತ್ತವೆ ಮತ್ತು ಇತರ ಹಣಕಾಸು ಸಂಸ್ಥೆ, ಬ್ಯಾಂಕಿನಿಂದ ಮೊದಲೇ ಸಾಲ ಪಡೆದ ಅಂಶ ತದನಂತರ ಬೆಳಕಿಗೆ ಬರುತ್ತವೆ. ಇಂತಹ ಪ್ರಕರಣಗಳ ಸಾಲ ವಸೂಲಿ ಕಷ್ಟ ಸಾಧ್ಯವಾಗಿ ಸೌಹಾರ್ದ ಸಹಕಾರಿಗೆ ನಷ್ಟ ಉಂಟಾಗುವ ಸ್ಥಿತಿ ಒದಗಿ ಬರುತ್ತದೆ. ಆದ್ದರಿಂದ, ಆಡಳಿತ ಮಂಡಲಿಯವರು ಸದಸ್ಯರಿಗೆ ಸಾಲ ಮಂಜೂರಿ ನೀಡುವ ಸಂದರ್ಭದಲ್ಲಿ ಬಹಳ ಎಚ್ಚರಿಕೆಯಿಂದ ಮತ್ತು ಕೆಲವೊಂದು ಸಲ ಕಠೋರವಾಗಿ ವರ್ತಿಸಬೇಕಾಗುತ್ತದೆ. ಕಠೋರ ವರ್ತನೆ ಎಂದಾಕ್ಷಣ ನನಗೆ ಒಂದು ಸಂದರ್ಭ ನೆನಪಿಗೆ ಬರುತ್ತದೆ.

ನಾನು ಈ ಹಿಂದೆ ಸೇವೆಯಲ್ಲಿದ್ದಾಗ ಒಂದು ಸೌಹಾರ್ದ ಸಹಕಾರಿಗೆ ಭೇಟಿ ನೀಡಿದಾಗ ಆಡಳಿತ ಮಂಡಲಿಯವರು ಸಾಲ ಮಂಜೂರಿ ಸಂಬಂಧದಲ್ಲಿ ಒಂದು ನಿಯಮವನ್ನು ಅಳವಡಿಸಿಕೊಂಡಿದ್ದರು. ಅದೇನೆಂದರೆ ಸಾಲ ಪಡೆದ ಒಬ್ಬ ಸದಸ್ಯ ನಿಗದಿತ ಅವಧಿಯಲ್ಲಿ ಸಾಲ ಮರುಪಾವತಿಸಿದೇ ನಿಗದಿತ ಅವಧಿ ಗತಿಸಿದ ನಂತರ ತಡವಾಗಿ ಸಾಲ ಮರುಪಾವತಿಸಿದಲ್ಲಿ ಅಂತಹ ಸದಸ್ಯನಿಗೆ ಪುನಃ ಸಾಲ ಮಂಜೂರಿಗೊಳಿಸಕೂಡದೆಂಬ ನಿಯಮ ರೂಪಿಸಿಕೊಂಡಿದ್ದರು ಮತ್ತು ಈ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾ ಬಂದಿದ್ದರು. ಈ ನಿಯಮದ

ಕಾರಣದಿಂದಾಗಿ ಸಾಲ ವಸೂಲಿ ಶೇ.90 ರಿಂದ ಶೇ.100ರವರೆಗೆ ಆಗುತ್ತಿರುವುದು ಗಮನಕ್ಕೆ ಬಂದಿತು.

ಕೆಲವೊಂದು ಸಂದರ್ಭದಲ್ಲಿ ಸಾಲ ಮಂಜೂರಿ ಕುರಿತಂತೆ ಆಡಳಿತ ಮಂಡಲಿಗೆ ಗೊಂದಲ ಉಂಟಾಗುತ್ತದೆ ಮತ್ತು ಯಾವ ರೀತಿ ನಿರ್ಣಯ ಅಂಗೀಕರಿಸಬೇಕೆಂಬ ಬಗ್ಗೆ ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ.

ಉದಾ: ಒಬ್ಬ ಸದಸ್ಯ ರೂ.10.00 ಲಕ್ಷ ಸಾಲಕ್ಕಾಗಿ ಅರ್ಜಿ ಸಲ್ಲಿಸಿರುತ್ತಾನೆ ಮತ್ತು ಇನ್ನೂ 10 ಜನ ಸದಸ್ಯರು ತಲಾ ರೂ.1.00 ಲಕ್ಷ ಸಾಲಕ್ಕಾಗಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಅರ್ಜಿಗಳು ಆಡಳಿತ ಮಂಡಲಿ ಸಭೆ ಮುಂದೆ ಮಂಜೂರಿಗೋಸ್ಕರ ಬಂದಾಗ ಸಂಸ್ಥೆಯಲ್ಲಿ ರೂ.10.00 ಲಕ್ಷ ಮಾತ್ರ ಸಾಲ ಮಂಜೂರಿಗೋಸ್ಕರ ಫಂಡ್ ಲಭ್ಯವಿರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಒಬ್ಬ ಸದಸ್ಯನಿಗೆ ರೂ.10.00 ಲಕ್ಷ ಮಂಜೂರಿಗೊಳಿಸಬೇಕೋ? ಅಥವಾ ಇನ್ನುಳಿದ 10 ಜನ ಸದಸ್ಯರಿಗೆ ತಲಾ ರೂ.1.00 ಲಕ್ಷ ಸಾಲ ಮಂಜೂರಿಗೊಳಿಸಬೇಕೋ? ಎನ್ನುವ ಗೊಂದಲ ಸೃಷ್ಟಿಯಾಗುತ್ತದೆ. ಇಂತಹ ಸನ್ನಿವೇಶದಲ್ಲಿ ಒಬ್ಬ ಸದಸ್ಯನ ರೂ. 10.00 ಲಕ್ಷದ ಸಾಲದ ಬೇಡಿಕೆಯನ್ನು ಪೂರೈಸುವುದಕ್ಕಿಂತ 10 ಜನ ಸದಸ್ಯರುಗಳ ತಲಾ ರೂ.1.00 ಲಕ್ಷ ಸಾಲದ ಬೇಡಿಕೆ ಈಡೇರಿಸುವುದು ಸೂಕ್ತ ಮತ್ತು ಸಮಂಜಸವೆಂದು ಭಾವಿಸಬಹುದು.

ಆಡಳಿತ ಮಂಡಲಿಯವರು ಎಷ್ಟೇ ತರಬೇತಿ ಪಡೆದಿದ್ದರೂ ಕೂಡಾ ಪ್ರಾಯೋಗಿಕವಾಗಿ ಮೇಲೆ ವಿವರಿಸಿದಂತಹ ಮತ್ತು ಅದಕ್ಕಿಂತ ಭಿನ್ನವಾದ ಸಮಸ್ಯೆಗಳು ಆಡಳಿತ ಮಂಡಲಿಯ ಮುಂದೆ ಬರಬಹುದು. ಇಂತಹ ಸಂದರ್ಭದಲ್ಲಿ ಆಡಳಿತ ಮಂಡಲಿಯವರು ಪಡೆದ ತರಬೇತಿಗಿಂತ ಆಡಳಿತ ಮಂಡಲಿಯ ಸದಸ್ಯರಾಗಿ ಪಡೆದ ಅನುಭವ ಸಮಸ್ಯೆಗಳಿಗೆ ಪರಿಹಾರ ದೊರಕಿಸಿ ಕೊಡಬಹುದಾಗಿದೆ.

ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ಕ್ಲಿಷ್ಟಕರವಾದ ಸಮಸ್ಯೆ ಪರಿಹಾರಕ್ಕಾಗಿ ಆಡಳಿತ ಮಂಡಲಿಗೆ ಸಾಧ್ಯವಾಗದೇ ಇರುವ ಸನ್ನಿವೇಶವನ್ನು ಗಮನಿಸಿಯೇ ಸರಕಾರ ಇತ್ತೀಚಿಗೆ 2013ರಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಗೆ ತಿದ್ದುಪಡಿ ತಂದು ಆಡಳಿತ ಮಂಡಲಿಯವರಿಗೆ ಸಹಕಾರಿ ಬ್ಯಾಂಕಿಂಗ್, ವ್ಯವಸ್ಥಾಪನೆ ಮತ್ತು ಹಣಕಾಸು ನಿರ್ವಹಣೆಯಲ್ಲಿ ಅನುಭವ ಹೊಂದಿದ ಅಥವಾ ಸಹಕಾರಿಯ ಕಾರ್ಯಚಟುವಟಿಕೆಗಳಿಗೆ, ಉದ್ದೇಶಗಳಿಗೆ ಸಂಬಂಧಿಸಿದ ಇತರ ಯಾವುದೇ ಕ್ಷೇತ್ರಗಳಲ್ಲಿ ಪರಿಣಿತ ಹೊಂದಿದ ಇಬ್ಬರೂ ವ್ಯಕ್ತಿಗಳನ್ನು ಆಡಳಿತ ಮಂಡಲಿಯ ಸದಸ್ಯರನ್ನಾಗಿ ಸಹಮತದಿಂದ (ಕೋ-ಆಪ್ಟ್) ಸೇರಿಸಿಕೊಳ್ಳುವ ಅಧಿಕಾರವನ್ನು ನೀಡಿದೆ. ಈ ಕಾನೂನಿನ ಅವಕಾಶದ ಉಪಯೋಗ ಸೌಹಾರ್ದ ಸಹಕಾರಿ ಸಂಸ್ಥೆಗಳು ಪಡೆದುಕೊಂಡು ಆಡಳಿತ ಸುಗಮವಾಗಿ, ಪಾರದರ್ಶಕವಾಗಿ ನಡೆಸಿಕೊಂಡು ಸದಸ್ಯರ ಬಂಡವಾಳದ ಹಿತ ಕಾಪಾಡಿಕೊಂಡು ಸದಸ್ಯರಿಗೆ ಸಾಲ ವಿತರಣೆ ಮೂಲಕ ಸೇವೆಯನ್ನು ನಿರಂತರವಾಗಿ ಒದಗಿಸುತ್ತಾ ಸೌಹಾರ್ದ ಸಹಕಾರಿ ಸಂಸ್ಥೆಗಳನ್ನು ಪ್ರಗತಿಪಥದತ್ತ ನಡೆಸುತ್ತ ಸಹಕಾರ ಚಳುವಳಿಯನ್ನು ಬಲಿಷ್ಠ ಮತ್ತು ಶಕ್ತಿಯುತವಾಗಿ ಮುನ್ನಡಿಸಿಕೊಂಡು ಹೋಗುತ್ತಾರೆಂದು ಆಶಿಸೋಣ.

## ಆರ್ಥಿಕ ಸೇರ್ಪಡೆ ಮುಖ್ಯ ವಾಹಿನಿಯಲ್ಲಿ ಗುರುತಿಸಿಕೊಳ್ಳುವಲ್ಲಿ ಸಹಕಾರ ಸಂಸ್ಥೆಗಳ ಪಾತ್ರ

...22ನೇ ಪುಟದಿಂದ

ಈಗಾಗಲೇ 10 ಕೋಟಿಗೂ ಹೆಚ್ಚು ಜನ ತೊಡಗಿಸಿಕೊಂಡಿದ್ದಾರೆ. ಜನ್‌ಧನ್ ಖಾತೆಯನ್ನು ಆಧಾರವಾಗಿಟ್ಟುಕೊಂಡು ಈ ಮೂರೂ ಯೋಜನೆಗಳು ನಾಗರೀಕರಿಗೆ ಸೌಲಭ್ಯಗಳನ್ನು ತಲುಪಿಸುವಲ್ಲಿ ಹೊಸತನವನ್ನು ಉಂಟು ಮಾಡಿವೆ. ಬಡವರಿಗೆ ಮತ್ತು ಅಸಂಘಟಿತ ವಲಯದಲ್ಲಿ ಕೆಲಸ ಮಾಡುವವರಿಗೆ ಸಾಮಾಜಿಕ ಭದ್ರತೆಯ ಜಾಲವನ್ನು ಸೃಷ್ಟಿಸಿವೆ.

ಈ ನಿಟ್ಟಿನಲ್ಲಿ ತಾಂತ್ರಿಕತೆ ಮುಂಚೂಣಿಯಲ್ಲಿದೆ. ಬ್ಯಾಂಕಿಂಗ್ ವಲಯದ ವಿಕಾಸದ ಜೊತೆಗೆ ಸರ್ಕಾರಿ ಸೇವೆಗಳ ವಿತರಣೆಯನ್ನು ಉತ್ತಮ ಪಡಿಸಲು ಮಾಹಿತಿ ಮತ್ತು ದೂರಸಂಪರ್ಕ ತಾಂತ್ರಿಕತೆಯಲ್ಲಿ ರಾಜ್ಯ ಸರ್ಕಾರಗಳೂ ಕೂಡಾ ತೊಡಗಿಸಿಕೊಂಡಿವೆ.

ಇದು ಆಧಾರ್ ಜೊತೆಗೂಡಿ ಒಂದು ಡಿಜಿಟಲ್ ಇಕೋ ಸಿಸ್ಟಮ್ ಕಟ್ಟಲು ಅವಕಾಶವನ್ನು ಕೊಡುತ್ತದೆ. ಆರ್ಥಿಕ ಒಳಗೊಳ್ಳುವಿಕೆ ಅರ್ಥವ್ಯವಸ್ಥೆಯಲ್ಲಿ ಮಹತ್ವಪೂರ್ಣ ಬದಲಾವಣೆಯನ್ನು ಮಾಡಲಿದೆ. ವಿಶೇಷವಾಗಿ ಗ್ರಾಮೀಣ ಅರ್ಥವ್ಯವಸ್ಥೆ, ಹಣಕಾಸಿನ ಸಾಧನಗಳ ಲಭ್ಯತೆಯಿಂದಾಗಿ ಒಂದು ಕ್ರಾಂತಿಯನ್ನೇ ಕಾಣಬಹುದೆಂದು ನಿರೀಕ್ಷಿಸಲಾಗಿದೆ.

ಇದಕ್ಕೆ ಕಾರಣ ಪ್ರಧಾನ ಮಂತ್ರಿ ಜನ್‌ಧನ್ ಯೋಜನೆಯು ಚಿನ್ನವನ್ನು ಹಣದ ರೂಪಕ್ಕೆ ಬದಲಾಯಿಸುವ ಸ್ಕೀಮ್ ಮತ್ತು ನೇರ ಪ್ರಯೋಜನ ವರ್ಗಾವಣೆ (ಡಿಬಿಟಿ), ಬ್ಯಾಂಕಿಂಗ್ ವ್ಯವಸ್ಥೆಯ ಮೂಲಕ ಚಾಲನೆಗೊಳ್ಳುತ್ತಿದ್ದು, ಕುಟುಂಬಗಳಿಗೆ ನಿರಂತರ ಹಣಕಾಸಿನ ಹರಿವನ್ನು ಖಾತರಿಪಡಿಸುತ್ತದೆ ಮತ್ತು ಅದರಿಂದಾಗಿ ಹೂಡಿಕೆಗೆ ಅವಕಾಶವೊದಗುತ್ತದೆ.

ಬ್ಯಾಂಕುಗಳು, ಅತಿಸಣ್ಣ ಹಣಕಾಸು ಸಂಸ್ಥೆಗಳು, ಸ್ವಸಹಾಯ ಗುಂಪುಗಳು, ಅಂಚೆ ಕಚೇರಿಗಳು ಮತ್ತು ಮುದ್ರಾ ಬ್ಯಾಂಕ್ ಮಾರುಕಟ್ಟೆಯಲ್ಲಿ ಮುಖ್ಯ ಭೂಮಿಕೆ ನಿರ್ವಹಿಸಲಿವೆ. ಬ್ಯಾಂಕಿಂಗ್ ವ್ಯವಸ್ಥೆ, ಸಂಪನ್ಮೂಲಗಳ ಹರಿವಿಗೆ ಪ್ರಮುಖ ಸಾಧನವಾಗಿ, ಇನ್ನೂ ಹೆಚ್ಚಿನ ಹಣಕಾಸು ಸಾಧನಗಳನ್ನು ಕೊಡಮಾಡಿ ಈ ಫಂಡ್‌ಗಳನ್ನು ತಮ್ಮ ವ್ಯವಸ್ಥೆಯಲ್ಲಿಯೇ ಉಳಿಸಿಕೊಳ್ಳಲಿದೆ ಎಂದು ನಿರೀಕ್ಷಿಸಲಾಗಿದೆ.


ಅದೇ ರೀತಿ ಅಂಚೆ ಕಚೇರಿಗಳು ವಿಶೇಷವಾಗಿ 1,40,000 ಶಾಖೆಗಳ ಮೂಲಕ ಹೊಸ ಸ್ಕೀಮ್‌ಗಳನ್ನು ಆರಂಭಿಸಿ ಈ ಸಂಪನ್ಮೂಲಗಳನ್ನು ಬಳಸಿಕೊಳ್ಳಲಿವೆ ಮಾರುಕಟ್ಟೆಯಲ್ಲಿ ನಿರೀಕ್ಷಿಸಬಹುದಾದ ಬಗೆ ಬಗೆಯ ಹಣಕಾಸು ಸಾಧನಗಳೆಂದರೆ... ವಿವಿಧ ರೀತಿಯ ಬ್ಯಾಂಕ್ ಡಿಪಾಸಿಟ್‌ಗಳು, ಅಂಚೆ ಕಚೇರಿಗಳ ಮೂಲಕ ಸಣ್ಣ ಉಳಿತಾಯ ಸಾಧನಗಳು, ಚಿನ್ನದ ಬಾಂಡ್‌ಗಳು ಮತ್ತು ಮೇಲ್ಕಂಡ ಸಂಸ್ಥೆಗಳು ಹೊರತರಲಿರುವ ಹೊಸ ಸಾಧನಗಳಾಗಿವೆ. ಈ ಬೆಳವಣಿಗೆಗಳು ಅರ್ಥವ್ಯವಸ್ಥೆಯಲ್ಲಿ ಸೃಜನಾತ್ಮಕ ಸಾಮರ್ಥ್ಯವನ್ನು ಉಂಟುಮಾಡಲಿವೆ ಮತ್ತು ಪರಿಕಲ್ಪನೆಗಳನ್ನು ಮಾರುಕಟ್ಟೆಗೆ ತಯಾರಾದ ಉತ್ಪನ್ನವಾಗಿ ಪರಿವರ್ತನೆಗೊಳಿಸಲು ಸುಲಭ ಹಣಕಾಸು ಒದಗಿಸಲಿವೆ. ಆರ್ಥಿಕ ಸೇರ್ಪಡೆಯು ಹೆಚ್ಚು ಉದ್ಯೋಗ ಒದಗಿಸಿ ಅರ್ಥವ್ಯವಸ್ಥೆಯ ಬೆಳವಣಿಗೆಗೆ ಪೂರಕವಾಗಿ ಮೇಕ್ ಇನ್ ಇಂಡಿಯಾದ ಉದ್ದೇಶವನ್ನು ಬಲಗೊಳಿಸಲಿದೆ.

ಎಲ್ಲರನ್ನೂ, ಎಲ್ಲವನ್ನೂ ಒಳಗೊಂಡು... ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸಲು ಸಹಕಾರ ಸಂಸ್ಥೆಗಳು ಎಲ್ಲ ರೀತಿಯಲ್ಲೂ ಸಮರ್ಥವಾಗಿವೆ.

**"ಇಷ್ಟು ದಿನ ಕೈಗಾರಿಕಾ ಕ್ರಾಂತಿ, ಹಸಿರು ಕ್ರಾಂತಿ, ವಿಶ್ವ ಮಾರುಕಟ್ಟೆ ಇತ್ಯಾದಿ ಹೆಸರುಗಳನ್ನು ಹೇಳುತ್ತಿದ್ದವರೇ... ಒಳಗೊಳ್ಳುವ ಬೆಳವಣಿಗೆ (Inclusive Growth) ಬಗ್ಗೆ ಮಾತನಾಡುತ್ತಿದ್ದಾರೆ. ಕಾರ್ಲ್‌ಮಾರ್ಕ್ಸ್‌ನ ದಾಸ್ ಕ್ಯಾಪಿಟಲ್ ಬಗ್ಗೆ ಸಿನಿಮಾ ತೆಗೆಯಲು ಹೊರಟಿದ್ದಾರೆ! ಗಾಂಧಿ ಸ್ಮರಣೆಯಂತೂ ಇತ್ತೀಚಿನ ದಿನಗಳಲ್ಲಿ, ಪಶ್ಚಿಮದ ದೇಶಗಳಲ್ಲಿ ಭಜನೆಯ ರೂಪ ತಾಳುತ್ತಿದೆ".**

– ಪ್ರಸನ್ನರವರ "ಯಂತ್ರಗಳನ್ನು ಕಳಚೋಣ ಬನ್ನಿ" ಪುಸ್ತಕದಿಂದ

# RBI NEWS-APRIL 2017



K. Vittal Shetty, Banking Consultant, kohimavittal@Hotmail.com, Mobile:9845699904

**Apr 06, 2017 :** First Bi-monthly Monetary Policy Statement, 2017-18 Resolution of the Monetary Policy Committee (MPC) Reserve Bank of India. Based on an assessment of the current and evolving macroeconomic situation at its meeting today, the Monetary Policy Committee (MPC) decided to:

• keep the policy repo rate under the liquidity adjustment facility (LAF) unchanged at 6.25 per cent.

Consequent upon the narrowing of the LAF corridor as elaborated in the accompanying Statement on Developmental and Regulatory Policies, the reverse repo rate under the LAF is at 6.0 per cent, and the marginal standing facility (MSF) rate and the Bank Rate are at 6.50 per cent.

The decision of the MPC is consistent with a neutral stance of monetary policy in consonance with the objective of achieving the medium-term target for consumer price index (CPI) inflation of 4 per cent within a band of +/- 2 per cent, while supporting growth.

**The next meeting of the MPC is scheduled on June 6 and 7, 2017.**

| Policy Rates with effect from 06 APRIL 2016. | % |
|---|---|
| POLICY REPO RATE | 6.25% |
| REVERSE REPO RATE | 6.00% |
| MARGINAL STANDING FACILITY RATE | 6.50% |
| BANK RATE | 6.50% |
| **Reserve Ratios** | **%** |
| Cash Reserve Ratio | 4.00% |
| Statutory Reserve Ratio | 20.50% |

**Date : Apr 26, 2017**

**Scheduled Bank's Statement of Position in India as on Friday, April 14, 2017**

(Amount in Billions of ₹)

| | | SCHEDULED COMMERCIAL BANKS (Including RRBs) | | | ALL SCHEDULED BANKS | | |
|---|---|---|---|---|---|---|---|
| | | 15-APR-2016 | 31-MAR-2017 * | 14-APR-2017 * | 15-APR-2016 | 31-MAR-2017 * | 14-APR-2017 * |
| I | **a) Deposits** (other than from banks) | **94915.72** | 108105.19 | 105917.19 | 97498.04 | 111169.56 | **108892.9** |
| | i) Demand | **9057.61** | 12953.28 | 10968.08 | 9276.55 | 13252.34 | **11242.7** |
| | ii) Time | **85858.11** | 95151.88 | 94949.11 | 88221.49 | 97917.18 | **97650.21** |
| II | **CASH** | **552.54** | 617.74 | 510.83 | 564.3 | 635.5 | **527.44** |
| | **WITH R.B.I. (B)** | **3895.2** | 5087.73 | 4304.1 | 4010.37 | 5238.75 | **4426.33** |
| III | **INVESTMENTS** | **27045.79** | 30433.29 | 31734.8 | 27801.79 | 31353.67 | **32677.88** |
| IV | **BANK CREDIT** | **72318.67** | 78815.31 | 76315.06 | 74609.42 | 81284.84 | **78738.76** |

**Apr 06, 2017 :** Statement on Developmental and Regulatory Policies, Reserve Bank of India

This Statement reviews the progress of various developmental and regulatory policy measures announced by the Reserve Bank in recent policy statements and sets out new measures for further refining the liquidity management framework; strengthening the banking regulation and supervision; broadening and deepening financial markets; and extending the reach of financial services by enhancing the efficacy of the payment and settlement systems.

### I. Liquidity Management Framework for Monetary Policy Operations

2. The liquidity management framework was modified in April 2016, providing assurance on both durable and frictional liquidity, while aiming to progressively lower the average ex-ante liquidity deficit in the system to a position closer to neutrality. Consistent with this assurance, the RBI proactively injected durable liquidity of ₹ 2.1 trillion during the year up to November 8, 2016 in the form of open market purchase operations, net forex market operations, and buyback of government securities. This helped in bringing down the system level ex-ante liquidity position from a deficit of about ₹ 813 billion in Q1 on a daily average basis to a surplus of ₹ 292 billion in Q2 and ₹ 64 billion in Q3 (up to November 8, 2016).

3. Following demonetisation, a persistent large structural liquidity surplus has impacted the banking system. The Reserve Bank has absorbed the surplus liquidity using a mix of both conventional and unconventional instruments to ensure that the money market rates remain aligned to the repo rate. With the gradual decline in the magnitude of the surplus from its peak in early January and due to expiration of securities authorised under the MSS, the Reserve Bank has progressively moved to variable rate reverse repo operations for absorbing surplus liquidity, some of which may persist through 2017-18.

**4. Management of Surplus Liquidity -** The Reserve Bank is committed to reverting system liquidity to a position closer to neutrality, consistent with the stance of monetary policy. Towards this goal, the Reserve Bank will employ a mix of instruments to ensure that all normal requirements of liquidity consistent with the growing economy will be met:

- The expansion in currency in circulation will progressively drain away some of the surpluses associated with demonetisation, while remaining effects will be managed with variable reverse repo auctions with a preference for longer term tenors.
- Operations under the Market Stabilisation Scheme (MSS) using Treasury Bills and dated securities will be conducted to modulate liquidity from other sources.
- If required, durable liquidity will be managed through open market operations (OMO sales and purchases) with a view to moving system level liquidity to neutrality.
- Enduring surpluses due to government operations will be managed by issuances of cash management bills (CMBs) of

appropriate tenors in accordance with the memorandum of understanding with the Government of India.

- Fine tuning operations in the form of variable rate repo/ reverse repo auctions of various maturities will continue to be deployed to modulate day-to-day liquidity.

5. The Reserve Bank has proposed since November 2015 the introduction of a Standing Deposit Facility (SDF) by suitably amending the RBI Act, which is under examination of the Government. Introduction of this facility would give greater flexibility to the Reserve Bank for managing its liquidity operations.

**6. Narrowing of the Monetary Policy Rate Corridor –** In consonance with the recommendation of the Expert Group to Revise and Strengthen the Monetary Policy Framework (Chairman: Dr.Urjit R. Patel), the policy rate corridor was narrowed from +/-100 bps to +/- 50 bps in April 2016, with a view to ensuring finer alignment of the weighted average call rate (WACR), the operating target of monetary policy, with the repo rate. In either extremely tight liquidity conditions or in situations of persistent excess liquidity, when most market participants are on one side of the market for overnight liquidity, a narrower corridor can contribute to finer alignment of the operating target with the policy rate. Accordingly, it has been decided to narrow the policy rate corridor around the policy repo rate to +/-25bps from +/- 50bps with immediate effect. As a result, the reverse repo rate under the liquidity adjustment facility (LAF) would be 25 bps lower than the policy repo rate and the marginal standing facility (MSF) rate would be 25 bps higher than the policy repo rate.

**7. Substitution of Collateral under the LAF Term Repos -** Currently, there is no provision for LAF participants to substitute the security offered as collateral to the Reserve Bank under term repos. It has been decided to allow substitution of collateral by market participants in the term repos under the LAF which will provide operational flexibility to them by enhancing liquidity of collaterals. This functionality will be available from April 17, 2017.

## II. Banking Regulation and Supervision

**8. Revised Prompt Corrective Action (PCA) Framework for Banks -** Based on the recommendations of the Sub-Committee of Financial Stability and Development Council (FSDC-SC), the existing PCA framework for banks has been reviewed, updated and finalised with the approval of the Board for Financial Supervision (BFS). Indicators, which will trigger the updated PCA, include capital [capital-to-risk weighted assets ratio (CRAR) and common equity tier 1 (CET1) ratio], net non-performing assets (NPA) ratio and return on assets. Leverage would be monitored additionally. The banks under PCA would be required to conform to such mandatory and discretionary actions as may be decided by the Reserve Bank. The revised PCA framework for banks will be issued by mid-April 2017.

**9. Asset Reconstruction Companies (ARCs) :** Raising the Minimum Level of Net Owned Funds (NOF) - While the earlier provision in the Securitisation and Reconstruction of Financial Assets and Enforcement of Security Interest (SARFAESI) Act, 2002 of a minimum of '₹ 2 crore of owned funds' was amended in 2016 as '₹ 2 crore of net owned funds (NOF)', the cap on owned fund of 15 per cent of financial assets was removed. In view of the enhanced role of ARCs and greater cash based transactions, it is proposed to stipulate a minimum NOF of ₹100 crore for ARCs. The necessary instructions will be issued by end-April, 2017.

**10. Partial Credit Enhancement (PCE):** Capital Requirement - It is proposed that if the pre-enhancement rating of the PCE enhanced bond subsequently improves over the rating at the time of issuance, the capital calculated will be as per the prevailing difference in pre- and post-enhancement rating and it will not be subject to either the extant floor (the capital requirement on the PCE at the time of issuance of the PCE enhanced bonds) or the restriction of maintaining the number of notches of improvement in rating at the time of issuance. The necessary instructions will be issued by end-April, 2017. It is also proposed that in order to be eligible for PCE by banks, the bonds will have to be rated by two credit rating agencies accredited by the Reserve Bank.

**11. Banking Outlets: Final Guidelines -** Final guidelines are proposed to be issued on banking outlets, clarifying on what is a 'banking outlet' and harmonising the treatment of different forms of bank presence for the purpose of opening outlets in underserved areas. These will supersede the branch licensing guidelines in force. Detailed guidelines will be issued by end-April, 2017.

**12. Real Estate Investment Trust (REITS) and Infrastructure Investment Trust (InvITs) :** Banks' Participation – The Securities and Exchange Board of India (SEBI) has put in place regulations for REITS and InvITs and requested the Reserve Bank to allow banks to participate in these schemes. Currently, banks are allowed to invest in equity-linked mutual funds, venture capital funds (VCFs) and equities to the extent of 20 percent of their NOF. It is proposed to allow banks to invest in REITS and InvITs within this umbrella limit. Detailed guidelines will be issued by end-May 2017.

**13. Countercyclical Capital Buffer -** The framework on countercyclical capital buffer (CCCB) was put in place by the Reserve Bank in terms of guidelines issued on February 5, 2015 wherein it was advised that the CCCB would be activated as and when the circumstances warranted, and that the decision would normally be pre-announced with a lead time of four quarters. The framework envisages the credit-to-GDP gap as the main indicator, which may be used in conjunction with other supplementary indicators, viz., the Credit-Deposit (C-D) ratio for a moving period of three years (given its correlation with the credit-to-GDP gap and GNPA growth), industrial outlook (IO) assessment index (with due note of its correlation with GNPA growth), and interest coverage ratio (noting its correlation with the credit-to-GDP gap).Based on the review and empirical testing of CCCB indicators, it has been decided that it is not necessary to activate CCCB at this point in time.

## III. Financial Markets

**14. Simplified Hedging Facility for Forex Exposure:** Draft Guidelines – On August 25, 2016, the Reserve Bank announced

Swabhimani Sahakari, Monthly, Publishing Date 5th, Posting Day 8th.
Posted at Bangalore PSO, Mysore Road, Bangalore 560026
Registered No. KA/BGW/1744/2017-19. RNI No. KARBIL - 2004/18001/Pages 28

a scheme to permit entities exposed to exchange rate risk, whether resident or non-resident, to undertake hedging transactions with simplified procedures up to a limit of USD 30 million at any given time. Draft guidelines on the proposed scheme are being placed in the public domain for wider feedback by mid-April, 2017.

**15. Introduction of Tri-party Repo:** Draft Framework - As recommended by the Working Group on Development of Corporate Bond Market in India (Chairman: Shri HR Khan), a draft policy framework for introduction of tri-party repo is being placed in the public domain by mid-April, 2017.

## IV. Payment and Settlement

**16. Introduction of Additional Settlement Batches for National Electronic Funds Transfer (NEFT) -** As envisaged in the document on Vision-2018 for Payment and Settlement Systems, the NEFT settlement cycle will be reduced from hourly batches to half hourly batches. Consequently, 11 additional settlement batches will be introduced at 8.30 am onwards, taking the total number of half hourly settlement batches during the day to 23. This will enhance the efficiency of the NEFT system and add to customer convenience. The starting batch at 8.00 am and closing batch at 7.00 pm shall remain the same, as hitherto. The return discipline shall also remain the same, i.e., B+2 hours (settlement batch time plus two hours) as per the existing practice.

**17. Merchant Discount Rate (MDR):** Rationalisation - The Reserve Bank issued a draft circular on "Rationalisation of Merchant Discount Rate (MDR) for Debit Card Transactions" on February 16, 2017. The extensive feedback received, including from the Government, banks, card networks, the Indian Banks' Association, the Payments Council of India, private entities and individuals are being examined. Until the issuance of final guidelines, the extant instructions on MDR for debit card transactions will continue to apply.

**18. Issuance and Operation of Pre-paid Payment Instruments (PPIs) in India -** The Reserve Bank had issued a draft circular on "Master Directions on Issuance and Operation of Pre-paid Payment Instruments (PPIs) in India" on March 20, 2017 with the deadline for comments as March 31, 2017. Based on the requests received from various quarters, the timeline for feedback/comments has been extended until April 15, 2017. The final guidelines for PPIs would be issued by end- May 2017.

## V. Financial Inclusion

19. Pilot Project on Financial Literacy: Centres for Financial Literacy (CFL) - The Reserve Bank is initiating a pilot project on financial literacy at the block level to explore innovative and participatory approaches to financial literacy. The pilot project will be commissioned in nine states across 80 blocks by Non-Government Organisations (NGOs) in collaboration with the sponsor banks. Six NGOs registered with the Depositor Education and Awareness Fund, viz., CRISIL Foundation, Mumbai; Dhan Foundation; Swadhaar Fin Access, Mumbai; Indian School of Micro Finance for Women (ISMW); Samarpit, Chhattisgarh; and the PACE Foundation have been selected to execute the pilot project in collaboration with banks. The pilot project would be executed with the following broad objectives: active saving and good borrowing; financial planning and goal setting; and, going digital and consumer protection. The CFLs would be set up under a common name and logo, "Money-wise Centre for Financial Literacy". The sponsor banks will enter into contracts with the identified NGOs within three months, i.e., by June 30, 2017. Thereafter, the NGOs will start operating the CFLs within three months of entering into contracts with banks.

**Apr 19, 2017:-** Au Small Finance Bank Limited commences operations. Au Small Finance Bank Limited has commenced operations as a small finance bank with effect from April 19, 2017. The Reserve Bank has issued a licence to the bank under Section 22 (1) of the Banking Regulation Act, 1949 to carry on the business of small finance bank in India. Au Financiers (India) Limited, Jaipur was one of the ten applicants which were issued in-principle approval for setting up a small finance bank, as announced in the press release on September 16, 2015.

Directions,Withdrwals,Penalties& Cancellation of Licences of Urban Co-operative Banks.

1) **Apr 03, 201 :** RBI cancels the licence of The Mercantile Urban Co-operative Bank Ltd., Meerut, Uttar Pradesh vide order dated March 30, 2017.
2) **Apr 03, 2017 :** RBI extends Directions issued to Gokul Co-operative Urban Bank Ltd., Secunderabad.
3) **Apr 13, 2017 :** RBI extends Directions to Jamkhed Merchants Co-operative Bank Ltd., Ahmednagar, Maharashtra.
4) **Apr 17, 2017 :** RBI extends Directions issued to the HCBL Co-operative Bank Ltd., Lucknow.
5) **Apr 24, 201 :** RBI imposed penaltyof ₹ 20,000/- (twenty thousand rupees only)on Bhadohi Urban Co-operative Bank Ltd., Bhadohi.
6) **Apr 26, 2017:** RBI imposes Monetary Penaltyof ₹ 5.00 lakh (Rupees Five Lakhs only) on Dr.PanjabraoDeshmukh Urban Co-operative Bank Ltd., Amravati.

**Source: www.rbi.org.in**

ಕೇಂದ್ರ ಕಛೇರಿ : ದೂರವಾಣಿ ಸಂಖ್ಯೆಗಳು : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ : ನಂ.246, 17 & 18ನೇ ಕ್ರಾಸ್ ಮಧ್ಯ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560055. ದೂ : 080–23449933/34.
ಬೆಂಗಳೂರು ವಿಭಾಗೀಯ ಕಛೇರಿ : ನಂ. 141, 1ನೇ ಮೈನ್, 1ನೇ ಕ್ರಾಸ್, ಡಾ.ರಾಜ್‌ಕುಮಾರ ರಸ್ತೆ, 1–ಕೆ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010. ದೂ : 080 23525546
ಮೈಸೂರು ವಿಭಾಗೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು – 570004. ದೂ: 0821 2332299
ಬೆಳಗಾವಿ ವಿಭಾಗೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ : 0831–2401551
ಕಲಬುರಗಿ ವಿಭಾಗೀಯ ಕಛೇರಿಯ : ನಂ. 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ – 585102. ದೂ: 08472–270222.

Edited, Printed and Published by Sharangouda G. Patil – Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010